ಶ್ರೀ ಎಂ. ರಾಮಪ್ಪ.—ಅದು ಕನ್ನಡದಲ್ಲಿದೆ. ಕನ್ನಡವನ್ನು ಓದುವುದಕ್ಕೆ ನನಗೆ ಬರಂವುದಿಲ್ಲ. ಇನ್ನು ಮೇಲೆ ತೆಲುಗಿನಲ್ಲೇ ಬರೆದುಕೊಂಡು ಬರಬೇಕಾಗುತ್ತದೆ.

ಅಧ್ಯಕ್ಷರು.—ಹಾಗಾದರೆ ನಿಮ್ಮ ಪರವಾಗಿ ನಾನೇ ಅದನ್ನು ಓದಿ ಹೇಳುತ್ತೇನೆ.

"ಪ್ರತಿ ವರ್ಷ ಮೇಲ್ದಂಡೆ ಕಾಲುವೆಯನ್ನು (ತುಂಗಭದ್ರಾ) ಮಾರ್ಚಿ ತಿಂಗಳಲ್ಲಿ ಮುಚ್ಚಲಾಗುತ್ತಿತ್ತು. ಆದರೆ ಈ ವರ್ಷ ಜಲಾಶಯದಲ್ಲಿ ಸಾಕಷ್ಟು ನೀರಿದ್ದರೂ ಕಾಲುವೆಯನ್ನು ಮುಚ್ಚಿರುವುದರಿಂದ ಪೈರುಗಳು ಒಣಗಿಹೋಗಿ ರೈತರಿಗೆ ನಷ್ಟವಾಗುವ ಪ್ರಸಂಗ ಬಂದಿದೆ. ಸರ್ಕಾರ ಕೂಡಲೇ ಈ ಕಾಲುವೆಯನ್ನು ಮುಚ್ಚದೇ ಪ್ರತಿ ವರ್ಷದಂತೆ ಮಾರ್ಚಿ ತಿಂಗಳವರೆಗೂ ನೀರನ್ನು ಬಿಡಲು ಸೂಕ್ತ ಆಜ್ಞೆ ಮಾಡಬೇಕಾಗಿ ವಿನಂತಿಸುತ್ತೇನೆ." ಎಂದು ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲವಾದ್ದರಿಂದ ಅವರಿಂದ ಉತ್ತರವನ್ನು ತರಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಈಗಾಗಲೇ ಮಾನ್ಯ ಸದಸ್ಯರು ಸಂಬಂಧಪಟ್ಟ ಸಚಿವರ ಜೊತೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದಾರೆಂದು ತಿಳಿದಿದ್ದೇನೆ.

ಶ್ರೀ ಎಂ. ರಾಮಪ್ಪ.—ನಾನು ಅವರ ಜೊತೆಯಲ್ಲಿ ಚರ್ಚೆ ನಡೆಸಿಲ್ಲ.

ಅಧ್ಯಕ್ಷರು.—ನಾನು ಉತ್ತರ ತರಿಸಿಕೊಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಪ್ಪನವರು

ಶ್ರೀ ಎಂ. ರಾಮಪ್ಪ:—ಮಾನ್ಯ ಮಲ್ಲಪ್ಪನವರು ನನ್ನ ಬಗ್ಗೆ ಏನೋ ಹೇಳುತ್ತಿದ್ದಾರೆ.

ಅಧ್ಯಕ್ಷರು.—ನೀವು ಇಬ್ಬರು ಮಾತನಾಡಿದ್ದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(೯) ಮೈಸೂರು ಸಿಟಿ ಕಾರ್ಪೊರೇಷನಿನಲ್ಲಿ ಟ್ಯಾಕ್ಸ್ ಇನ್‌ಸ್ಪೆಕ್ಟರ್‌ರವರ ಹುದ್ದೆಯನ್ನು ಒಂದನೇ ದರ್ಜೆಗೆ ಏರಿಸುವುದು

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಮೈಸೂರು ನಗರ ಕಾರ್ಪೊರೇಷನ್‌ನ ೨ನೇ ದರ್ಜೆ ಟ್ಯಾಕ್ಸ್ ಇನ್‌ಸ್ಪೆಕ್ಟರ್ ಹುದ್ದೆಯನ್ನು ಮೊದಲನೇ ದರ್ಜೆ ಟ್ಯಾಕ್ಸ್ ಇನ್‌ಸ್ಪೆಕ್ಟರ್ ವೇತನ ಶ್ರೇಣಿಗೆ ಏರಿಸಿ ತಕ್ಷಣ ಜಾರಿಗೆ ಕೊಡಬೇಕೆಂದು ಸರ್ಕಾರ ೨೦-೫-೧೯೬೫ ರಂದು ಆಜ್ಞೆಯನ್ನು ಹೊರಡಿಸಿದ್ದರೂ ಅದು ಇದುವರೆಗೂ ಜಾರಿಗೆ ಬಂದಿಲ್ಲ. ಇದರ ಬಗ್ಗೆ ಹೈಕೋರ್ಟ್ ಸಹ ಆದೇಶ ನೀಡಿದೆ ಎಂದು ತಿಳಿದುಬಂದಿದೆ. ಸರ್ಕಾರ ಇದರ ಬಗ್ಗೆ ಕೈಗೊಂಡಿರುವ ಕ್ರಮವೇನು ಎಂಬುದರ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯಲು ಇಚ್ಛಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಹೈಕೋರ್ಟ್ ಆದೇಶ ನೀಡಿದೆ ಎಂದು ತಿಳಿದು ಬಂದಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಹೈಕೋರ್ಟಿನ ಆದೇಶದ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆಂಬುದನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

೧-೦೦ ಪಿ. ಎಂ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾರ್ಪಣಾ ನಿರ್ಣಯದ ಮೇಲಿನ ಚರ್ಚೆ

† ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನೂ ಕುರಿತು ಮಾಡಿದ ಭಾಷಣ ಬಗ್ಗೆ ಮಂಡಿಸಿದ ಅಭಿನಂದನಾ ನಿರ್ಣಯವನ್ನು ಸ್ವಾಗತಿಸುತ್ತಾ ಒಂದೆರಡು ಮಾತನ್ನು ನಾನು ಹೇಳಬಯಸುತ್ತೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾನ್ಯ ರಾಜ್ಯಪಾಲರ ಬಹುತೇಕ ಭಾಷಣ ನಮ್ಮ ಇಂದಿನ ಬರಗಾಲ ಪರಿಸ್ಥಿತಿಯನ್ನು ಕುರಿತು ವಿಷದವಾಗಿ ಎಲ್ಲ ಅಂಶಗಳನ್ನೂ ಒಳಗೊಂಡಿದೆ. ಮುಖ್ಯವಾಗಿ ಎಲ್ಲರಿಗೂ ಉದ್ಯೋಗ ಮತ್ತು ಜಾನುವಾರುಗಳಿಗೆ ಮೇವು ಮತ್ತು ನೀರನ್ನೊದಗಿಸುವ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡಬೇಕೆಂದು ಅಪೇಕ್ಷಿಸುತ್ತೇನೆ. ಮುಖ್ಯವಾಗಿ ಬೇಸಾಯವನ್ನೇ ನಂಬಿಕೊಂಡಿರತಕ್ಕ ಜನತೆ ನೀರಿಲ್ಲದ ಕಾರಣ ಯಾವುದೇ ಬೇಸಾಯವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ. ನಮ್ಮ ಕೋಲಾರ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಇಡೀ ಜಿಲ್ಲೆಯಲ್ಲಿ ವ್ಯವಸಾಯ ಸ್ಥಗಿತಗೊಂಡಿದೆ. ಬಾವಿಗಳಲ್ಲಿ ನೀರಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಕೊಡುವುದಾದರೆ. ಆಂಧ್ರ ಪ್ರದೇಶದಲ್ಲಿ ಒಂದು ಸಾವಿರ ರೂಪಾಯಿಗಳನ್ನು ಕಟ್ಟಿಸಿಕೊಂಡು ಬಾವಿಗಳಿಗೆ ರಿಗ್ ಹಾಕಿಸತಕ್ಕ ಯೋಜನೆಯನ್ನು ಕೈಗೊಂಡಿದ್ದಾರೆ. ಇದರಿಂದಾಗಿ ಮಧ್ಯಮ ವರ್ಗದ ರೈತರಿಗೆ, ಹತ್ತಾರು ಜನ ಕೃಷಿ ಕಾರ್ಮಿಕರಿಗೆ ಕೆಲಸವನ್ನು ಒದಗಿಸಿಕೊಟ್ಟಂತಾಗಿದೆ. ಒಣ ಬೇಸಾಯವನ್ನು ಮಾಡತಕ್ಕ ಕೆಲವು ಪ್ರದೇಶದ ಬಗ್ಗೆ ನಾನು ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಅದು ಏನೆಂದರೆ, ಸಾವಿರಾರು ಕೆರೆಗಳಲ್ಲಿ ಹೂಳು ತುಂಬಿಕೊಂಡು ನೀರು ಹೆಚ್ಚು ನಿಲ್ಲುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಿ ಸುಮಾರು ೩ ಸಾವಿರಕ್ಕಿಂತಲೂ ಹೆಚ್ಚು ಕೆರೆಗಳಿವೆ. ಆ ಕೆರೆಗಳಲ್ಲಿ ತುಂಬಿಕೊಂಡಿರುವ ಹೂಳನ್ನು ರೈತರೇ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡಿ ಬೇರೆಯವರು ಹೂಳನ್ನು ತೆಗೆಯುವುದಕ್ಕೆ ಏನು ಹಣವನ್ನು ಕೊಡುತ್ತಿದ್ದೀರಿ ಅದರಲ್ಲಿ ಅರ್ಧ ಭಾಗ ಹಣವನ್ನು ಈ ರೈತರಿಗೇ ಕೊಟ್ಟರೆ ಒಂದುಕಡೆ ಇವರಿಗೆ ಅನುಕೂಲವಾಗುವುದರ ಜೊತೆಗೆ ಇನ್ನೊಂದುಕಡೆ ಈ ಹೂಳನ್ನು ರೈತರು ತಮ್ಮ ಜಮೀನುಗಳಿಗೆ ಹಾಕಿ ಫಲವತ್ತಾದ ಜಮೀನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೆಲವು ಮಾತುಗಳನ್ನು ಏನು ಹೇಳಿದ್ದಾರೆಂದರೆ, ರಾಜ್ಯದಲ್ಲಿ ಹಸಿರು ಕ್ರಾಂತಿಯನ್ನು ಹೆಚ್ಚಿಸುವ ಬಗ್ಗೆ, ಮತ್ತು ನಮ್ಮ ಆಡಳಿತ ಯಂತ್ರ ಚೆನ್ನಾಗಿ ಕೆಲಸ ಮಾಡುವ ಬಗ್ಗೆ, ಲಂಚರುಷುವತ್ತುಗಳನ್ನು ಕಡಿಮೆ ಮಾಡುವ ಬಗ್ಗೆ ಏನು ಮಾಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಲೋಕಾಯುಕ್ತ ಮಸೂದೆಯನ್ನು ಜಾರಿಗೆ ತಂದು ಒಂದು ಹೊಸ ಕಾರ್ಯಕ್ರಮವನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಹಾಕಿದ್ದೇವೆ ನಮ್ಮ ವಿರೋಧಪಕ್ಷದ ಮಾನ್ಯ ಮಿತ್ರರಿಗೆ ನಾನಾದರೂ ಒಂದು ಮಾತನ್ನು ಹೇಳುತ್ತೇನೆ ಮೌಲ್ಯಾಧಾರಿತ ಆಡಳಿತವನ್ನು ನಾವು ಮಾಡುತ್ತಿದ್ದೇವೆ ಎಂಬುದಕ್ಕೆ ನಿದರ್ಶನವಾಗಿ ಶಾಸಕರು, ಮಂತ್ರಿಗಳು ಮುಖ್ಯ ಮಂತ್ರಿಗಳು ಅಷ್ಟೇ ಅಲ್ಲ ರಾಜ್ಯದಲ್ಲಿರತಕ್ಕ ಯಾವುದೇ ಅಧಿಕಾರಿಯನ್ನು ಈ ಲೋಕಾಯುಕ್ತದ ವ್ಯಾಪ್ತಿಯಲ್ಲಿ ತಂದಿರುವುದು ಇಡೀ ಭಾರತದಲ್ಲೇ ಒಂದು ಹೊಸ ವಿಧಾನವಾಗಿದೆ. ಇದನ್ನು ನಾವೂ ನೀವೆಲ್ಲರೂ ಮೆಚ್ಚತಕ್ಕದ್ದು. ನಾವು ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಮಾತನಾಡುವಾಗ ನಮ್ಮ ವಿರೋಧಪಕ್ಷದ ಮಾನ್ಯ ಮಿತ್ರರು ಮೊಲ್ಮನೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಮತ್ತು ಕೆಲವು ಮಂತ್ರಿಗಳ ಮೇಲೆ ಆರೋಪವನ್ನು ಮಾಡಿದ್ದಾರೆ. ನಾನು ಇದನ್ನು ಏತಕ್ಕೆ ಪ್ರತ್ಯೇಕವಾಗಿ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನಮಗೆ ಸ್ವಾತಂತ್ರ್ಯ ಬಂದಮೇಲೆ ನಮ್ಮ ಸಂವಿಧಾನವನ್ನು ಕೆಲವರು ತಮ್ಮ ಮೂಗಿನ ನೇರಕ್ಕೆ ಎಳೆದುಕೊಂಡು ಹೋಗಲು ಕೆಲವು ತಿದ್ದುಪಡಿಗಳನ್ನು ಮಾಡುವ ಪ್ರಯತ್ನ ನಡೆಸಿದ್ದಾರೆ. ಅವರು ಈರೀತಿ ತಮ್ಮ ಮೂಗಿನ ನೇರಕ್ಕೆ ಸಂವಿಧಾನದ ತಿದ್ದುಪಡಿಯನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡರೆ ನಾವು ಈ ಕರ್ನಾಟಕ ರಾಜ್ಯದಲ್ಲಿ ಭ್ರಷ್ಟಾಚಾರದ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದೇವೆ ಅದನ್ನು ಒತ್ತಿ ಹೇಳಬೇಕಾಗಿದೆ ಮತ್ತು ಸ್ವಾಗತಿಸಬೇಕಾಗಿದೆ.

ಮಾನ್ಯ ಅಧ್ಯಕ್ಷರೇ, ಈವತ್ತಿನ ದಿವಸ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬಹಳ ಮುಖ್ಯವಾದ ಕೆಲವು ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ ಇಡೀ ಕರ್ನಾಟಕ ರಾಜ್ಯ ಸರ್ಕಾರದ ಎಲ್ಲ ವಿವರಗಳನ್ನು ರಾಜ್ಯಪಾಲರ ಭಾಷಣದಲ್ಲಿ ಕೊಡಬೇಕಾದ ಅವಶ್ಯಕತೆ ಇಲ್ಲ ಎಂದು ನಾನು ಹೇಳುತ್ತೇನೆ. ಇದರಲ್ಲಿ ಮುಖ್ಯವಾಗಿ ಇರತಕ್ಕಂಥಾದ್ದು ಜಿಲ್ಲಾ ಪರಿಷತ್ತು ಈ ಬಗ್ಗೆ ಬಹಳ ಕಳಕಳಿಯಿಂದ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದು ನಮ್ಮ ರಾಜ್ಯದಲ್ಲಿಯೇ ಅಲ್ಲ, ಇಡೀ ಭಾರತದಲ್ಲಿಯೇ ಪಂಚಾಯತ್

ಜಿಲ್ಲಾ ಪರಿಷತ್ತು ಒಂದು ಕ್ರಾಂತಿಕಾರಕವಾದ ಮಸೂದೆಯಾಗಿದೆ. ಈ ಮಸೂದೆಯನ್ನು ಈಗಾಗಲೇ ರಾಜ್ಯ ಸರ್ಕಾರವು ಒಪ್ಪಿಕೊಂಡಿದೆ. ಇದಕ್ಕೆ ರಾಷ್ಟ್ರಪತಿಯವರ ಒಪ್ಪಿಗೆಯೂ ಕೂಡ ಆಗಿರುತ್ತದೆ ಇದರಿಂದ ಕ್ರಾಂತಿಕಾರಕವಾದ ಒಂದು ಬದಲಾವಣೆ ಖಂಡಿತವಾಗಿಯೂ ಆಗುತ್ತದೆ ಎನ್ನುವುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಬಹಳ ದಿವಸಗಳಿಂದಲೂ ಹೇಳುತ್ತಿದ್ದ ಅಧಿಕಾರ ವಿಕೇಂದ್ರೀಕರಣ, ಏನು ಇದೆ, ಅದು ಈ ಒಂದು ಮಸೂದೆಯಿಂದ ಫಲಕಾರಿಯಾಗುತ್ತದೆ ಅಲ್ಲದೆ ಕರ್ನಾಟಕ ರಾಜ್ಯದಲ್ಲಿ ಇದು ಮೊದಲನೆಯ ಹೆಜ್ಜೆಯನ್ನು ಇಟ್ಟಂತಾಗುತ್ತದೆ. ಆದರೆ ಅಧಿಕಾರ ವಿಕೇಂದ್ರೀಕರಣವಾದರೆ ಕ್ರಾಂತಿಯಾಗುತ್ತದೆ ಎನ್ನುವ ಸಂಶಯವನ್ನು ಕೆಲವು ವಿರೋದಪಕ್ಷದ ಸದಸ್ಯರು ಮತ್ತು ವಿರೋದಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಇದು ಖಂಡಿತವಾಗಿಯೂ ಆರೀತಿಯಾಗುವುದಕ್ಕೆ ಸಾಧ್ಯವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ನಿನ್ನೆ ಬರಗಾಲದ ಬಗ್ಗೆ, ಕ್ಷಾಮದ ಬಗ್ಗೆ ಚರ್ಚೆ ನಡೆಯುತಕ್ಕಂಥ ಸಂದರ್ಭದಲ್ಲಿ ಮಾನ್ಯ ಬಂಗಾರಪ್ಪನವರು ಬಟ್ಟೆಗಳನ್ನು ಹಂಚತಕ್ಕಂಥ ವ್ಯವಸ್ಥೆಯ ಬಗ್ಗೆ ಬಹಳ ಹಗುರವಾಗಿ ಮಾತನಾಡಿದರು ಸೀರೆಗಳನ್ನು ಹಂಚತಕ್ಕಂಥದ್ದರ ಬಗ್ಗೆ ಒಂದು ಮಾತನ್ನು ಹೇಳಿದರು. ಆ ಮಾತನ್ನು ಕೇಳಿ ನನಗೆ ಖಂಡಿತವಾಗಿಯೂ ಬಹಳ ವ್ಯಥೆಯಾಯಿತು. ಅವರು ಏನು ಹೇಳಿದರು ಎಂದರೆ ಹೆಣ್ಣು ಮಕ್ಕಳು ಮಾನ ಅಪಹರಣವಾಗಬೇಕೆಂದರೆ ಇಂಥ ಸೀರೆಗಳನ್ನು ಉಟ್ಟುಕೊಳ್ಳುವುದರಿಂದ ಎಂಬುದಾಗಿ ಹೇಳಿದರು.

ಶ್ರೀ ಪಟಮಕ್ಕಿ ರತ್ನಾಕರ್ —ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಈ ಸೀರೆಗಳನ್ನು ಉಟ್ಟುಕೊಳ್ಳುವುದರಿಂದ ಹೆಣ್ಣು ಮಕ್ಕಳ ಮಾನ ಅಪಹರಣವಾಗುತ್ತದೆಂದು ಹೇಳಲಿಲ್ಲ. ಅವರು ಕೊಟ್ಟಿರತಕ್ಕಂಥ ಸೀರೆ ಬಹಳ ತೆಳುವಾಗಿದೆ, ಬಾಳಿಕೆ ಬರುವುದಿಲ್ಲವೆಂದು ಹೇಳಿದರು.

ಶ್ರೀ ಕೆ. ಎಂ ಕೃಷ್ಣಾರೆಡ್ಡಿ— ಅವರು ಹೇಳಿರತಕ್ಕಂಥ ಮಾತು ರೆಕಾರ್ಡ್ ಆಗಿರುತ್ತದೆ. ದಯವಿಟ್ಟು ತೆಗೆದು ನೋಡಿ.

(ಮಾನ್ಯ ಹೆಚ್. ಟಿ. ಕೃಷ್ಣಪ್ಪನವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಎಚ್. ಟಿ. ಕೃಷ್ಣಪ್ಪ— ಮಾನ್ಯ ಸದಸ್ಯರೇ ಅವರು ಏನು ಹೇಳುತ್ತಾರೋ ಅದನ್ನು ಹೇಳಲಿ ಅವರು ಹೇಳಿರತಕ್ಕಂಥದ್ದು ಸರಿಯೋ ತಪ್ಪೋ ಎನ್ನುವುದನ್ನು ನೀವು ಮಾತನಾಡುವಾಗ ಹೇಳಬಹುದು, ನಿಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ— ಸರ್ಕಾರ ಕೊಡತಕ್ಕಂಥ ಸೀರೆ ಮತ್ತು ಧೋತಿ, ಇದು ಉಡಲಿಕ್ಕೆ ಸಾಧ್ಯವೇ ಇಲ್ಲವೇ ಎಂದು ನಾವು ಪ್ರಶ್ನೆಯನ್ನು ಕೇಳಿದಾಗ ಅವರು ಹೇಳಿದರು. ಈ ಬಗ್ಗೆ ಎಲ್ಲ ರೀತಿಯಲ್ಲೂ ಉತ್ತಮವಾಗಿದ್ದು ಉಡಲಿಕ್ಕೆ ಚೆನ್ನಾಗಿರುತ್ತದೆ. ಇಷ್ಟು ಕಾಲದವರೆಗೂ ಇಷ್ಟು ಕಡಿಮೆ ದರದಲ್ಲಿ ಯಾರೂ ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಈ ಕಾರ್ಯಕ್ರಮ ಬಹಳ ಒಳ್ಳೆಯ ಕಾರ್ಯಕ್ರಮವಾಗಿದೆ ಎಂದು ಹೇಳಿದರು. ಕೆಲವು ಸೀರೆಗಳನ್ನೂ ಕೂಡ ಪ್ರದರ್ಶನ ಮಾಡಿ ಬಹಳ ಚೆನ್ನಾಗಿ ಇದೆ, ಅಂದವಾಗಿದೆ ಎಂದು ಹೇಳಿದರು. ಮಾನ್ಯ ಸದಸ್ಯರು ಬಹಳ ತೆಳುವಾಗಿದೆ ಎಂದು ಹೇಳಿದರು. ಕಷ್ಟಪಟ್ಟು ದುಡಿಯುತಕ್ಕಂಥ ರೈತ ಕಾರ್ಮಿಕರಿಗೆ ಇದು ಉಡಲಿಕ್ಕೆ ಬಹಳ ಶ್ರೇಷ್ಠವಾಗಿದೆ ಎಂದು ಹೇಳಿ, ಇದನ್ನು ಅವರು ಒಪ್ಪಿಕೊಂಡಿರುತ್ತಾರೆಂದು ಹೇಳಲು ನಾನು ಇಚ್ಛೆಪಡುತ್ತೇನೆ ಇನ್ನು ಅಕ್ಕಿ ವಿಚಾರದಲ್ಲಿ ಹೇಳುವುದಾದರೆ ಹಸಿರು ಕಾರ್ಡುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹಂಚತಕ್ಕಂಥ ವ್ಯವಸ್ಥೆಯಲ್ಲಿ ಕೆಲವು ಲೋಪದೋಷಗಳು ಇದೆ ಎಂದು ಪ್ರಸ್ತಾಪ ಮಾಡಿದ್ದಾರೆ ಅಕ್ಕಿ ವಿತರಣೆಯಲ್ಲಿ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಸರ್ಕಾರದಲ್ಲಿ ಲೋಪ ದೋಷಗಳು ಕಂಡು ಬಂದಿರುತ್ತದೆ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಯಾರು ಕೂಲಿಯನ್ನು ಮಾಡಿಕೊಂಡು ಜೀವನ ಮಾಡುತ್ತಾರೋ, ಕೃಷಿ ಕಾರ್ಮಿಕರು ಇರುತ್ತಾರೋ ಅವರೆಲ್ಲರಿಗೂ ಈ ಒಂದು ಕಾರ್ಯಕ್ರಮದ ಪ್ರಯೋಜನ ದೊರೆಯಬೇಕೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿರುತ್ತಾರೆ. ಅದರಂತೆ ಈ ಕಾರ್ಯಕ್ರಮವನ್ನು ತೆಗೆದುಕೊಂಡಂಥ ಸಂದರ್ಭದಲ್ಲಿ ಕಡಿಮೆ ಆದಾಯ ಇರತಕ್ಕಂಥವರಿಗೆ ಅಲ್ಲದೆ, ಬೇರೆಯವರಿಗೂ ಈ ಅನುಕೂಲ ಸಿಕ್ಕಿದೆ ಎನ್ನುವ ಆಪಾದನೆಯನ್ನು ಮಾಡಿ

ರುತ್ತಾರೆ. ಕೆಲವು ಕಡೆಗಳಲ್ಲಿ ಅಂಥಾವರು ತಾವೇ ಸ್ವಯಂಪ್ರೇರಿತರಾಗಿ ಬಂದು ಕಾರ್ಡುಗಳನ್ನು ವಾಪಸ್ ಕೊಡುತ್ತಿದ್ದಾರೆಂದು ತಹಸೀಲ್‌ದಾರರು ಹೇಳಿರುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ೨೦೦ ಕಾರ್ಡುಗಳನ್ನು ವಾಪಸ್ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಇಂಥ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಾಗ ಕೆಲವೊಂದು ಲೋಪ ದೋಷಗಳು ಆಗುತ್ತದೆ. ಆರು ಲಕ್ಷ ಕಾರ್ಡುಗಳನ್ನು ಎಲ್ಲ ಕೃಷಿ ಕಾರ್ಮಿಕರುಗಳಿಗೆ ಪಡಿತರ ವ್ಯವಸ್ಥೆಯಲ್ಲಿ, ಅಗ್ಗದ ದರದಲ್ಲಿ ಧಾನ್ಯಗಳು ಸಿಗುವಂಥೆ ಮಾಡುತ್ತೇವೆ ಎಂದು ಹೇಳಿರತಕ್ಕಂಥ ಆಶ್ವಾಸನೆ ರಾಜ್ಯಪಾಲರ ಭಾಷಣದಲ್ಲಿ ಸಿಕ್ಕಿದೆ. ಮತ್ತೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮುಖ್ಯವಾಗಿರತಕ್ಕಂಥ ಬರಗಾಲದ ಪರಿಸ್ಥಿತಿಯ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಈ ಬರಗಾಲದ ಬಗ್ಗೆ ಕೆಲವೊಂದು ಸಲಹೆಗಳನ್ನು ಕೂಡ ಸರ್ಕಾರಕ್ಕೆ ಮಾನ್ಯ ಸದಸ್ಯರುಗಳು ತಮ್ಮ ಮೂಲಕ ಕೊಡಬೇಕೆಂದು ಇಚ್ಛೆಪಡುತ್ತೇನೆ. ಮುಖ್ಯವಾಗಿ ಹೇಳಬೇಕಾದರೆ ಮಾರ್ಚ್ ತಿಂಗಳಿಂದ ಹಿಡಿದು ಸುಮಾರು ನಾಲ್ಕು ತಿಂಗಳ ಕಾಲ ಅಂದಾಜು ಮಾಡಿ ಸರಿಯಾದ ರೀತಿಯಲ್ಲಿ ಬರಗಾಲದ ಕೆಲಸ ಕಾರ್ಯಗಳನ್ನು ತೆಗೆದುಕೊಂಡರೆ ಬಹಳ ಅನಾನುಕೂಲವಾಗುತ್ತದೆ ಎಂದು ಹೇಳುತ್ತೇನೆ, ಮುಖ್ಯವಾಗಿ ಸಣ್ಣ ಸಣ್ಣ ಕೆಲಸಗಳನ್ನು ಪ್ರಾರಂಭ ಮಾಡಿದರೆ ಕೇವಲ ಅದು ೬-೭ ದಿವಸಗಳಲ್ಲಿಯೇ ಮುಗಿದುಹೋಗುತ್ತದೆ. ಕೃಷಿ ಕಾರ್ಮಿಕರಿಗೂ ಅನುಕೂಲವಾದಂತಾಗುತ್ತದೆ. ಆದ್ದರಿಂದ ನನ್ನ ಸಲಹೆ ಏನೆಂದರೆ ಸುಮಾರು ೧೦ ಲಕ್ಷ ೨೦ ಲಕ್ಷ ರೂಪಾಯಿಗಳ ಕೆಲಸ ಕಾರ್ಯಗಳನ್ನು ಒಂದು ಹೋಬಳಿಯಲ್ಲಿ ತೆಗೆದುಕೊಂಡರೆ ಸುಮಾರು ೨-೩ ಸಾವಿರ ಜನರಿಗೆ ಕೆಲಸವನ್ನು ಒದಗಿಸಿಕೊಡಲಿಕ್ಕೆ ಸಾಧ್ಯವಾಗುತ್ತದೆಂದು ನಮ್ಮ ಜಿಲ್ಲೆಯಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ನಮ್ಮ ಭಾಗದಲ್ಲಿ ಒಂದು ಸಣ್ಣ ನದಿ ಹರಿಯುತ್ತದೆ. ಇದಕ್ಕೆ ಒಂದು ಅಣೆಕಟ್ಟನ್ನು ಕಟ್ಟತಕ್ಕಂಥ ಕಾರ್ಯವನ್ನು ತೆಗೆದುಕೊಂಡರೆ ಸುಮಾರು ಆರು ಸಾವಿರ ಜನರಿಗೆ ಕೆಲಸವನ್ನು ಕೊಡಲು ಸಾಧ್ಯವಾಗುತ್ತದೆ. ಅಲ್ಲದೆ ನಮ್ಮ ಬಾಗೆಪಲ್ಲಿ ತಾಲ್ಲೂಕಿನಲ್ಲಿ ಸುಮಾರು ೫ ಸಾವಿರ ಜನರಿಗೆ ಕೆಲಸಕ್ಕೆ ಹಚ್ಚಲಿಕ್ಕೆ ಸಾಧ್ಯವಾಗುತ್ತದೆ. ಮತ್ತು ಇಲ್ಲಿರತಕ್ಕಂಥ ರೈತರಿಗೆ ನೀರಾವರಿ ವ್ಯವಸಾಯಕ್ಕೂ ಅನುಕೂಲ ಮಾಡಿ ಕೊಟ್ಟಂತಾಗುತ್ತದೆ. ಆದ್ದರಿಂದ ಇದರ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ಬರದ ಪರಿಸ್ಥಿತಿಯಲ್ಲಿ ಮತ್ತೊಂದು ಸಲಹೆಯನ್ನು ಈ ಸದನದ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮಧ್ಯಮ ವರ್ಗದ ರೈತರಿಗೆ ಸರ್ಕಾರದವರು ಸಾಲ ಸೌಲಭ್ಯವನ್ನು ಏನು ಕೊಟ್ಟಿದ್ದಾರೆ ಅದನ್ನು ಈಗ ಬರಗಾಲದ ಪರಿಸ್ಥಿತಿಯಿಂದ ಅವರು ವಾಪಸ್ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲದ ಕಾರಣ ಅವರ ಮೇಲೆ ವಿಧಿಸಿರತಕ್ಕಂಥ ಬಡ್ಡಿ. ಮತ್ತು ಸುಸ್ತಿ ಬಡ್ಡಿಯನ್ನು ಮನ್ನ ಮಾಡಬೇಕೆಂದು ಈ ಸದನದ ಮೂಲಕ ಮಾನ್ಯ ಸಹಕಾರ ಮಂತ್ರಿಗಳನ್ನು ಕೇಳಿಕೊಳ್ಳುತ್ತೇವೆ. ಇನ್ನು ಬರಗಾಲ ಪರಿಸ್ಥಿತಿಯಲ್ಲೇ ವಿದ್ಯುಚ್ಛಕ್ತಿಯ ಕೊರತೆಯೂ ಸಹ ಉಂಟಾಗಿದೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ವಿದ್ಯುಚ್ಛಕ್ತಿಯ ಕೊರತೆ ಇದೆ. ರಾಜ್ಯಪಾಲರೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವಿದ್ಯುಚ್ಛಕ್ತಿ ಉತ್ಪಾದನೆ ನಮ್ಮಲ್ಲಿ ಸಾಕಷ್ಟು ಇಲ್ಲ ಇದಕ್ಕೆ ಪರ್ಯಾಯ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಅವರು ಹೇಳಿದ್ದಾರೆ. ಈ ವಿದ್ಯುಚ್ಛಕ್ತಿ ಕೊರತೆಯಿಂದ ಇಡೀ ರಾಜ್ಯದಲ್ಲಿ ಬೇಸಾಯ ಸ್ಥಗಿತಗೊಂಡಿರುತ್ತದೆ. ಆದ್ದರಿಂದ ಕೂಡಲೇ ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಕಂಡುಹಿಡಿಯಬೇಕಾಗಿದೆ. ಅಲ್ಪ ಸ್ವಲ್ಪ ನೀರು ದೊರೆಯತಕ್ಕಂಥ ಸ್ಥಳಗಳಲ್ಲಿ ವಿದ್ಯುಚ್ಛಕ್ತಿಯನ್ನು ಪಂಪ್‌ಸೆಟ್ಟುಗಳಿಗೆ ಒದಗಿಸಿದ್ದೇ ಆದರೆ ಸರಿಯಾದ ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ಬಾವಿಗಳಿಗೆ ಬೋರ್ ಹಾಕಿಸಬೇಕೆಂದು ಹೇಳತಕ್ಕಂಥವರಿಗೆ ವಿದ್ಯುತ್ ಸರಿಯಾಗಿ ದೊರೆಯುತ್ತಿಲ್ಲ. ಆದ್ದರಿಂದ ಈ ವಿದ್ಯುತ್ ಕೊರತೆಯನ್ನು ನೀಗಲು ಪರ್ಯಾಯ ವ್ಯವಸ್ಥೆಯನ್ನು ಮಾಡಲೇಬೇಕು. ಇಲ್ಲದಿದ್ದರೆ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳುತ್ತದೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಕೊಡಲು ಇಚ್ಛೆಪಡುತ್ತೇನೆ.

೧-೩೦ ಪಿ. ಎಂ.

ಮಾನ್ಯ ಅಧ್ಯಕ್ಷರೇ. ರಾಜ್ಯಪಾಲರ ಭಾಷಣ ಖಂಡಿತವಾಗಿಯೂ ಸ್ವೀಕಾರಾರ್ಹವಾದುದಾಗಿರುತ್ತದೆ ಅವರು ನಮ್ಮೆಲ್ಲರ ಸಹಕಾರವನ್ನು ಕೋರಿದ್ದಾರೆ. ಕೇಂದ್ರ ಸರ್ಕಾರವನ್ನು ಈ ಬರಗಾಲ ಪರಿಸ್ಥಿತಿಯನ್ನು ಹೋಗಲಾಡಿಸಲು ರಾಜ್ಯ ಸರ್ಕಾರಕ್ಕೆ ೨೮೪ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ ಇದಕ್ಕೆ ನಿಮ್ಮ ಸಹಕಾರ ಬೇಕೆಂದು ಕೇಳಿದ್ದಾರೆ. ಇದಕ್ಕೆ ಮಾನ್ಯ ಬಂಗಾರಪ್ಪನವರು ಮತ್ತು

ವಿರೋಧ ಪಕ್ಷದವರೆಲ್ಲರೂ ಕೂಡ ಸಹಕಾರ ಕೊಡಬೇಕು. ಇದು ರಾಜಕೀಯ ಪ್ರಶ್ನೆ ಇಲ್ಲ. ಪಕ್ಷ ರಾಜಕೀಯವನ್ನು ಈ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಮರೆಯಬೇಕಾಗುತ್ತದೆ. ಬರಗಾಲ ಪರಿಸ್ಥಿತಿ ಬಂದಾಗ ಇಡೀ ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ಸದಸ್ಯರು ಒಂದು, ಎಲ್ಲಾ ರಾಜಕೀಯ ಪಕ್ಷಗಳೂ ಒಂದು ಎನ್ನತಕ್ಕಂಥ ರೀತಿಯಲ್ಲ ಕೆಲಸ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ನಮ್ಮೆಲ್ಲರ ಸಹಕಾರವನ್ನು ರಾಜ್ಯಪಾಲರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಕೊಟ್ಟು ಇಂತಹ ಬರಗಾಲ ಪರಿಸ್ಥಿತಿಯನ್ನು ಯುದ್ಧದೋಪಾದಿಯಲ್ಲಿ ಎದುರಿಸಲು ಸಕಲ ಸಜ್ಜು ಮಾಡಿಕೊಳ್ಳಬೇಕೆಂದು ಹೇಳಿ, ರಾಜ್ಯಪಾಲರು ಈ ವಂದನಾ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ.

ಚೇರ್‌ಮನ್.—ಇನ್ನು ಶ್ರೀ ಮೊಹಮ್ಮದ್ ಲೈಕುದ್ದೀನ್ ಅವರು ಮಾತನಾಡುತ್ತಾರೆ.

ಚೇರಮನ್. ಮಾನ್ಯ ಸದಸ್ಯರು ಒಂದು ನಿಯಮವನ್ನು ಪಾಲನೆ ಮಾಡಬೇಕಾಗುತ್ತದೆ. ಅವರ ಹೆಸರು ಕೊಟ್ಟಾದ ಮೇಲೆ, ಅವರ ಸರದಿ ಬರುವುದಕ್ಕೆ ಮುಂಚೆ ಅವರವರ ಜಾಗದಲ್ಲಿ ಕೂತಿರಬೇಕು. ಅರ್ಧಗಂಟೆಯಾದರೂ ಅವರು ಕಾದು ಕುಳಿತಿರಬೇಕಾಗುತ್ತದೆ ಇದಕ್ಕೆ ಅವರೆ ಜವಾಬ್ದಾರರಾಗಿರುತ್ತಾರೆ.

SRI MOHMED LIAQUDDIN BURANUDDIN.—Mr. Speaker, Sir, I am sorry that the muslims are not mentioned in the Gevernor s Address and their names are not mentioned.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಲಿ ....

(ಗೊಂದಲ)

ಚೇರ್‌ಮನ್.—ಶ್ರೀ ನಾರಾಯಣಕುಮಾರ್‌ರವರೇ, ನಿಮ್ಮ ಪ್ರಶ್ನೆ ನನಗೆ ಅರ್ಥವಾಗಿದೆ. ಆದರೆ ಈ ಸಭೆಯ ಕಾರ್ಯಕಲಾಪಗಳು ಇಂಗ್ಲೀಷ್ ಅಥವಾ ಕನ್ನಡ ಎರಡು ಭಾಷೆಯಲ್ಲಿ ನಡೆಯಬಹುದು ಅಂತ ಇದೆ. ಮಾನ್ಯ ಸದಸ್ಯರಿಗೆ ಕನ್ನಡ ಭಾಷೆ ಬಾರದೇ ಇರುವುದರಿಂದ ಅವರು ಇಂಗ್ಲೀಷ್‌ನಲ್ಲಿ ಮಾತನಾಡುವುದಕ್ಕೆ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಜಿ. ನಾರಾಯಣಕುಮಾರ್.—ವ್ಯಾಟಿಕನ್ ನಿಂದ ಬಂದಿರುವ ಪೋಪ್ ಪಾಲ್‌ರವರು ಕನ್ನಡ ಕಲಿತು ಮಂಗಳೂರಿನಲ್ಲಿ ಭಾಷಣ ಮಾಡಲಿದ್ದಾರೆ. ಇವರಿಗೆ ಕಲಿತುಕೊಳ್ಳಲಿಕ್ಕೇನು ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ವ್ಯಾಟಿಗನ್ ಸಿಟಿಗೆ ಹೋಗುವುದು ಒಳ್ಳೆಯದು, ಅಲ್ಲಿ ಕನ್ನಡ ಸಿಗುತ್ತದೆ.

ಚೇರ್‌ಮನ್.—ಶ್ರೀ ನಾರಾಯಣಕುಮಾರ್‌ರವರೇ, ನಿಮ್ಮ ಆಕ್ಷೇಪಣೆ ಪ್ರಾಮಾಣಿಕವಾದುದೆಂದು ನನಗೆ ಅರ್ಥವಾಗುತ್ತದೆ. ಆದರೆ ನಿಯಮಾವಳಿಗಳ ಪ್ರಕಾರ ಸಭೆಯ ಕಾರ್ಯಕಲಾಪಗಳು ನಡೆಯಬೇಕಾಗುತ್ತದೆ. ನಿಮ್ಮ ಆಕ್ಷೇಪಣೆಯನ್ನು ಈಗಾಗಲೇ ನಾನು ತೀರ್ಮಾನ ಕೊಟ್ಟು ತಳ್ಳಿಹಾಕಿದ್ದೇನೆ, ಶ್ರೀ ಮಹಮದ್ ಲೈಕುದ್ದೀನ್ ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ.

SRI MOHAMED LIAQUDDI BURANUDDIN.—Mr. Speaker, because I do not know Kannada language, I am handicapped to express myself in Kannada. I may kindly be excused. But it does not mean that I do not love Kannada. I love Kannada more than Mr. Narayan kumar.

ಶ್ರೀ ಜಿ ನಾರಾಯಣಕುಮಾರ್.—ಮಾನ್ಯ ಸದಸ್ಯರ ಕನ್ನಡ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ನಾನು ಹೊರಗೆ ಹೋಗಬೇಕಾಗುತ್ತದೆ.

ಶ್ರೀ ಎಂ. ರಘುಪತಿ.—ಶ್ರೀಮಾನ್ ನಾರಾಯಣಕುಮಾರ್ ಅವರಿಗೆ ಇರುವ ಕನ್ನಡಾಭಿಮಾನ ಎಲ್ಲರಿಗೂ ಗೊತ್ತಿರುವಂತಾದ್ದು. ಈ ಸಂದರ್ಭದಲ್ಲಿ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇ

ನೆಂದರೆ, ನೀವು ನಿಮ್ಮ ಪ್ರತಿಭಟನೆಯನ್ನು ವ್ಯಕ್ತಮಾಡಿದ್ದೀರಿ ಅದನ್ನು ಮಾನ್ಯ ಸಭಾಧ್ಯಕ್ಷರು ತಮ್ಮ ಗಮನಕ್ಕೆ ತೆಗೆದುಕೊಂಡಿದ್ದಾರೆ. ಆದ್ದರಿಂದ ಇದನ್ನು ಇಲ್ಲಿಗೇ ಬಿಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಚೇರ್‌ಮನ್.—ಇದರ ಬಗ್ಗೆ ಪುನಃ ಚರ್ಚೆ ಮಾಡುವುದು ಬೇಡ, ಇದು ಬಹಳ ಹೆಚ್ಚೇ ಆಯಿತೆಂದು ನನಗನ್ನಿಸುತ್ತದೆ, ಈ ಸಭೆಯ ಕಾರ್ಯಕಲಾಪಗಳನ್ನು ನಡೆಸತಕ್ಕ ಕಾಲದಲ್ಲಿ ಯಾವ ವಿಷಯವನ್ನು ನಾವು ಎಷ್ಟು ಗಂಭೀರವಾಗಿ ಚರ್ಚೆ ಮಾಡಬೇಕು ಎಂಬುದರ ಬಗ್ಗೆ ನಾವುನಾವೇ ಮನಸ್ಸಿಗೆ ಅರ್ಥ ಮಾಡಿಕೊಂಡು ನಡೆಯಬೇಕು.

ಶ್ರೀ ಜಿ. ನಾರಾಯಣಕುಮಾರ್.—ನಾನು ಅಡ್ಡಿಯನ್ನು ಉಂಟು ಮಾಡುತ್ತಿಲ್ಲ, ವಿರೋಧ ಪಕ್ಷದವರೇ ಅಡ್ಡಿ ಮಾಡುತ್ತಿರುವುದು.

ಚೇರ್‌ಮನ್.—ನಾನು ಅವರಿಗೂ ಹೇಳುತ್ತಿಲ್ಲವೆಂದು ದಯವಿಟ್ಟು ತಿಳಿದುಕೊಳ್ಳಬೇಡಿ. ನಾನು ಒಂದು ಸಾರಿ ಈ ಬಗ್ಗೆ ತೀರ್ಮಾನ ಕೊಟ್ಟಮೇಲೆ ಪುನಃ ಅದನ್ನು ಪ್ರಶ್ನೆ ಮಾಡಬಾರದು, ಒಂದು ವೇಳೆ ನೀವು ಸಭಾತ್ಯಾಗ ಮಾಡುತ್ತೇನೆ ಎಂದು ಹೊರಗೆ ಹೋದರೆ ಅದು ನಿಯಮದ ಉಲ್ಲಂಘನೆ ಮಾಡಿದ ತಪ್ಪು ಕಾರ್ಯವಾಗುತ್ತದೆ, ನಿಯಮಾವಳಿಯಲ್ಲಿ ಕನ್ನಡ ಅಥವಾ ಇಂಗ್ಲೀಷ್ ಯಾವುದಾದರೂ ಒಂದು ಭಾಷೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಇದೆ. ಅವರಿಗೆ ಕನ್ನಡ ಗೊತ್ತಿಲ್ಲದೇ ಇರುವುದರಿಂದ ಕನ್ನಡದಲ್ಲೇ ಮಾತನಾಡಿ ಎಂದು ಒತ್ತಾಯ ಮಾಡುವುದು ಔದಾರ್ಯರಹಿತವಾದ ಕಾರ್ಯವಾಗುತ್ತದೆ.

ಶ್ರೀ ಜಿ ನಾರಾಯಣಕುಮಾರ್.—ಮುಂದಿನ ಸಭೆಗಾದರೂ ಅವರು ಕನ್ನಡ ಕಲಿತುಕೊಂಡು ಬಂದು ಮಾತನಾಡಬೇಕೆಂದು ಆದೇಶ ಕೊಡುತ್ತೀರಾ ಸ್ವಾಮಿ ?

ಚೇರ್‌ಮನ್.—ಶ್ರೀ ಲೈಕುದ್ದೀನ್‌ರವರೇ, ನೀವು ಮುಂದುವರೆಸಿ.

SRI MOHAMMAD LAIQUDDIN BURANUDDIN (Bidar).—Mr. Speaker, I am sorry to note that the Governor's Address does not mention anything about the amelioration of the conditions of the muslims in the spheres of education and social welfare. No doubt that there is a mention in the Governor's Address that a Minorities Development Corporation will be set up with a share capital of Rs. 1 crore but the pertinent question here is: for whose benefit it is going to be set up ? Is it for the benefit of either the muslims, the christians or the parsies i.e., the religious minorities or for the linguistic minorities—such as Telugu Tulu, Marathi Gujarathi and Konkani. I am submitting to you because our own Hon'ble High Court has described Konkanis also as minorities and a Medical College at Manipal has been treated as a minority institution. So I urge the Government that there should be specific instructions that the beneficiaries of this Minorities Development Corporation should invariably be Muslims, Christians and Parsis. I also think that the Government's intention is the same. You know, Sir, that the muslims in our State are more backward educationally, they are poor and they do not have any share in trade, commerce and industries. Majority of muslims are rikshaw pullers, Hamals, fruit vendors and vegetable vendors So this backward community which is having more than 80 lakhs population in Karnataka should be given first treatment and their conditions of living should be at least brought on par with the other

communities in the State. In order to fill up this gap, this Corporation is being set up. The rules should be so framed that the muslims get the major share of benefits. I request the Government to take appropriate measures for the amelioration of Muslims in various fields. The present Janata Government has constituted a Minorities Commission and that Commissiou has submitted an interim Rsport. There is no mention of that report in the Governor's Address. I will point out certain demands which have been made by the Commission itself. For muslims, they have suggested 74 demands, for christains they have suggested 28 demands and for the Jains they have suggested 16 demands. I will bring to the notice of the Chair a few demands which have been made by the Minorities Commission.

1 Nominations of more muslims as public prosecutors Government Pleaders etc.

2 Police force and machinery tobe made cosmopolitan by giving due representation to the muslims.

3 District Magistrates and Superintendents of Police should be held responsible for communal violence.

4 More opportunities should be given to the Muslims in the different fields......

ಶ್ರೀ ಕೆ.ಹೆಚ್. ಶ್ರೀನಿವಾಸ್.—ಸ್ವಾಮಿ, ನನ್ನದೊಂದು ಕ್ರಿಯಾಲೋಪ, ಶ್ರೀಮಾನ್ ಚಾಲಪ್ಪನವರು ಸಿಂಧ್ಯಾರ ಜೊತೆ ಸಮಾಲೋಚನೆಯಲ್ಲಿದ್ದಾರೆ ಭಾಷಣ ಮಾಡುತ್ತಿರುವ ಸದಸ್ಯರ ಮಾತಿನ ಕಡೆ ಗಮನ ಕೊಟ್ಟಿಲ್ಲ.

ಅಧ್ಯಕ್ಷರು.—ಬೇರೆ ಮಂತ್ರಿಗಳಿದ್ದಾರಲ್ಲ. ಮಂಜುನಾಥ್ ಇದ್ದಾರಲ್ಲ. ಚಾಲಪ್ಪನವರೂ ಇಲ್ಲೇ ಇದ್ದಾರಲ್ಲ.

ಶ್ರೀ ಜಿ. ಮಾದೇಗೌಡ.—ನಾನೂ ಇದರ ಬಗ್ಗೆ ಮಾತನಾಡಬೇಕಾಗಿದೆ. ರಾಜ್ಯಪಾಲರ ಭಾಷಣದ ಮೇಲೆ ಮುಖ್ಯಮಂತ್ರಿಗಳು ಸಂಪ್ರದಾಯದಂ ಉತ್ತರ ಕೊಡತಕ್ಕಂಥದ್ದು ಇದುವರೆಗಿನ ಪರಿಪಾಠ. ಅವರು ಇಲ್ಲಿಲ್ಲ. ಹಾಗಾದರೆ ಉತ್ತರ ಕೊಡುವವರು ಬೇರೆ ಯಾರು. ಇದನ್ನು ತಾವು ತಿಳಿಸಬೇಕು

ಚೇರ್ಮನ್.—ಯಾರು ಉತ್ತರ ಕೊಡುವವರು ಎಂಬುದನ್ನು ಮುಂದಾಗಿಯೇ ಸರ್ಕಾರ ತಿಳಿಸಬೇಕೆಂದು ಕಡ್ಡಾಯ ಮಾಡುವುದಕ್ಕೆ ನನಗೆ ಅಧಿಕಾರವಿಲ್ಲ. ಈಗ ಮುಖ್ಯ ಮಂತ್ರಿಗಳು ಇಲ್ಲಿಲ್ಲ, ನಿಜ. ಆದರೆ ಬೇರೆ ಮಂತ್ರಿಗಳು ಸದಸ್ಯರು ಮಾತನಾಡುವುದನ್ನು ನೋಟ್ ಮಾಡಿಕೊಂಡು ಉತ್ತರ ಕೊಡುವವರಿಗೆ ಅದನ್ನು ತಲುಪಿಸುತ್ತಾರೆ. ಒಂದು ಪಕ್ಷ ಮಂತ್ರಿಗಳು ಉತ್ತರ ಕೊಡುವ ಸಮಯದಲ್ಲಿ ಮಹತ್ವ ವಿಚಾರವನ್ನು ಪ್ರಸ್ತಾಪಿಸದೇ ಇದ್ದರೆ ಆಗ ಸದಸ್ಯರು ಮಂತ್ರಿಗಳನ್ನು ಪ್ರಶ್ನಿಸಲು ಅವಕಾಶವಿದೆ. ಅದಕ್ಕೆ ಅವರಿಗೆ ಹಕ್ಕಿದೆ. ಇದನ್ನು ರಕ್ಷಣೆ ಮಾಡಲಾಗುತ್ತದೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ತಮಗೂ ಗೊತ್ತಿದೆ. ನಮ್ಮ ಬಗೆಯ ಸಾಂಸದೀಯ ವ್ಯವಸ್ಥೆಯಲ್ಲಿ ಎರಡು ವಿಧಾನಗಳು ಬಹಳ ಮಹತ್ವದವು. ಅದರಲ್ಲಿ ಒಂದನೆಯದು ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಚರ್ಚೆ. ಅದರಲ್ಲಿ ಸರ್ಕಾರ ತನ್ನ ಕಾರ್ಯನೀತಿಗಳ ಬಗ್ಗೆ ವೈಖರಿ ಬಗ್ಗೆ ಸಮಗ್ರವಾಗಿ ಚರ್ಚೆಗಿಡತಕ್ಕಂಥ ಸಂದರ್ಭ ಅದು. ಈ ಸಭೆಗೆ ನಿಜವಾಗೂ ಮಹತ್ವವಿದ್ದರೆ ಅನಿವಾರ್ಯವಾಗಿ ಈ ಸದನದ ಹೊರಗಿರುವ ಮಂತ್ರಿಗಳನ್ನು ಬಿಟ್ಟು ಉಳಿದವರನ್ನು ಇಲ್ಲಿರುವಂತೆ ಮಾಡಬೇಕು. ಬೇರೆ

ಯಾರೋ ಮಂತ್ರಿಗಳು ಬರೆದುಕೊಂಡು ಇನ್ನೊಬ್ಬರು ಉತ್ತರ ಕೊಡುತ್ತಾರೆಂದು ಅದರಲ್ಲಿ ಏನು ಅರ್ಥ ಇದೆ. ಮಹತ್ವ ಇಲ್ಲವೆಂದಾದರೆ ಸಭೆಯನ್ನು ಕ್ಲೋಸ್ ಮಾಡಿಬಿಡಿ. ನಮ್ಮದೇನೂ ಅಭ್ಯಂತರವಿಲ್ಲ. ಅಧಿಕಾರಿಗಳ ಗ್ಯಾಲರಿಯನ್ನು ಬೇಕಾದರೆ ನೋಡಿ. ಅಲ್ಲಿಯೂ ಒಬ್ಬ ಜವಾಬ್ದಾರಿವಂಥ ಅಧಿಕಾರಿ ಕಾಣಿಸುತ್ತಿಲ್ಲ. ಮಂತ್ರಿಗಳೇನೂ ಅಭ್ಯಾಸ ಮಾಡಿ ಉತ್ತರಿಸುವುದಿಲ್ಲ. ಆಫೀಸರ್‌ಗಳು ಬರೆದುಕೊಟ್ಟಿದ್ದನ್ನು ಉತ್ತರವೆಂದು ಓದುತ್ತಾರೆ. ಆಫೀಸರ್‌ಗಳೂ ಇಲ್ಲಿಲ್ಲ. ಜಾಲಪ್ಪನವರದು ಏನು ಜಾಲವೊ ಗೊತ್ತಿಲ್ಲ ಅವರು ಆ ಕಡೆ ಕೆ ಎಸ್.ಆರ್‌ಟಿ.ಸಿ. ಕಡೆ ಹೋಗಿದ್ದಾರೆ. ಈ ತರಹ ತಿರಸ್ಕಾರದಿಂದ ಈ ಮನೆಯನ್ನು ನೋಡಿದರೆ, ಮಂದನಾ ನಿರ್ಣಯ ಅಷ್ಟೇ ತಾನೆ ಎಂಬ ಮನೋಭಾವದಿಂದ ಅವರು ನೋಡಿದರೆ ಬೆಲೆಯೇನೂ ಉಳಿಯದು. ಬೆಲೆ ಇಲ್ಲದಿದ್ದರೆ ನಾವ್ಯಾಕೆ ಬೆಲೆ ಕೊಡಬೇಕು. ಆ ಸ್ಥಾನದಲ್ಲಾದರೂ ಸರ್ಕಾರವನ್ನು ಎಳೆದು ತನ್ನಿ.

ಶ್ರೀ ಆರ್. ಎಲ್. ಜಾಲಪ್ಪ.—ತಿರಸ್ಕಾರದಿಂದ ನೋಡಬೇಕೆಂಬ ಭಾವನೆ ಖಂಡಿತಾ ಇಲ್ಲ. ಮಾನ್ಯ ಸದಸ್ಯರು ಮಾತನಾಡುವಾಗ ಯಾವುದು ಮುಖ್ಯವೊ ಅದನ್ನು ಉತ್ತರಿಸುವವರಿಗೆ ಬರೆದು ಕೊಡುತ್ತೇನೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಈ ರೀತಿಯ ಮನೋಭಾವವನ್ನು ಖಂಡಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಶ್ರೀ ಕೆ.ಹೆಚ್. ಶ್ರೀನಿವಾಸ್ ಸಭಾತ್ಯಾಗ ಮಾಡಿದರು).

SRI MOHAMMAD LIAQUDDIN BURANUDDIN.—Mr. Speaker, I urge the Government for creating more opportunities to the muslims in the field of Commerce, trade and industry. Muslims, who are unemployed be given loans whithout surety. Urdu may be made second languge of the State. Income limit should be raised from Rs. 4,800 to Rs. 5000 for classification as BCM. Muslims should have a separate entry in the Roster system also. In Anganwdis and Balawadis also there should be appointments for minorities. Similarly separate Urdu Directorate should have been mentioned but it has not been mentioned in the Governors Address, Sir.

I urge the Government that all those demands which have been set forth by the Minorities Commission in the interim report should have been given due prominence in the Governor's Address but the Government has not taken any notice of the Muslims' problems in particular and other minorities in general such as Christians, Jains, Buddhists etc.

Coming to the linguistic minorities, I have nothing to say about Kannada Sammelan and its celebrations with grate magnitude and with great pomp and glory. Whatever opinion has been expressed by my leader Sri Bangarappa is enough for me. I am of the opinion that if Kannada is given primacy and is given due recognition, I am very much happy. We do not have any objection for the flourishment of Kannada language. But my request is that it should not be at the cost of Urdu and other linguistic minorities languages. As regards flourishment of

Urdu, no step has been taken by the Government in this regard and there is no clear policy coming forth. As regards the distribution of text-books. particularly Urdu text-books, it is a sorry state of affairs It is the same in other Districts also as pointed out by hon. Member Smt. Mukhtarunnisa Begum and Sri M.L. Ustad, So far no Urdu text books have been distributed to the students. There has been no teaching so far. Next month they are going to face Annual Examinations and there is no guarantee they will be successful, In this way one precious year of the school going children has been wasted. So I urge the Government that textbook distribution work should be taken up at least one month before the start of the academic year. As it is admitted by Sri Raghupathy, the Urdu Textbooks are under print and the work has been given to some Hyderabad Press. It shows that the Government is not having any affection towards the urdu language and the do not want the upliftment of Urdu speaking population of Karnataka State. Coming the drought, I would like to state here that in our State the drought is widespread and the measures taken by the Government are not sufficient. It has appeared in the news papers, particularly in Deccan Herald front page that at least 6 lakhs of population has been migrated to the neighbouring state from Bijapur. I learn that there is continuous migration from Bijapur to Maharastra which is quite adjacent to that district. It shows the lethargy and lack of enthusiam by the Government officials who are in charge of implementation of the drought work in the State Now, I urge the Government that if a person leaves his home, it is not a small thing and particularly population migration is a very sorry state of affairs. In our district, particulary, similar is the thing and it is stated in the report that Bidar is not drought affected. But, I am saving that the Bidar district condition is like the other districts. In Bidar, water table has gone very much low and in the irrigation wells, the water table has gone down. In the month of January it has gone to 10' to 15' deep. When the water table is going down day by day there will be crisis in the months of February, March and April. It is an alarming situation and proper measures should be taken in drought relief matters.

MR. CHAIRMAN.—You have taken sufficient time. As a matter of fact, for your information, there are nearly 24 persons still to speak. Please conclude.

SRI MOHAMED LIAQUDDIN BURANUDDIN.—As regards my speech I will cut down and I will try my best to close my speech. As you know, half of the population, nearly 2 crores and 10 lakhs people are rought affected and majority of them are either agricultural labourers

small farmers or marginal farmers. More efforts are necessary in this hour of misfortune and natural calamity. In our district there is only one major irrigation project i.e., Karanja project. Another project is Chulkinala. In the last year, only Rs. 2 crores have been provided for the Karanja project. We had demanded that at least Rs. 15 crores should be provided in order to make payment of compensation to those whose lands have been acquired or going to be submerged. Only Rs. 2 crores have been provided. It shows that for the Hyderabad-Karnataka area which is back-ward, there are no proper steps taken. Even for the regural budgeted schemes and plans like the Karanja and Chulkinala, I urge the Government that at least Rs. 15 crores should be earmarked and the work should be started immediately. Since one year it has come to stand-still and there is no work in the Karanja project. As regards other irrigation project, it facilitates the Government to provide the work to the farmerss agricultural labourers and people in other drought affected areas. It has come to the notice that nearly 30 Lakh Hectares are to be taken under irrigation and those irrigation potential should be utilised by providing more funds. Unless these irrigation projects are completed the relief work also cannot be given to the villagers. Particularly, the agriculturist's profession is not a profession. In my opinion it is just like a social service. It is not fetching any profit to the farmers and the economy of the village has been shattered and the rural sections are becoming more poor and their problems are more complicated. In order to lift the economy of the villages, it is quite necessary that alternative economy should be provided for the villagers by creating village industries, hand-loom and khadi, etc , Unless alternative economy is created the villagers cannot come up and the agricultural professionals will not get any progress in the earning of their bread Now I would like to point out a few things regarding water supply to Bidar town. The Manjra water supply scheme which was implemented 15 years ago, was meant only for 50,000 population. Now, the population of Bidar town has gone up to more than one lakh and there is no other scheme available. Naturally we have to see another scheme for drinking water supply to the town. In the last budget Rs. 6½ Crores were provided, but so far no work has been started. Only the over-head tank which was to be constructed, is left without completion. I request that the scheme for supply of water should be completed by taking up this provision of Rs. 6½ Crores. I would like to point out regarding IRDP, DPAP, RLEGP schemes. In this also Government officials are taking corruption from the persons for issuing ration cards. They are taking corruption

for the allotment of house-sites. Unless the corruption is rooted out in the lower level in the implementation of NREP, DPAP, RLEGP schemes, the relief cannot be fruitful for the persons who are now suffering from the drought, I am very much thankful to the Hon. Speaker for having provided me an oppfrtunity to speak a few words on Governor's Address.

ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗ) — ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ಸಮರ್ಥಿಸುತ್ತಾ ಮತ್ತು ನಮ್ಮ ಸರ್ಕಾರ ಕೈಗೊಂಡಿರುವಂಥ ಕೆಲವೊಂದು ನೀತಿಗಳನ್ನು ಸಮರ್ಥಿಸುತ್ತಾ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ಪರಿಸ್ಥಿತಿಯಿದ್ದರೂ ಸಹ ಕೆಲವೊಂದು ಯೋಜನೆಗಳನ್ನು ಹಾಕಿಕೊಳ್ಳ ಬೇಕೆಂದು ವಿಚಾರ ಮಾಡುತ್ತಿದೆ. ಇದರ ಜೊತೆಗೆ ಬರಗಾಲಕ್ಕೆ ಒಳಗಾದ ಪ್ರದೇಶಗಳಲ್ಲಿರುವ ಬಡವರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ಸಾಕಷ್ಟು ಕೆಲಸಗಳನ್ನು ಒದಗಿಸುವಂಥ ಕೆಲಸವನ್ನು ನಮ್ಮ ರಾಜ್ಯಸರ್ಕಾರ ಮಾಡುತ್ತಿದೆ ಇದಕ್ಕೆ ಕೇಂದ್ರ ಸರ್ಕಾರದಿಂದಲೂ ಸಹ ಸಾಕಷ್ಟು ಸಹಾಯ ಬೇಕಾಗುತ್ತದೆ. ನಾನು ಒಂದು ಸಲ ಶ್ರೀ ಬೂಟಾಸಿಂಗ್ ಅವರ ಭಾಷಣವನ್ನು ಕೇಳಿದೆ ಆ ಸಂದರ್ಭದಲ್ಲಿ ಅವರು ಹೇಳಿದ್ದೇನೆಂದರೆ, ನಮ್ಮ ರಾಜ್ಯಕ್ಕೆ ಫ್ರೀಯಾಗಿ ಫುಡ್-ಗ್ರೈನ್ಸ್ ಕೊಡುತ್ತೇವೆಂದು ಹೇಳಿದರು. ಇದನ್ನು ಕೇಳಿ ನನಗೆ ದುಃಖವಾಯಿತು. ಕೇಂದ್ರಸರ್ಕಾರದವರು ರಾಜ್ಯ ಸರ್ಕಾರಕ್ಕೆ ಫುಡ್-ಗ್ರೈನ್ಸ್ ಅನ್ನು ಫ್ರೀ ಆಗಿ ಕೊಡುತ್ತೇವೆಂದು ಹೇಳುವಾಗ, 'ಫ್ರೀ' ಎಂಬ ಶಬ್ದವನ್ನು ತೆಗೆದುಹಾಕಿದರೆ ಒಳ್ಳೆಯದೇನೋ ಎಂದು ನನ್ನ ಮನಸ್ಸಿಗೆ ಅನಿಸುತ್ತಿದೆ. ಏಕೆಂದರೆ, ಯಾವುದೇ ರೀತಿಯ ರಿಲೀಫ್.........

ಶ್ರೀ ಕೆ. ಎಚ್. ಪಾಟೀಲ್.—ಅವರು ಫ್ರೀ ಎಂಬ ಪದವನ್ನು ಉಪಯೋಗ ಮಾಡಿಲ್ಲ. ಇದಕ್ಕೆ ಆಗುವಂತಹ ಖರ್ಚನ್ನು ರಾಜ್ಯಸರ್ಕಾರದ ಲೆಕ್ಕಕ್ಕೆ ಸೇರಿಸುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಈ ಒಂದು ಪದವನ್ನು ನೀವು ಉಪಯೋಗ ಮಾಡಿಕೊಂಡರೆ ಏನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಕೆ.ಕಾಂತ. —ನಾನು ಪೇಪರಿನಲ್ಲಿ ಓದಿದಾಗ ಆ ಶಬ್ದ ಕಂಡು ಬಂತು ಅದಕ್ಕೆ ನಾನು ಹೇಳಿದೆನೇ ಹೊರತು ಟೀಕೆ ಮಾಡುವ ದೃಷ್ಟಿಯಿಂದಲ್ಲ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ನಡುವೆ ಸಹಕಾರ ಭಾವನೆ ಇದ್ದರೆ ಮಾತ್ರ ಸರ್ಕಾರಗಳು ಚೆನ್ನಾಗಿ ನಡೆಯಬಹುದೇ ಹೊರತು ಇಲ್ಲದಿದ್ದರೆ ಚೆನ್ನಾಗಿ ನಡೆಯುವುದಿಲ್ಲ. ರಾಜ್ಯ ಸರ್ಕಾರಗಳಿಂದ ಎಷ್ಟೋ ತೆರಿಗೆಗಳು ಕೇಂದ್ರ ಸರ್ಕಾರಕ್ಕೆ ಹೋಗುತ್ತವೆ. ಆದ್ದರಿಂದ ಅವರಸಹಾಯ ನಮಗೆ ಅತಿ ಅವಶ್ಯವಿದೆ. ಇಂತಹ ಭೀಕರ ಬರಗಾಲ ಪರಿಸ್ಥಿತಿಯಲ್ಲಿ ಮತ್ತು ಕೆಟ್ಟ ಪರಿಸ್ಥಿತಿಯಲ್ಲಿ ನಾವು ಇದ್ದಾಗ ಕೇಂದ್ರ ಸರ್ಕಾರವು ಒಂದೆರಡು ಒಳ್ಳೆಯ ಶಬ್ದಗಳನ್ನು ಉಪಯೋಗ ಮಾಡಿದ್ದರೆ ಒಳ್ಳೆಯದಿತ್ತೆಂದು ಮಾತ್ರ ಹೇಳುತ್ತಿದ್ದೇನೆಯೇ ಹೊರತು ಟೀಕೆ ಮಾಡುವ ಉದ್ದೇಶದಿಂದ ಈ ಮಾತನ್ನು ನಾನು ಹೇಳಲಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಈಗ ರಾಜ್ಯ ಸರ್ಕಾರವು ಜನರಿಗೆ ಅರಿವೆ ಕೊಡುತ್ತಿದೆ, ಹಸಿರು ಕಾರ್ಡ್‌ಗಳನ್ನು ಕೊಡುತ್ತಿದೆ, ಕೇಂದ್ರ ಸರ್ಕಾರದವರು ಪುಕ್ಕಟೆಯಾಗಿ ಆಹಾರ ಧಾನ್ಯಗಳನ್ನು ಕರ್ನಾಟಕಕ್ಕೆ ಸರಬರಾಜು ಮಾಡುತ್ತೇವೆಂದು ಹೇಳಿದರೆ ಅದು ತಪ್ಪಾಗುತ್ತದೆಯೇ, ಈ ರೀತಿ ಮಾತನಾಡಿದರೆ ಕೊಡುವವರು ಸಹ ಕೊಡದಂತಾಗುತ್ತದೆ.

ಶ್ರೀ ಎಸ್. ಕೆ. ಕಾಂತಾ.—ನಾನು ಅತಿರೇಕವಾಗಿಯೇನೂ ಮಾತನಾಡಿಲ್ಲ ಪುಕ್ಕಟೆ ಎನ್ನುವ ಮಾತು ಇರಬಾರದಾಗಿತ್ತು ಎಂದು ಮಾತ್ರ ಹೇಳಿದ್ದೇನೆಯೇ ಹೊರತು ಇದನ್ನು ಟೀಕೆ ಎಂದು ತಿಳಿಯ ಬಾರದು. ಇವತ್ತಿನದಿವಸ ಇರತಕ್ಕ ಬಿಕ್ಕಟ್ಟಿನ ಪರಿಸ್ಥಿತಿಯ ಬಗ್ಗೆ ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರೂ ಮಾತನಾಡಿದ್ದಾರೆ ಹಾಗೂ ಆಡಳಿತ ಪಕ್ಷದ ಸದಸ್ಯರೂ ಸಹ ಮಾತನಾಡಿದ್ದಾರೆ. ರಾಜ್ಯದ ಜನರಿಗೆ ಹಿತವಾಗುವ ಕೆಲಸಗಳನ್ನು ಮಾಡಬೇಕೆಂದು ನಾನು ಸರ್ಕಾರದಲ್ಲಿ ಹೇಳಿ ನನ್ನ ಜಿಲ್ಲೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ, ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯು ಎಲ್ಲಾ ರೀತಿಯಿಂದಲೂ ೧೯ನೇ ನಂಬರಿನಲ್ಲಿದೆ. ನೀರಾವರಿಯಲ್ಲಾಗಬಹುದು, ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆಯಾಗಲಿ ಇರಬಹುದು ಅಥವಾ ಡೆವಲಪ್‌ಮೆಂಟ್ ಕೆಲಸಗಳಾದ ರಸ್ತೆ ಕಾಮಗಾರಿ ಬಗ್ಗೆ ಇರಬಹುದು ಎಲ್ಲಾ ರೀತಿಯಿಂದಲೂ ಕೂಡ ಹಿಂದೆ ಬಿದ್ದಿದೆ. ಹಳೆ ಮೈಸೂರಿನ ಯಾವುದಾದರೂ ಒಂದು

ಜಿಲ್ಲೆಯನ್ನು ನಾವು ನೋಡಿದರೆ ನಮ್ಮ ಜಿಲ್ಲೆ ಎಲ್ಲಾ ಜಿಲ್ಲೆಗಿಂತಲೂ ಕೆಳದರ್ಜೆಯಲ್ಲಿದೆ ಎನ್ನತಕ್ಕ ಮಾತನ್ನು ಈ ದಿವಸ ನಾವು ಹೇಳಬೇಕಾಗಿದೆ. ನಮ್ಮ ರಾಜ್ಯಕ್ಕೆ ಗುಲ್ಬರ್ಗವನ್ನು ಹೈದರಾಬಾದ್ ಸ್ಟೇಟಿನಿಂದ ಸೇರಿಸಿಕೊಂಡಾಗಿನಿಂದಲೂ ನಾವು ಹಿಂದೆ ಉಳಿದಿದ್ದೇವೆಂದು ವಿಚಾರ ಮಾಡಿ ನೋಡಿದಾಗ ಗೊತ್ತಾಗುತ್ತದೆ. ಈ ರೀತಿಯ ಡಿಸ್‌ಪ್ಯಾರಿಟಿಗಳನ್ನು ತೆಗೆದು ಹಾಕುವುದಕ್ಕೆ ಯಾವ ಯೋಜನೆಗಳನ್ನು ಕೈಗೊಳ್ಳಬೇಕು ಎಂಬುದನ್ನು ತೀರ್ಮಾನ ಮಾಡಲು ಒಂದು ಸಮಿತಿಯನ್ನು ಮಾಡಿದರೆ ಒಳ್ಳೆಯದೆಂದು ನನಗನಿಸುತ್ತದೆ. ಏಕೆಂದರೆ ರಾಜ್ಯ ಸರ್ಕಾರ ಎಷ್ಟೇ ಹಣವನ್ನು ಆ ಜಿಲ್ಲೆಗೆ ಕೊಟ್ಟರು ಸಹ ಅದು ಹಿಂದುಳಿದೇ ಇದೆ. ಗುಲ್ಬರ್ಗ ರಾಯಚೂರು, ಬೀದರ್ ಈ ಮೂರು ಜಿಲ್ಲೆಗಳು ಪದೇ ಪದೇ ಬರಗಾಲಕ್ಕ ತುತ್ತಾಗುತ್ತಲೇ ಇರುತ್ತವೆ ಆದ್ದರಿಂದ ಒಳ್ಳೆಯ ಕಾರ್ಯಕ್ರಮಗಳು ಅಂದರೆ ಶಾಶ್ವತ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಜಿಲ್ಲೆಗಳನ್ನು ಮುಂದಕ್ಕೆ ತರಬೇಕು. ನೀರಾವರಿ ಯೋಜನೆ ಗಳನ್ನು ಕೈಗೊಳ್ಳಬೇಕು, ರಸ್ತೆಗಳನ್ನು ನಿರ್ಮಾಣ ಮಾಡಬೇಕು ಟ್ಯಾಂಕುಗಳನ್ನು ನಿರ್ಮಾಣ ಮಾಡ ಬೇಕು ಇಲ್ಲದಿದ್ದರೆ ಜನಗಳಿಗೆ ಬಹಳ ಕಷ್ಟವಾಗುತ್ತದೆ. ೧೯೫೬ನೇ ಇಸವಿಯಿಂದಲೂ ಈ ಜಿಲ್ಲೆಗಳ ಕಡೆ ಅಷ್ಟು ಲಕ್ಷ್ಯವನ್ನು ಸರ್ಕಾರ ಕೊಡುತ್ತಿಲ್ಲವೆಂದು ನನ್ನ ಭಾವನೆ. ಏಕೆಂದರೆ ಇವತ್ತಿನ ದಿನ ಅಲಂದ್, ಗುಲ್ಬರ್ಗ, ಅಬ್‌ಜಲ್‌ಪುರ ವಿಭಾಗವು ವಿಪರೀತ ಬರಗಾಲಕ್ಕೆ ತುತ್ತಾಗಿವೆ. ಈ ಭಾಗದಲ್ಲಿ ಮುಂಗಾರಿನ ಬೆಳೆ ಆಗಲೇ ಇಲ್ಲ. ಹಿಂಗಾರಿನ ಬೆಳೆ ಸುಮಾರು ೩೦ ಅಥವಾ ೩೫ ಪರ್ಸೆಂಟ್ ಮಾತ್ರ ಆಗಿದೆ. ಇಂತಹ ವಿಪರೀತ ಪರಿಸ್ಥಿತಿಯಲ್ಲಿ ಕೂಡ ಎಷ್ಟು ಪರಿಹಾರ ಕೆಲಸಗಳು ಆಗಬೇಕಾಗಿತ್ತೋ ಅಷ್ಟು ಕೆಲಸಗಳು ಆಗಲಿಲ್ಲವೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಬಯಸುತ್ತೇನೆ. ಕುಡಿಯುವ ನೀರಿನ ಪರಿಸ್ಥಿತಿ ಅಷ್ಟೇ ಗಂಭೀರವಾಗಿದೆ, ನನ್ನ ಸ್ವಂತ ಗುಲ್ಬರ್ಗಾ ಸಿಟಿಯಲ್ಲಿ ನೀರಿನ ಪರಿಸ್ಥಿತಿ ಅತಿ ಗಂಭೀರವಾಗಿದೆ. ಬೆಂಗಳೂರು ನಗರಕ್ಕಿಂತ ಹೆಚ್ಚು ಗಂಭೀರವಾಗದ ಪರಿಸ್ಥಿತಿ ಗುಲ್ಬರ್ಗಾದಲ್ಲಿ ಇದೆ. ಗುಲ್ಬರ್ಗಾ ನಗರಕ್ಕೆ ನೀರಿನ ಆಶ್ರಯವಾಗಿದ್ದ ಬೋಸ್‌ಗಾ ಮತ್ತು ಬೆಣ್ಣೆತೊರೆ ಎರಡು ಟ್ಯಾಂಕುಗಳು ಇದ್ದವು. ಮಳೆಯ ಅಭಾವದಿಂದ ಅವುಗಳಲ್ಲೂ ನೀರು ಇಲ್ಲದೆ ಈಗ ಬಹಳ ತೊಂದರೆಯಾಗಿದೆ. ಅದಕ್ಕೋಸ್ಕರ ನಾವು ೧೨೫ ಬೋರ್‌ವೆಲ್‌ಗಳನ್ನು ಬರ ಪರಿಹಾರ ಹಣದಿಂದ ಹಾಕಿಸಿದ್ದೇವೆ. ಇನ್ನೂ ೨೫೦ ಬೋರ್‌ವೆಲ್‌ಗಳನ್ನು ಹಾಕಿಸಬೇಕಾಗಿದೆ. ಬೋರ್‌ವೆಲ್‌ಗಳಲ್ಲೂ ಸಹ ನೀರಿನ ಮಟ್ಟ ದಿನೇ ದಿನೇ ಕೆಳಗೆ ಹೋಗುತ್ತಿದೆ. ಆದ್ದರಿಂದ ಸರ್ಕಾರ ತೀವ್ರವಾಗಿ ಒಂದು ಯೋಜನೆ ಹಾಕಿಕೊಂಡು ಕುಡಿಯುವ ನೀರನ್ನು ಒದಗಿಸಬೇಕು ಇಲ್ಲದಿದ್ದರೆ ಗುಲ್ಬರ್ಗಾ ಜನರಿಗೆ ಬಹಳ ಕಷ್ಟವಾಗುತ್ತದೆ. ಈ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ಸರ್ಕಾರದವರು ಬರ ಪರಿಹಾರ ಹಣವನ್ನು ಹೆಚ್ಚು ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೇ ಅರ್ಬನ್ ಡೆವಲಪ್‌ಮೆಂಟ್, ಕುಡಿಯುವ ನೀರಿನ ಮಂಡಳಿಯವರೂ ಕೂಡ ಹಣವನ್ನು ಒದಗಿಸಿ ಈ ಯೋಜನೆಯನ್ನು ಮಾಡಬೇಕು. ಇವತ್ತಿನ ಪರಿಸ್ಥಿತಿಯಲ್ಲಿ ಅಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಅವನ್ನು ಎದುರಿಸಲಿಕ್ಕೆ ಹೆಚ್ಚಿನ ರೀತಿಯಲ್ಲಿ ಸರ್ಕಾರ ಧನ ಸಹಾಯವನ್ನು ಮಾಡಬೇಕೆಂದು ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಶ್ರೀ ಎಂ. ಎಸ್. ನಾರಾಯಣರಾವ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

† ಶ್ರೀ ಪಟಮಕ್ಕಿ ರತ್ನಾಕರ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಮಾಡಿರತಕ್ಕ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಹಲವಾರು ಕಾರಣಗಳಿಂದ ವಿರೋಧಿಸಿ ನಾನು ಮಾತ ನಾಡಲಿಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ, ನಮ್ಮ ರಾಜ್ಯದ ದುರಾದೃಷ್ಟವೋ ಏನೋ ಯಾವಾಗ ಜನತಾ ಪಕ್ಷದವರು ಈ ಕರ್ನಾಟಕ ರಾಜ್ಯದಲ್ಲಿ ಸರ್ಕಾರವನ್ನು ಹಿಡಿದುಕೊಂಡರೋ ಅವತ್ತಿನಿಂದ ಬರಗಾಲದ ದೇವತೆ ನಮ್ಮ ರಾಜ್ಯದಲ್ಲಿ ವಾಸ್ತವ್ಯ ಹೂಡಿದ್ದಾಳೆ. ಇದು ನಮ್ಮ ರಾಜ್ಯದ ದುರಾದೃಷ್ಟ ವೆಂದು ನಾನು ಭಾವಿಸುತ್ತೇನೆ. ಹಿಂದಿನವರು ಒಂದು ವಿಷಯವನ್ನು ಹೇಳುತ್ತಿದ್ದರು. ಅದೇನೆಂದರೆ, ಪುಣ್ಯವಂತ ರಾಜ್ಯದ ರಾಜನಾಗಿದ್ದರೆ ರಾಜ್ಯದಲ್ಲಿ ಮಳೆ ಬೆಳೆಗಳು ಚೆನ್ನಾಗಿ ಆಗಿ ದೇಶ ಸುಭಿಕ್ಷವಾಗಿ ರಾಜ್ಯದ ಪ್ರಜೆಗಳು ಸುಖ ಸಂತೋಷದಿಂದ ಇರುತ್ತಾರೆ ಎಂದು. ಆದರೆ ಇವತ್ತು ನಮ್ಮ ರಾಜ್ಯದ ಸ್ಥಿತಿ ಗತಿಗಳನ್ನು ಕೂಲಂಕಷವಾಗಿ ಮತ್ತು ಗಂಭೀರವಾಗಿ ಅಧ್ಯಯನ ಮಾಡಿದರೆ ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ಆವರಿಸಿದೆ ಜೊತೆಗೆ ಎಲ್ಲಾ ಕಡೆ ಕೊಲೆ, ದರೋಡೆ ಹೀಗೆ ಹಲವು ರೀತಿಯಲ್ಲಿ ತೊಂದರೆಗಳು ಬಂದು ಜನರು ಜೀವನ ಮಾಡುವುದಕ್ಕೇ ಕಷ್ಟವಾಗುತ್ತಿದೆ ಹಾಗೂ ರಸ್ತೆಗಳಲ್ಲಿ ಓಡಾಡುವುದಕ್ಕೆ ಜನರು

ಹೆದರುತ್ತಿದ್ದಾರೆ. ಬರಗಾಲದ ಪರಿಸ್ಥಿತಿಯನ್ನು ಎದುರಿಸುವಲ್ಲಿ ಈ ಸರ್ಕಾರ ಕೈಗೊಂಡಿರತಕ್ಕ ನಿರ್ಧಾರ ಮತ್ತು ತೀರ್ಮಾನಗಳು ಸಮಯೋಚಿತವಮತ್ತು ಸಂದರ್ಭ ಯೋಚಿತವಾಗಿವೆಯೇ ಎಂದರೆಅದೂ ಇಲ್ಲ. ಕೇಂದ್ರಸರ್ಕಾರವೂ ಸಹ ರಾಜ್ಯ ಸರ್ಕಾರಕ್ಕೆ ಧನ ಸಹಾಯ ಮಾಡಿದೆ. ಆದರೂ ಇವರು ಬರ ಪರಿಹಾರ ಕಾಮಗಾರಿಗಳನ್ನು ಸರಿಯಾಗಿ ಮಾಡಲಿಲ್ಲ. ಬರಗಾಲಕ್ಕೆ ತುತ್ತಾದ ಜನರಿಗೆ ಸರಿಯಾಗಿ ಹಣ ಮತ್ತು ಆಹಾರ ಧಾನ್ಯಗಳನ್ನು ಹಂಚಿಕೆ ನಡೆಸಿದ್ದಾರೆಯೇ? ಶಾಸನ ಸಭೆಯಲ್ಲಿ ಬಡವರ ಬಗ್ಗೆ ಕಳಕಳಿ ಇರುವ ಸದಸ್ಯರುಗಳು ಸರ್ಕಾರಕ್ಕೆ ಹಲವಾರು ರೀತಿಯಲ್ಲಿ ವಿನಂತಿ ಮಾಡಿಕೊಂಡಿದ್ದಾರೆ ಸರ್ಕಾರಿ ಅಧಿಕಾರಿಗಳು ಬರಗಾಲದ ಹಣವನ್ನು ಹೇಗೆ ಪೋಲು ಮಾಡುತ್ತಿದ್ದಾರೆ, ಹೇಗೆ ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿ ಕೊಂಡಿದ್ದಾರೆ ಎಂಬುದನ್ನು ಸದಸ್ಯರುಗಳು ವಿವರಿಸಿದ್ದಾರೆ.

೨-೦೦ ಪಿ. ಎಂ.

ಸರಕಾರ ಈ ಬಗ್ಗೆ ಮಾಡುತ್ತಿರುವ ಪರಿಹಾರ ಕಾಮಗಾರಿಗಳನ್ನು ಮತ್ತಿತರ ಕಾರ್ಯಕ್ರಮಗಳ ವೈಖರಿಯನ್ನು ನೋಡಿದರೆ ಈ ಸರಕಾರ ಮತ್ತು ನೌಕರಶಾಹಿ ವ್ಯವಸ್ಥೆಯಲ್ಲಿ ಏನಾದರೂ ಒಡಂಬಡಿಕೆ ಇದೆಯೋ ಪರೋಕ್ಷವಾಗಿ ಒಬ್ಬರಿಗೊಬ್ಬರು ಸಹಾಯವನ್ನು ಮಾಡುತ್ತಿದ್ದಾರೆಯೇ ಎಂಬ ಅನುಮಾನ, ಸಂಶಯ ಬರುತ್ತದೆ. ಜೊತೆಗೆ ಇವರು ಕೇಂದ್ರ ಸರಕಾರದ ವಿರುದ್ಧ ಬೊಬ್ಬೆಯನ್ನು ಕೂಗುತ್ತಾ ಇದ್ದಾರೆ. ಕೇಂದ್ರವನ್ನು ದೂಷಣೆ ಮಾಡತಕ್ಕಂತಹ ವಿಚಾರದಲ್ಲಿ ಈ ಜನ ಕೇಂದ್ರ ಸರಕಾರದವರ ಬಗ್ಗೆ ಮತ್ತೊಂದು ರೀತಿಯಲ್ಲಿ ದೂರುತ್ತಾ ಇದ್ದಾರೆ. ಇದು ತಪ್ಪು. ಇವೊತ್ತು ನಮ್ಮ ಕೇಂದ್ರ ಸರಕಾರ ದಲ್ಲಿರುವ ಪ್ರಧಾನ ಮಂತ್ರಿಯವರು ಜನಸಾಮಾನ್ಯರ ಬಗ್ಗೆ ಅತ್ಯಂತ ಹೆಚ್ಚು ಕಳಕಳಿಯನ್ನು ಹೊಂದಿ ದವರಾಗಿದ್ದಾರೆ. ದೇಶದಲ್ಲಿನ ದೀನದಲಿತರ ಬಗ್ಗೆ ಚಿಂತನೆ ಮಾಡಿರತಕ್ಕಂಥವರು ಆಗಿದ್ದಾರೆ, ನಮ್ಮ ರಾಜ್ಯದ ಕಷ್ಟಪರಿಸ್ಥಿತಿಯ ಬಗ್ಗೆ ಅಧ್ಯಯನ ಮಾಡಿ. ನಿವಾರಣೆಗಾಗಿ ತಮ್ಮ ಸಹಕಾರವನ್ನು ನೀಡಲು ಕೇಂದ್ರ ಸಚಿವರನ್ನು ಕಳುಹಿಸಿಕೊಟ್ಟು, ಅವರು ಭೇಟಿ ಕೊಟ್ಟ ನಂತರ ಸೂಕ್ತ ಸಹಾಯವನ್ನು ಮಾಡಲಿಕ್ಕೆ ತಯಾರಾಗಿದ್ದಾರೆ. ಆದರೆ ನಮ್ಮ ರಾಜ್ಯ ಸರಕಾರದವರು ಅರ್ಥವಿಲ್ಲದ ಬೇಜವಾಬ್ದಾರಿತನ ವನ್ನು ಬಿಟ್ಟು. ಕೇಂದ್ರ ಸರಕಾರವನ್ನು ದೂಷಿಸುವುದನ್ನು ನಿಲ್ಲಿಸಿ, ಬಡವರ ಬಗ್ಗೆ ಬರಗಾಲ ಪೀಡಿತ ರಾದ ಜನಜಾನುವಾರುಗಳ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇವೊತ್ತು ಇವರು ಬರಗಾಲ, ಬರಗಾಲ ಎಂದು ಹೇಳುತ್ತಿದ್ದಾರೆ, ಆದರೆ ಎಷ್ಟು ಜಿಲ್ಲೆಗಳು ರಾಜ್ಯದಲ್ಲಿ ಬರಗಾಲ ಪೀಡಿತ ಪ್ರದೇಶಗಳಾಗಿವೆ ಎಂದು ಇನ್ನೂ ಡಿಕ್ಲೇರ್ ಮಾಡಲಿಲ್ಲ. ಈಗ ಎಚ್ಚೆತ್ತು ಕಾನೂನಿನ ಪುಸ್ತಕಗಳನ್ನು ಹುಡುಕುತ್ತಿದ್ದಾರೆ. ಡಿಕ್ಲೇರ್ ಮಾಡತಕ್ಕಂತಹ ಶಾಸನವನ್ನು ಈ ಶಾಸನ ಸಭೆಯಲ್ಲಿ ತಂದು ಮಂಜೂರು ಮಾಡತಕ್ಕಂತಹ ಪ್ರಯತ್ನವನ್ನೂ ಕೂಡಾ ಇವರು ಮಾಡುತ್ತಾ ಇಲ್ಲ. ಈ ಶಾಸನವನ್ನು ತರುವುದಕ್ಕಾಗಿ ಸದಸ್ಯರು ಒಪ್ಪುತ್ತಾ ಇಲ್ಲವೇ ? ನಾವೆಲ್ಲರೂ ಅದನ್ನು ಒಪ್ಪಿ ಕೊಳ್ಳುವುದಕ್ಕೆ ತಯಾರಿದ್ದೇವೆ. ಆದರೂ ಕೂಡ ಆ ಶಾಸನವನ್ನು ಸಭೆಯಲ್ಲಿ ತಂದು ಮಂಜೂರು ಮಾಡಿಲ್ಲ. ಎಂದು ಹೇಳಿದರೆ ಇವರಿಗೆ ಬಡವರ ಬಗ್ಗೆ, ದೀನದಲಿತರ ಬಗ್ಗೆ ಎಷ್ಟು ಕಾಳಜಿ ಇದೆ ಎಂದು ಅರ್ಥವಾಗುತ್ತದೆ.

ರಾಜ್ಯಪಾಲರ ಭಾಷಣದಲ್ಲಿ ಉದ್ಯೋಗದ ವಿಷಯದಲ್ಲಿ ಪ್ರಸ್ತಾಪಿಸುತ್ತಾ ಬಹಳ ದೊಡ್ಡದಾಗಿ ಹೇಳಿದ್ದಾರೆ ಉದ್ಯೋಗ ಒದಗಿಸುವುದು ಕುಡಿಯುವ ನೀರಿನ ಪೂರೈಕೆ ಜಾನುವಾರುಗಳಿಗೆ ಮೇವು ಪೂರೈಕೆ ಮತ್ತು ಸಾಕಷ್ಟು ಆಹಾರಧಾನ್ಯಗಳ ಪೂರೈಕೆಯ ವಿಷಯದಲ್ಲಿ ಮಾತನ್ನು ಹೇಳಿದ್ದಾರೆ. ನಮೂದಿತ ವಿಷಯಗಳನ್ನು ನೋಡಿದರೆ ಇವರು ಸುಳ್ಳಿನ ಪರಾಕಾಷ್ಟೆಯನ್ನು ತಲುಪಿದ್ದಾರೆಯೋಏನೋ ಎಂದು ಅನ್ನಿಸುತ್ತದೆ. ಸತ್ಯಕ್ಕೆ ದೂರವಾಗಿರತಕ್ಕಂತಹ ವಿಷಯವನ್ನು ಸದನದ ಮುಂದೆ ರಾಜ್ಯಪಾಲರ ಬಾಯಿಯಿಂದ ಹೇಳಿಸಿದ್ದಾರೆ. ನಿಜಕ್ಕೂ ಇದರಲ್ಲಿ ಏನು ಹೇಳಿಕೆ ಕೊಟ್ಟಿದ್ದಾರೆ ಇದರಲ್ಲಿ ೧೦ ಪರ್ಸೆಂಟ್ ಕೆಲಸಕಾರ್ಯಗಳು ಕೂಡಾ ಖಂಡಿತವಾಗಿ ಆಗಿಲ್ಲ. ಎರಡು ಸಾವಿರ ಎಂದಿದ್ದುದನ್ನು ೨೦ ಸಾವಿರ ಎಂದು ಮಾಡಿದ್ದಾರೆ. ಉದ್ಯೋಗ ಇಲ್ಲದಿರತಕ್ಕಂತಹ ಜನರಿಗೆ ಉದ್ಯೋಗವನ್ನು ಕೊಟ್ಟಿ ದ್ದೇವೆ ಎಂದು ಹೇಳಿದ್ದಾರೆ. ಇವರು ಪತ್ರಿಕೆಗಳಲ್ಲಿ ಕೊಟ್ಟಿರತಕ್ಕಂತಹವುಗಳನ್ನು ಪಾಪ ಏನೂ ತಿಳಿಯಂದ ಸಾಮಾನ್ಯ ಜನರು, ಪತ್ರಿಕೆಗಳನ್ನು ಓದತಕ್ಕಂತಹವರು ನಂಬುತ್ತಾರೆ. ಶಾಸನ ಸಭಾ ಸದಸ್ಯರ

ಮುಂದೆ ಇವರು ಉತ್ಪ್ರೇಕ್ಷೆ ಮಾಡುತ್ತಾರೆ. ಹಿಮಾಚಲ ಪರ್ವತದೆತ್ತರಕ್ಕೆ ಏರುತ್ತೇವೆ ಎಂದೆಲ್ಲಾ ಇವರು ಉತ್ಪ್ರೇಕ್ಷಿಸಿ ಪ್ರಚಾರವನ್ನು ಮಾಡುತ್ತಿರುತ್ತಾರೆ. ಈ ಎಲ್ಲಾ ಕಾರಣಗಳಿಗೋಸ್ಕರ ನಾವು ಸರಕಾರದ ನೀತಿಗಳನ್ನು ಟೀಕೆ ಮಾಡಬೇಕಾಗುತ್ತದೆ ಸರಕಾರದವರು ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಿದ್ದರೆ ನಾವು ಟೀಕೆ ಮಾಡಬೇಕಾದ ಸಂದರ್ಭವೇ ಬರುತ್ತಿರಲಿಲ್ಲ.

ಕುಡಿಯುವ ನೀರಿನ ಪೂರೈಕೆಯ ವಿಚಾರದಲ್ಲಿ ಇವರ ಉಲ್ಲೇಖಿಸಿರುವುದು ಖಂಡಿತಾ ಸುಳ್ಳು ಕುಡಿಯುವ ನೀರಿನ ಪೂರೈಕೆಯ ವಿಚಾರದಲ್ಲಿ ನಾವು ಕರ್ನಾಟಕ ರಾಜ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡರೆ, ಈ ಕುಡಿಯುವ ನೀರಿನ ಪೂರೈಕೆಗಾಗಿ ಎಷ್ಟು ಹಣವನ್ನು ಇವರು ಖರ್ಚು ಮಾಡಿದ್ದಾರೆಯೋ ಅದರಲ್ಲಿ ೧೦ ಪರ್ಸೆಂಟ್ ಪ್ರತಿಫಲ ಕೂಡಾ ರಾಜ್ಯದ ಜನತೆಗೆ ಸಿಗಲಿಲ್ಲ. ಕೇಂದ್ರ ಸರಕಾರದಿಂದ ಬರತಕ್ಕಂತಹ ಹಣವನ್ನು ಉಪಯೋಗಿಸಿಕೊಂಡಿದ್ದರೆ ಎಷ್ಟೋ ಕೆಲಸಗಳನ್ನು ಇವರು ಮಾಡಬಹುದಾಗಿತ್ತು. ಕುಡಿಯುವ ನೀರಿಗಾಗಿ ಜನರು ಪಡುತ್ತಿರುವ ಬವಣೆಯನ್ನು ತಪ್ಪಿಸಬಹುದಾಗಿತ್ತು. ಆ ಕಾರ್ಯವನ್ನು ಇವರು ಮಾಡಲಿಲ್ಲ. ಸುಮ್ಮನೆ ಸಾಸಿವೆಯನ್ನು ಬೆಟ್ಟದಂತೆ ಮಾಡಿ ತಮ್ಮ ದುರಾಡಳಿತವನ್ನು ಮುಚ್ಚಿದ್ದಾರೆ. ಏನು ಮಾಡಬೇಕೋ ಅದನ್ನು ಮಾಡದೆ, ಹೆಗ್ಗಳಿಕೆಯನ್ನು ಪತ್ರಿಕೆಗಳ ಮುಖಾಂತರ ಮ್ಯಾಗಜಿನ್ ಮುಖಾಂತರಪ್ರಚಾರವನ್ನು ಪಡೆಯುವ ಕೆಲಸವನ್ನು ಮಾಡುತ್ತಿದ್ದಾರೆ. "ನಿಂತ ಶೋಷಣೆ, ಈಡೇರಿದ ಭರವಸೆ" ಮುಂತಾದ ಶಿರೋನಾಮೆಗಳನ್ನು ಕೊಟ್ಟು ಪ್ರಚಾರವನ್ನು ಮಾಡಿಕೊಳ್ಳುತ್ತಿದ್ದಾರೆ ಸರಕಾರದವರು ಜನತೆಗೆ ಕೊಟ್ಟ ಎಲ್ಲಾ ಭರವಸೆಗಳನ್ನು ಈಡೇರಿಸಿದ್ದೇವೆ ಎಂದು ಕೊಟ್ಟಿದ್ದಾರೆ. ಇದರಲ್ಲಿ ಏನು ಪ್ರಕಟಿಸಿದ್ದಾರೆ. ಅದರಲ್ಲಿ ೧೦ ಪರ್ಸೆಂಟ್, ೧೫ ಪರ್ಸೆಂಟುಗಳಷ್ಟು ಕೂಡಾ ಜನರು ಪಡೆದಂತೆ ಕಂಡಿಲ್ಲ. ಆದರೆ ಪ್ರಚಾರವನ್ನು ಪತ್ರಿಕೆಗಳ ಮುಖಾಂತರ ಮಾಡುತ್ತಾ ಅದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಬಡವರ ದೃಷ್ಟಿಯಲ್ಲಿ ಬೆಟ್ಟದಷ್ಟು ಗಾತ್ರದ ಸಾಧನೆಯನ್ನು ಸಾಧಿಸಿದ್ದೇವೆ ಎಂದು ಮನ ವರಿಕೆ ಮಾಡಲು ಶಕ್ತಿಯುತವಾಗಿ ಪ್ರಯತ್ನಗಳನ್ನು ಮಾಡುತ್ತಾ ಇದ್ದಾರೆ.

ರಾಜ್ಯಪಾಲರ ಭಾಷಣದಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಹೇಳುತ್ತಾ "ಬೆಂಗಳೂರಿನ ನಾಗರಿಕರು ಈ ತೊಂದರೆಯನ್ನು ಅತ್ಯಂತ ಪ್ರಶಂಸನೀಯ ರೀತಿಯಲ್ಲಿ ಸಹಿಸಿಕೊಂಡು ಬಂದಿದ್ದಾರೆ" ಎಂದು ಹೇಳಿದ್ದಾರೆ. ಅಧ್ಯಕ್ಷರೆ, ಈ ಮಾತಿನ ಅರ್ಥ ಏನು? ಜನರು ಕುಡಿಯಲಿಕ್ಕೆ ನೀರು ಇಲ್ಲ ಎಂದು ಶಾಪ ಹಾಕುತ್ತಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಗೊತ್ತಿದೆ ಹೇಗೆ ಜನರು ನೀರಿನ ಬವಣೆಯನ್ನು ಸಹಿಸಿಕೊಂಡು ಬಂದಿದ್ದಾರೆ ಎಂದು. ಅಧ್ಯಕ್ಷರೆ ತಾವೂ ಕೂಡಾ ಈ ಮಾತನ್ನು ಒಪ್ಪುವುದಿಲ್ಲ ಎಂದು ಭಾವಿಸಿದ್ದೇನೆ. ಬೆಂಗಳೂರಿನಲ್ಲಿ ನೀರಿಗಾಗಿ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ? ಎಷ್ಟು ಭಾವಿಗಳನ್ನು ತೋಡಿಸಿದ್ದಾರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಈ ಬಗ್ಗೆ ಇಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಕೇಳಿಕೊಂಡಿಲ್ಲ ಎಂದೂ ಕಾಣುತ್ತದೆ. ಎರಡನೆಯದಾಗಿ ಈಗ ಶಾಸನಸಭೆಗಳು ನಡೆಯುತ್ತಿರುವುದರಿಂದ ನಾನು ಇಲ್ಲಿಯೇ ಇದ್ದಿರುತ್ತೇನೆ. ಇಲ್ಲದಿದ್ದರೆ ಪ್ರತಿ ದಿನವೂ ನೀರಿನ ಸಮಸ್ಯೆ ಹೇಗೆ ಇದೆ, ಎಂದು ಬೇರೆ ಬೇರೆ ಪ್ರದೇಶಗಳಿಗೆ ಖುದ್ದಾಗಿ ಭೇಟಿ ನೀಡಿ ನೋಡಿಕೊಂಡು ಮನಗಂಡು ಬರುತ್ತಾ ಇದ್ದೆ. ನೀರಿನ ಬರ ತಮಗೆಲ್ಲರಿಗೂ ಗೊತ್ತಿದೆ. ಕಷ್ಟ ಪರಿಸ್ಥಿತಿಯಲ್ಲಿ ತೊಂದರೆಯನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳಬೇಕೆಂದು ಹೇಳಿದ್ದೇನೆ. ಮಾನ್ಯ ಸದಸ್ಯರು ತಮ್ಮ ವ್ಯಾಖ್ಯಾನವನ್ನು ಮುಂದುವರಿಸಬಹುದೆಂದು ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಸಚಿವರು ನೀರಿನ ಬವಣೆ ಬಗ್ಗೆ ತಮ್ಮ ಪ್ರಯತ್ನ ನಡೆದಿದೆ ಎಂದು ಹೇಳಿದ್ದಾರೆ ಯಾವ ಪ್ರಮಾಣದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಬಹುದಾಗಿತ್ತೋ ಆ ಪ್ರಮಾಣದಲ್ಲಿ ಸಚಿವರು ಪ್ರಯತ್ನ ಮಾಡುತ್ತಾ ಇಲ್ಲ. ಜನರು ಮಾತ್ರ ಎಲ್ಲಾ ಪರಿಸ್ಥಿತಿಯನ್ನು ಸಹಿಸಿಕೊಂಡು ಬಂದಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಿಗೆ ಹೆಂಡತಿ ಮಕ್ಕಳು ಇದ್ದಾರೋ ಇಲ್ಲವೋ ಎಂಬುದು ನನಗೆ ಸರಿಯಾಗಿ ಗೊತ್ತಿಲ್ಲ. ಅವರಿಗೆ ಎಲ್ಲರೂ ಇದ್ದಾರೆ. ಆದರೆ ನನಗೆ ಮಾತ್ರ ಯಾರೂ ಇಲ್ಲ ಇದೊಂದು ಕೆಲಸ ಮಾಡುವುದಕ್ಕಾಗಿ ಕುಳಿತಿದ್ದೇನೆ.

ಶ್ರೀ ಪಟವರ್ಧನ್ ರತ್ನಾಕರ್.— ಮಾನ್ಯ ಅಧ್ಯಕ್ಷರೇ, ಇವೊತ್ತು ಬರಗಾಲ ಪ್ರದೇಶಗಳಲ್ಲಿ ಸಹಸ್ರ ಗಟ್ಟಲೆ ಸಂಖ್ಯೆಯಲ್ಲಿ ಜಾನುವಾರುಗಳು ಸಾಯುತ್ತಾ ಇವೆ. ಮೇವಿನ ಕೊರತೆಯಿಂದಾಗಿ, ನೀರಿನ ಬವಣೆಯಿಂದಾಗಿ, ಅವುಗಳು ಸಾಯುತ್ತಾ ಇವೆ. ಸಹಸ್ರಾರು ಸಂಖ್ಯೆಗಳಲ್ಲಿ ಜಾನುವಾರುಗಳು ಕಟುಕರ ಖಾನೆಗೆ ಹೋಗುತ್ತಾ ಇವೆ. ಪ್ರತಿದಿನವೂ ಇಷ್ಟು ದೊಡ್ಡ ಸಂಖ್ಯೆಯಲ್ಲಿ, ದನಗಳು, ಎತ್ತುಗಳು, ಹೋರಿಗಳು ಈ ರೀತಿಯಲ್ಲಿ ನಾಶವನ್ನು ಹೊಂದುತ್ತಿದ್ದರೆ ಒಂದು ವೇಳೆ ಮುಂದಿನ ಸಲ ಕಾಂಗ್ರೆಸ್ ಪಕ್ಷವೇ ಆಡಳಿತಕ್ಕೆ ಬಂದೀತು ಎಂದು ಇಟ್ಟುಕೊಳ್ಳೋಣ, ಆಗ ಮಳೆಬೆಳೆ ಆಗಿ ಎಲ್ಲವೂ ಸರಿಹೋದರೆ ರೈತರು ಸಾಗುವಳಿ ಮಾಡುವುದಕ್ಕೆ ಜಾನುವಾರುಗಳನ್ನು ತರಬೇಕಾದಾರೆ ಅದಕ್ಕೆ ಏನು ಪರ್ಯಾಯ ವ್ಯವಸ್ಥೆ ಮಾಡುತ್ತೀರಿ ? ಅದಕ್ಕಾಗಿ ಹಣವನ್ನು ಇಟ್ಟಿದ್ದೀರಾ ? ಈರೀತಿಯಾಗಿ ನಾಶಹೊಂದುತ್ತಿರುವ ಜಾನುವಾರುಗಳ ಕುರಿತಾಗಿ ಚಿಂತನೆಯನ್ನು ನಡೆಸಿದ್ದೀರಾ ! ನಾವು ಹೀಗೆ ಪಶುಸಂಪತ್ತನ್ನು ಬಿಡುತ್ತಾ ಹೋದರೆ ಮುಂದಿನ ಪರ್ಯಾಯ ವ್ಯವಸ್ಥೆಗಾಗಿ ಬಜೆಟ್‌ನಲ್ಲಿ ಹಣವನ್ನು ನೀವು ಇಟ್ಟಿದ್ದೀರಾ ?

ಅಧ್ಯಕ್ಷರೆ, ನಮ್ಮ ಮಲೆನಾಡಿನಲ್ಲಿ ಬೇಕಾದಷ್ಟು ಹುಲ್ಲು ಇತ್ತು. ಇವರಿಗೆ ಬರಗಾಲದ ಪರಿಸ್ಥಿತಿಯ ಪ್ರಜ್ಞೆ ಇದ್ದಿದ್ದರೆ, ಅದನ್ನು ಎದುರಿಸಬೇಕೆಂಬ ಯೋಚನೆ ಇದ್ದಿದ್ದರೆ ಅದನ್ನು ಸಂಗ್ರಹಣೆ ಮಾಡುವ ಕಾರ್ಯವನ್ನು ನಡೆಸಬಹುದಾಗಿತ್ತು.

ಮಲೆನಾಡಿನಲ್ಲಿ ಇದ್ದ ಹುಲ್ಲನ್ನೆಲ್ಲಾ ಅವರು ಉಪಯೋಗಿಸಿಕೊಳ್ಳಬಹುದಿತ್ತು. ಇವರು ಹುಲ್ಲನ್ನು ಪಂಜಾಬಿನಿಂದ ತರಿಸಿಕೊಳ್ಳುತ್ತಿದ್ದಾರೆ. ಇವತ್ತು ಇಲ್ಲಿನ ಹುಲ್ಲು ಒಣಗಿ ಬೆಂಕಿ ಬಿದ್ದುಹೋಯಿತು. ಇಷ್ಟೂ ಜವಾಬ್ದಾರಿ ಇಲ್ಲದ ವ್ಯಕ್ತಿಗಳಿದ್ದಾರಲ್ಲಾ ಎಂದು ಬೇಸರವಾಗಿದೆ. ಇವರು ಬರಗಾಲಕ್ಕಾಗಿ ದಿವಸಕ್ಕೆ ಒಂದು ಕೋಟಿ ರೂಪಾಯಿ ಖರ್ಚುಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಅವರ ಹತ್ತಿರ ಅಷ್ಟು ದುಡ್ಡು ಇದೆಯೆ ? ಅವರು ಹೇಗೆ ಈ ಮಾತನ್ನು ಹೇಳುತ್ತಿದ್ದಾರೆ. ಅದಕ್ಕೆ ಅರ್ಥವಿದೆಯೋ ? ಪತ್ರಿಕೆಗಳಲ್ಲಿ ಸುಮ್ಮನೇ ಹೇಳಿಕೆಗಳು ಕೊಟ್ಟರೆ. ಆದೇಶಕ್ಕೇನಾದರೂ ಅರ್ಥವಿದೆಯೋ ? ಇನ್ನು ಇವತ್ತು ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಅಷ್ಟು ಗಂಭೀರವಾದ ಪ್ರಸ್ತಾಪ ಮಾಡಿಲ್ಲ ಎಂದು ಹೇಳುತ್ತೇನೆ. ಈ ೨೦ ಅಂಶಗಳ ಕಾರ್ಯಕ್ರಮದಿಂದ ಬಡವರಿಗೆ ಎಷ್ಟು ಅಗತ್ಯವಿದೆ, ಎಂಬುದರ ಬಗ್ಗೆ ಇವರಿಗೆ ಕಾಳಜಿ ಇಲ್ಲ. ಬಡಬಗ್ಗರಿಗಾಗಿ ಈ ಕಾರ್ಯಕ್ರಮವಿದೆ, ಅವುಗಳನ್ನು ತೀವ್ರಗತಿಯಲ್ಲಿ ಅನುಷ್ಠಾನಕ್ಕೆ ತರುವುದರಲ್ಲೇ ಇವರಿಗೆ ಕಾಳಜಿ ಇಲ್ಲ. ಮಲೆನಾಡಿನಲ್ಲಿ, ನೇಕ ಪ್ರದೇಶದಲ್ಲಿ ನಿವೇಶನಗಳನ್ನು ಹಂಚುವ ಬಗ್ಗೆ ಪ್ರಸ್ತಾಪವೇ ಇಲ್ಲ. ಮನೆಮಠ ಇಲ್ಲದವರು. ವಾಸಕ್ಕೆ ಸೂರು ಇಲ್ಲದವರು ಕರ್ನಾಟಕ ರಾಜ್ಯದಲ್ಲಿ ಲಕ್ಷಾಂತರ ಜನರಿದ್ದಾರೆ. ಅವರಿಗಾಗಿ ಒಂದು ನಿವೇಶನ ಕೊಟ್ಟಲ್ಲಿ, ಅವರಿಗೆ ನಿವೇಶನ ಕೊಟ್ಟಿದ್ದಾರೆ. ವಾಸಕ್ಕಾಗಿ ಒಂದು ಸೂರು ಕಟ್ಟಿಕೊಳ್ಳಲು ಅನುಕೂಲವಾಗುತ್ತಿತ್ತು. ಆ ಬಗ್ಗೆ ಪ್ರಸ್ತಾಪವೇ ಇಲ್ಲ. ಅರ್ಥವತ್ತಾದ ಮಾತಿನ ಲಹರಿಯೇ ಇವರಿಗೆ ಹರಿದಿಲ್ಲ. ಮಲೆನಾಡಿನಲ್ಲಿ ರೆವಿನ್ಯೂನವರು ಫಾರೆಸ್ಟಿನವರಿಗೆ ಆ ಪ್ರದೇಶವನ್ನು ಹ್ಯಾಂಡ್ ಓವರ್ ಮಾಡಿದ್ದಾರೆ. ಆದರೂ ಅವರಿಗೆ ಸೈಟು ಕೊಡುವ ಪ್ರಸ್ತಾಪವಿಲ್ಲ, ಈ ಬಗ್ಗೆ ಸರ್ಕಾರದ ಗಮನವೂ ಹರಿದಂತೆ ಕಾಣುತ್ತಿಲ್ಲ. ಬಡವರಿಗಾಗಿ ಅಂಗೈಯಲ್ಲಿ ಅರಮನೆ ತೋರಿಸುವ ಬಗ್ಗೆ ಸಭೆ, ಸಮಾರಂಭಗಳಲ್ಲಿ ಭಾಷಣ ಮಾಡುತ್ತಾರೆ. ಇಲ್ಲಿ ವಸ್ತುಸ್ಥಿತಿಯೇ ಇಲ್ಲ. ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಇರುವ ಸರ್ಕಾರ ಇದಾಗಿದ್ದರೆ ತೀವ್ರತರದಲ್ಲಿ ಕಾಳಜಿ ವಹಿಸಿ, ೨೦ ಅಂಶಗಳ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕಾಗಿತ್ತು ಇನು ಜನತಾ ಮನೆಗಳ ಬಗ್ಗೆ ಸದಸ್ಯರು ಪ್ರಸ್ತಾಪ ಮಾಡಿದರು. ಜನತಾ ಮನೆಗಳ ಪ್ರಸ್ತಾಪವೇ ಈ ಭಾಷಣದಲ್ಲಿ ಇಲ್ಲ. ಇವತ್ತು ನಮ್ಮ ತಾಲ್ಲೂಕಿನಲ್ಲಿ ಸುಮಾರು ೮ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ, ಮನೆಗಳನ್ನು ಕಟ್ಟಿದರು. ಆದರೆ, ಅದು ಅರ್ಧಕ್ಕೇ ಹಾಗೇ ಉಳಿದಿದೆ. ಇನ್ನು ೨ ತಿಂಗಳಲ್ಲಿ ಮಳೆ ಬರುತ್ತದೆ. ಆಗ ಮನೆಗಳು ಬಿದ್ದುಹೋಗುತ್ತವೆ ಹೆಂಚು, ಮರ ಕೊಟ್ಟವರು ಬಂದು ಅವರಿಗೆ ತೊಂದರೆ ಕೊಡುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಯೋಚನೆ ಮಾಡಿಲ್ಲ. ಅರ್ಧ ಕಟ್ಟಿದ ಮನೆಗಳನ್ನು ಪೂರ್ತಿ ಮಾಡಲು ಸರ್ಕಾರ ವ್ಯವಸ್ಥೆ ಮಾಡಬೇಕಾಗಿದೆ. ನಿಮ್ಮಲ್ಲಿ ಹಣ ಇಲ್ಲದೇಹೋದರೆ. ಎನ್‌ಆರ್‌ಇಪಿ, ಆರ್‌ಎಲ್‌ಜಿಪಿ, ಡಿಪಿಎಪಿ ಮುಖಾಂತರ ಯೋಜನೆಗಳನ್ನು ಹಾಕಿಕೊಂಡು ಕೆಲಸಗಳನ್ನು ಪೂರ್ಣಗೊಳಿಸಬೇಕಾಗಿತ್ತು. ಇದರಿಂದ ಬಡವರಿಗೆ ಅನುಕೂಲವಾಗುತ್ತಿತ್ತು. ಆ ರೀತಿ ಮಾಡಿದ್ದರೆ, ನೀವು ಸಭೆ, ಸಮಾರಂಭಗಳಿಗೆ ಹೋದಾಗ ಗೌರವ ಸಿಕ್ಕುತ್ತಿತ್ತು. ಮತ್ತೊಂದು ವಿಚಾರ ಏನೆಂದರೆ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕನ್ನಡದ ಬಗ್ಗೆ ವಿವರವಾಗಿ

ಪ್ರಸ್ತಾಪ ಮಾಡಿಲ್ಲ. ಬರಿ ಸಾಂಪ್ರದಾಯವಾಗಿ ಮಾತ್ರ ಕನ್ನಡ ಆಡಳಿತ ಭಾಷೆ ಎಂದು ಹೇಳಿದ್ದಾರೆ. ಇನ್ನು ಮುಂದೆ ಕನ್ನಡವೇ ಆಡಳಿತ ಭಾಷೆಯೆಂದು ಹೇಳಿದ್ದಾರೆ. ಆದರೆ ಅಧಿಕಾರಿಗಳ ಮಟ್ಟದಲ್ಲಿ ಜಾರಿಗೆ ಬಂದಿದೆಯೇ ? ಮಾನ್ಯ ಮುಖ್ಯ ಮಂತ್ರಿಗಳ ಕಛೇರಿಯಲ್ಲಿ ಕನ್ನಡದಲ್ಲಿಯೇ ವ್ಯವಹಾರ ನಡೆಯುತ್ತಿದೆಯೇ ? ಒಂದಾದರೂ ಕನ್ನಡ ಬೆರಳಚ್ಚು ಯಂತ್ರ ಅವರ ಕಛೇರಿಯಲ್ಲಿದೆಯೇ ? ಅಲ್ಲಿ ವ್ಯವಹಾರವೆಲ್ಲಾ ಇಂಗ್ಲಿಷಿನಲ್ಲಿಯೇ ನಡೆಯುತ್ತಿದೆ ಆದರೆ, ಕನ್ನಡ ಬಗ್ಗೆ ಅವರ ಮಾತು ಕೇವಲ ಮಾತಾಗದೇ, ಕಾರ್ಯಗತವಾಗಿರಬೇಕು. ಜವಾಬ್ದಾರಿಯುತವಾಗಿ ಎಲ್ಲಾ ವ್ಯವಹಾರಗಳನ್ನು ಕನ್ನಡ ದಲ್ಲಿಯೇ ನಡೆಸಬೇಕು. ಅಧಿಕಾರಿಗಳ ಮಟ್ಟದಲ್ಲಿ ಕನ್ನಡವು ಆಡಳಿತದಲ್ಲಿ ಬಂದರೆ, ಮತ್ತು ಸಚಿವರ ಮಟ್ಟದಲ್ಲೂ ಆಡಳಿತದಲ್ಲಿ ಕನ್ನಡ ಜಾರಿಗೆ ಬಂದರೆ ಅವರೆಲ್ಲ ಕನ್ನಡದಲ್ಲೇ ಸಂಪೂರ್ಣ ವ್ಯವಹಾರವನ್ನು ನಡೆಸಿದರೆ, ತಾಲ್ಲೂಕು ಮಟ್ಟದಲ್ಲಿ, ಗ್ರಾಮಾಸ್ತರ ಮಟ್ಟದಲ್ಲಿ ಕನ್ನಡವು ಆಡಳಿತದಲ್ಲಿ ಬಂದು, ಕನ್ನಡವು ಆಡಳಿತ ಭಾಷೆಯಾಗಿ ಜನರ ಮನಸ್ಸಿನಲ್ಲಿ ಬೇರೂರಲು ಸಾಧ್ಯವಾಗುತ್ತದೆ. ಅಮೇಲೆ, ವಿಶ್ವ ಕನ್ನಡ ಸಮ್ಮೇಳನದಂದು ಇವರು ಒಂದು ಪುಸ್ತಕವನ್ನು......

ಅಧ್ಯಕ್ಷರು.— ಇದರ ಬಗ್ಗೆ ಸಾಕಷ್ಟು ಜನ ಹೇಳಿದ್ದಾರೆ. ಹೊಸ ವಿಷಯ ಇದ್ದರೆ ಹೇಳಿ.

ಶ್ರೀ ಪಟವರ್ಧಿ ರತ್ನಾಕರ್ — ಇವರು ಚೆಲುವ ಕನ್ನಡ ನಾಡು ಎಂಬ ಒಂದು ಪುಸ್ತಕವನ್ನು ಹೊರಡಿಸಿದರು ಮೈಸೂರು ರಾಜ್ಯವನ್ನು ಕರ್ನಾಟಕವೆಂದು ಹೆಸರಿಸಿದವರು ಶ್ರೀ ದೇವರಾಜ ಅರಸರು ಕಾಂಗ್ರೆಸ್ ಕರ್ನಾಟಕದಲ್ಲಿರತಕ್ಕಂತಹ ಹಲವಾರು ಸಮಸ್ಯೆಗಳನ್ನು ಎದುರಿಸಿ ಕನ್ನಡವನ್ನು, ಸಂಸ್ಕೃತಿ ಯನ್ನು ಉತ್ತಮಪಡಿಸಿದೆ. ಇವರು ಬಂದು ೨ ವರ್ಷಗಳೂ ಇದು ಇನ್ನೂ ಉತ್ತಮ ಆಗಲಿಲ್ಲ. ಚೆಲುವ ಕನ್ನಡ ನಾಡು ಎಂದು ಒಂದು ಪುಸ್ತಕದ ಪ್ರಕಟಣೆಯನ್ನು ಮಾಡಿಸಿದ್ದಾರೆ, ಸಾಹಿತ್ಯದ ಮೂಲಕ ಪ್ರಚಾರನ್ನು ಪಡೆಯಲು, ತಮ್ಮ ಪ್ರತಿಷ್ಠೆ ಕೀರ್ತಿಯನ್ನು ಹೆಚ್ಚಿಸಿಕೊಳ್ಳಲು ಹೋಗುತಿದ್ದಾರೆ. ಚೆಲುವ ಕನ್ನಡ ನಾಡು ಎಂಬ ಪುಸ್ತಕವನ್ನು ಇವರು ವಿಕಾಸ ಪ್ರಕಾಶನ, ದೆಹಲಿ, ಇಲ್ಲಿಂದ ಪ್ರಕಟಣೆ ಮಾಡಿ ಸಿದ್ದಾರೆ ಅಲ್ಲದೆ, ಇದನ್ನು ಸಿಂಗಪೂರದಲ್ಲಿ ಪ್ರಿಂಟ್ ಮಾಡಿಸಿದ್ದಾರೆ. ಇದಕ್ಕೆ ತಗುಲಿರುವ ವೆಚ್ಚ ಸುಮಾರು ೧೬ ಲಕ್ಷ ರೂಪಾಯಿಗಳು. ಬರಗಾಲದ ಬವಣೆಯಲ್ಲಿರುವ ನಮ್ಮ ಕರ್ನಾಟಕ ರಾಜ್ಯದ ಇಂತಹ ಪರಿಸ್ಥಿತಿಯಲ್ಲಿ ಇರುವ ಈ ಒಂದು ಪುಸ್ತಕದ ಪ್ರಕಟಣೆಗಾಗಿ ೧೬ ಲಕ್ಷದಷ್ಟು ಖರ್ಚು ಮಾಡಿ ದ್ದಾರಲ್ಲಾ ಅದೂ ಸಿಂಗಪೂರ್‌ನಲ್ಲಿ ಇದು ಸರಿಯೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರಿಂಟ್ ಮಾಡಿಸಲು ಇವರಿಗೆ ವ್ಯವಸ್ಥೆ ಇರಲಿಲ್ಲವೇ ? ಅಷ್ಟೇ ಅಲ್ಲ, ಮುಂಬೈನಲ್ಲಿ ಮಾರ್ಗ ಪಬ್ಲಿಕೇಷನ್ ಇದೇ ರೀತಿ ೮ ನೂರು ಪುಸ್ತಕಗಳನ್ನು ಹೊಯ್ಸಳ ಮತ್ತು ಗೊಮ್ಮಟೇಶ್ವರ ಬಗ್ಗೆ ಕೇವಲ ೫ ಲಕ್ಷ ರೂಪಾಯಿ ಖರ್ಚು ಮಾಡಿ ಪ್ರಕಟಿಸಿದ್ದಾರೆ. ಇವರು ೧೬ ಲಕ್ಷ ರೂಪಾಯಿ ಖರ್ಚುಮಾಡಿ, ಸಿಂಗಪೂರ್‌ನಲ್ಲಿ ಪ್ರಿಂಟ್ ಮಾಡಿಸುವ ಅಗತ್ಯವಾದರೂ ಏನಿತ್ತು ? ಆಡಳಿತ ಸೂತ್ರವನ್ನು ಹಿಡಿದಿರತಕ್ಕಂತಹ ಇವರು, ಕರ್ನಾಟಕದ ಆಗುಹೋಗುಗಳ ಜವಾಬ್ದಾರಿಯನ್ನು ಹೊತ್ತಿರತಕ್ಕಂತಹ ಈ ವ್ಯಕ್ತಿಗಳು ಸಂದರ್ಭೋ ಚಿತವಾಗಿ ಸರ್ಕಾರವನ್ನು ನಡೆಸಲು ಈರೀತಿ ದುಂದುವೆಚ್ಚವನ್ನು ಮಾಡಬಾರದು ಎಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ ೫ ಲಕ್ಷ ರೂಪಾಯಿಗಳು ಎಲ್ಲಿ, ಈ ೧೬ ಲಕ್ಷ ರೂಪಾಯಿಗಳು ಎಲ್ಲಿ ? ದಯ ಮಾಡಿ ತಾವೇ ಈ ವಿಷಯವನ್ನು ಸ್ವಲ್ಪ ಯೋಚನೆ ಮಾಡಬೇಕು.

ಅಧ್ಯಕ್ಷರು.— ತಾವು ಎಷ್ಟು ಸಾರಿ ಈ ವಿಷಯವನ್ನು ಹೇಳುತ್ತೀರಿ ?

ಶ್ರೀ ಪಟವರ್ಧಿ ರತ್ನಾಕರ್.— ಇದು ಬಡವರ ದುಡ್ಡು, ಕೂಲಿ ಮಾಡತಕ್ಕಂಥ ಜನರ ದುಡ್ಡು, ಬರೀ ಒಂದು ಪಬ್ಲಿಕೇಶನ್‌ಗೆ ಇಷ್ಟೊಂದು ಹಣವನ್ನು ಖರ್ಚು ಮಾಡಿದರೆ ಹೇಗೆ ? ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವುದೂ ಇಂತಹ ಚೆನ್ನಾಗಿ ಪ್ರಿಂಟ್ ಮಾಡುವಂತಹ ಪ್ರೆಸ್ ಇರಲಿಲ್ಲವೆ, ಇಲ್ಲವೆಂದು ಯಾರಾದರೂ ಮಾನ್ಯ ಮಂತ್ರಿಗಳು ಹೇಳಲಿ ನೋಡೋಣ. ಸಿಂಗಪೂರಕ್ಕೆ ಹೋಗಿ ಆ ಪುಸ್ತಕವನ್ನು ಪ್ರಿಂಟ್ ಮಾಡಿಸಿ ಕೊಡಬೇಕೆನ್ನುವ ಅವಶ್ಯಕತೆ ಯಾದರೂ ಏನಿತ್ತು ? ಇವತ್ತು ಕರ್ನಾಟಕ ರಾಜ್ಯದ ಜನ ಬರಗಾಲಕ್ಕೆ ತುತ್ತಾಗಿರುವಾಗ ನೀರಿಗಾಗಿ ಜನ ಆತೊರೆಯುತ್ತಿರುವಾಗ, ಹೊಟ್ಟೆಗೆ ಅನ್ನವಿಲ್ಲದೆ ಸಾಯುತ್ತಿರುವಾಗ ಈ ಕೆಲಸವನ್ನು ಇವರು ಏತಕ್ಕೆ ಮಾಡಿಸಬೇಕಾಗಿತ್ತು.

ಅಧ್ಯಕ್ಷರು.— ಆ ವಿಷಯವನ್ನು ಬಿಟ್ಟು ತಾವು ಬೇರೆ ಯಾವ ವಿಷಯವನ್ನು ಹೇಳುವುದು ಇಲ್ಲ. ಮಾತು ಮುಗಿಸುವುದು ಇಲ್ಲ.

ಶ್ರೀ ಪಟ್ಟಮಕ್ಕಿ ರತ್ನಾಕರ್.— ಸರ್ಕಾರದ ಬೇಜವಾಬ್ದಾರಿ ತನಕ್ಕೆ ನಾನು ಈ ಮಾತನ್ನು ಹೇಳಬೇಕಾಗಿದೆ. ಕರ್ನಾಟಕ ರಾಜ್ಯದ ಆಗುಹೋಗುಗಳ ಬಗ್ಗೆ ಸರ್ಕಾರಕ್ಕೆ ಸ್ವಲ್ಪವೂ ಕಾಳಜಿ ಇಲ್ಲ. ಜನರ ಕಾಳಜಿಯನ್ನು ಅರ್ಥ ಮಾಡಿಕೊಂಡು ಅವರ ಭಾವನೆಗಳಿಗೆ ಸ್ಪಂದನ ಮಾಡುವಂತಹ ಕೆಲಸ ಈ ಸರ್ಕಾರ ಮಾಡಲಿಲ್ಲವೆಂದರೆ ಹೇಗೆ ? ಇದೇ ರೀತಿ ಈ ಸರ್ಕಾರ ತನ್ನ ಆಡಳಿತವನ್ನು ಮುಂದುವರಿಸಿಕೊಂಡು ಹೋದರೆ ಕರ್ನಾಟಕ ರಾಜ್ಯ ಆರ್ಥಿಕವಾಗಿ, ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಮುಂದೆ ಬರುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು.— ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಸುಮಾರು ೨೫ ನಿಮಿಷಗಳು ಆಯಿತು. ತಾವು ಬೇಗ ಮುಕ್ತಾಯ ಮಾಡಿ ತಮ್ಮ ಭಾಷಣವನ್ನು.

ಶ್ರೀ ಪಟ್ಟಮಕ್ಕಿ ರತ್ನಾಕರ್.— ಮಾನ್ಯ ಅಧ್ಯಕ್ಷರೇ ಸರ್ಕಾರದ ಬೇಜವಾಬ್ದಾರಿ ತನಕ್ಕೆ ನಾನು ಈ ಮಾತನ್ನು ಹೇಳಬೇಕಾಯಿತು.

ಅಧ್ಯಕ್ಷರು.— ಇಲ್ಲ ತಾವು ಮುಗಿಸಿ. ಬೇರೆಯವರಿಗೆ ಅವಕಾಶ ಬೇಡವೇನು ?

ಶ್ರೀ ಪಟಮಕ್ಕಿರತ್ನಾಕರ್.—ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ ಎ. ಚಿನ್ನಪ್ಪ (ಮಡಿಕೇರಿ).— ಮಾನ್ಯ ಅಧ್ಯಕ್ಷರೇ, ಇವತ್ತು ಕರ್ನಾಟಕ ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಬಡತನವೆಂಬುದು ಹೆಚ್ಚಾಗುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಾವು ಬರಗಾಲ ಪರಿಸ್ಥಿತಿಯಲ್ಲಿರುವಾಗ ಆ ಬರಗಾಲ ಪರಿಸ್ಥಿತಿಯನ್ನು ಯಾವ ರೀತಿಯಲ್ಲಿ ನಿವಾರಣೆ ಮಾಡಬೇಕು, ಯಾವ ಯಾವ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಳ್ಳಬೇಕಾಗಿತ್ತೋ ಆ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿಲ್ಲ. ಆದ್ದರಿಂದ ಇವತ್ತು ಜನತೆ ಹೊಟ್ಟೆಗೆ ಅನ್ನವಿಲ್ಲದೆ ಬಟ್ಟೆ ಇಲ್ಲದೆ ಈ ರಾಜ್ಯದಿಂದ ಪಾರಾಗಿ ಪರರಾಜ್ಯಕ್ಕೆ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಅದೇ ರೀತಿಯಲ್ಲಿ ಜಾನುವಾರುಗಳಿಗೆ ಮೇವು ಇಲ್ಲ. ಇರತಕ್ಕಂಥ ಮೇವು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೋ ಆ ರೀತಿಯಲ್ಲಿ ಉಪಯೋಗಿಸಿಕೊಳ್ಳಲಿಲ್ಲ. ಸರ್ಕಾರ ಬೇಜವಾಬ್ದಾರಿತನದಿಂದ ವರ್ತನೆ ಮಾಡುತ್ತಿದೆ ಎನ್ನುವುದಕ್ಕೆ ನಾನು ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಕೊಡಗು ಜಿಲ್ಲೆಯ ವಿಷಯವನ್ನೇ ನಾನು ಹೇಳುತ್ತೇನೆ. ಕೊಡಗಿನಲ್ಲಿ ಸುಮಾರು ೧೯ ಲಕ್ಷ ರೂಪಾಯಿಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಆದರೆ ಜನವರಿ ೨೫ನೇ ತಾರೀಖಿಗೆ ಸುಮಾರು ೨೧ ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ೧೯ ಲಕ್ಷ ರೂಪಾಯಿಗಳಲ್ಲಿ ಬರೀ ೨೧ ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಇದೇ ರೀತಿಯಲ್ಲಿ ರಾಜ್ಯದ ಎಲ್ಲಾ ಭಾಗಗಳಲ್ಲಿ ಖರ್ಚು ಮಾಡಿದ್ದಾರೆಂದರೆ ಅದು ತಪ್ಪಾಗುವುದಿಲ್ಲ. ಇಷ್ಟು ಹಣ ಯಾವ ರೀತಿಯಲ್ಲಿ ಖರ್ಚಾಗಿದೆ ಎಂಬುದನ್ನು ಸಹ ನಾವು ನೋಡಬೇಕಾಗಿದೆ. ಆಮೇಲೆ ಕೊಡಗು ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಕೆಲಸಗಳು ಎಂದರೆ ಸೋಮವಾರಪೇಟೆಯಲ್ಲಿ ೭ ವೀರಾಜಪೇಟೆಯಲ್ಲಿ ೬ ಅಂದರೆ ಒಟ್ಟು ೧೩ ಕೆಲಸಗಳನ್ನು ಮಾತ್ರ ಸರ್ಕಾರದವರು ತೆಗೆದುಕೊಂಡಿದ್ದಾರೆ. ಈ ಎಲ್ಲಾ ಕೆಲಸಗಳಿಗೂ ಸರ್ಕಾರದವರು ಖರ್ಚು ಮಾಡಿರುವ ಹಣವೆಂದರೆ ಬರೀ ೪ ಲಕ್ಷ ೬೧ ಸಾವಿರ ರೂಪಾಯಿಗಳು ಮಾತ್ರ. ಸರ್ಕಾರದವರಿಗೆ ಕೆಲಸಕ್ಕೆ ಸಿಕ್ಕಿರುವ ಜನ ಕೇವಲ ೪೦೦ ಜನರು ಮಾತ್ರ. ಇವರು ಇನ್ನು ೧೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾದರೆ ಇನ್ನೂ ೩-೪ ವರ್ಷಗಳು ಬೇಕಾಗುತ್ತದೆ. ಬೇಕಾದಷ್ಟು ಜನ ಕೆಲಸಕ್ಕೆ ಸಿಗತಕ್ಕಂಥ ಕಾಲದಲ್ಲಿ ಕೆಲಸವಿಲ್ಲದೆ ಜನ ಅಲೆಯುತ್ತಿರುವಂಥ ಕಾಲದಲ್ಲಿ ಇವರು ಬರೀ ೪೦೦ ಜನರಿಗೆ ಮಾತ್ರ ಕೆಲಸ ಕೊಟ್ಟಿದ್ದಾರೆ. ಇದೇ ರೀತಿಯಲ್ಲಿ ಕಳೆದ ಸಾರಿ ಕೊಟ್ಟಂತಹ ಹಣವನ್ನು ಸಹ ಲ್ಯಾಪ್ಸ್ ಮಾಡಿದ್ದಾರೆ. ಆ ಸಾರಿ ಜನರಿಗೆ ಉದ್ಯೋಗ ಕೊಟ್ಟಿಲ್ಲ. ಮತ್ತೆ ಕೊಡಗು ಜಿಲ್ಲೆಯಲ್ಲಿ ಸುಮಾರು ೮೦ ಲೋಡ್ ಹುಲ್ಲು ಸಂಗ್ರಹಣೆ ಮಾಡಿ ಇಟ್ಟಿದ್ದಾರೆ. ಆದರೆ ಕಳುಹಿಸಿಕೊಟ್ಟಿರತಕ್ಕಂಥದ್ದು ಕೇವಲ ೪ ಲೋಡ್ ಹುಲ್ಲು ಮಾತ್ರ. ಇಂತಹ ಸರ್ಕಾರವನ್ನು ಬೇಜವಾಬ್ದಾರಿಯುತವಾದ ಸರ್ಕಾರವೆಂದು ಕರೆದರೆ ಖಂಡಿತವಾಗಿ ತಪ್ಪಾಗುವುದಿಲ್ಲ. ಇದೇ ಮಾತನ್ನು ನಾನು ಒತ್ತಿ ಒತ್ತಿ ಹೇಳಬೇಕಾಗುತ್ತದೆ. ಕೊಡಗಿನ ಫಾರೆಸ್ಟ್‌ನಲ್ಲಿ ಸುಮಾರು ೪೦ ಟನ್ ಫಾರೆಸ್ಟ್ ಫಾಡರ್ ಇತ್ತು. ಆ ಫಾಡರ್ ಅನ್ನು ಸರ್ಕಾರದವರು ಉಪಯೋಗಿಸಿಕೊಳ್ಳಲಿಲ್ಲ ಈ ಸರ್ಕಾರ ಜನತೆಗೆ ಆಹಾರ ಮತ್ತು ಜಾನುವಾರುಗಳಿಗೆ ಹುಲ್ಲು ಕೊಡಲಿಲ್ಲ. ಆದ್ದರಿಂದ ಬೇಜವಾಬ್ದಾರಿಯುತ ಸರ್ಕಾರವೆಂದು ಹೇಳ

ಬೇಕಾಗುತ್ತದೆ. ಇವತ್ತು ಕೊಡಗು ಜಿಲ್ಲೆಗೆ ಬೇರೆ ಕಡೆಯಿಂದ ಸುಮಾರು ೫-೬ ಸಾವಿರ ಜನ ಬಂದಿದ್ದಾರೆ. ಸೌತ್ ಕೆನರಾದಿಂದ ಬಂದಿದ್ದಾರೆ. ದಾವಣಗೆರೆಯಿಂದ ಬಂದಿದ್ದಾರೆ. ನಮ್ಮ ಮಾನ್ಯ ಸದ್ಯಸಿ. ಯುವರಾದ ಶ್ರೀಮತಿ ಪಾಲಿ ಅಯ್ಯಪ್ಪನವರ ತೋಟದಲ್ಲಿ ಸುಮಾರು ೧೫೦ ಜನ ಕೆಲಸ ಮಾಡುತ್ತಿದ್ದಾರೆನಿ ಆ ಜನರನ್ನು ಕೊಡಗಿನ ಜನ ರಕ್ಷಣೆ ಮಾಡುತ್ತಿದ್ದಾರೆಂದರೆ ತಪ್ಪಾಗುವುದಿಲ್ಲ. ಆಮೇಲೆ ನಮ್ಮ ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ಜೀವಿಜಯರವರು ಫಾರೆಸ್ಟ್ ಬೆಳೆಸುತ್ತೇನೆಂದು ಹೇಳಿ ಫಾರೆಸ್ಟ್ ಅನ್ನು ಕಡಿಸುತ್ತಿದ್ದಾರೆ. ಇವತ್ತು ಕೊಡಗಿನಲ್ಲಿ ಸುಮಾರು ಹನ್ನೆರಡುವರೆ ಸಾವಿರ ಫಾರೆಸ್ಟನ್ನು ಕಡಿದು ಟೀ ತೋಟವನ್ನು ಮಾಡಲು ಹೊರಟಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಇದುವರೆವಿಗೂ ಬರಗಾಲ ಇದ್ದಿಲ್ಲ. ಆದರೆ ಈ ಸಾರಿ ಸುಮಾರು ೮೦ ಗ್ರಾಮಗಳಲ್ಲಿ ಬರಗಾಲ ಇದೆ. ಆ ಜನ ಇವತ್ತು ಬರಗಾಲದಿಂದ ಬಳಲುತ್ತಿದ್ದಾರೆ. ಆ ೮೦ ಗ್ರಾಮಗಳಿಗೆ ಯಾವುದೇ ಪ್ರಯೋಜನ ಸರ್ಕಾರದಿಂದ ಸಿಕ್ಕಿಲ್ಲ. ಕೊಡಗು ಜಿಲ್ಲೆಯಲ್ಲಿ ದೇವರ ಕಾಡು ಸುಮಾರು ೫ ಸಾವಿರ ಚಿಲ್ಲರೆ ಎಕರೆಗಳು ಇದೆ. ಆ ದೇವರ ಕಾಡು ಪ್ರದೇಶವನ್ನು ನಾಶ ಮಾಡಿ ಅಲ್ಲಿ ಬೇರೆ ಜನರನ್ನು ತಂದು ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಈ ಬಗ್ಗೆ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಅದೇನೆಂದರೆ ಅದು ಈ ರೀತಿ ಇದೆ.

In Indian Express, dated 20th January, 1986, under MALNAD NOTE BOOK, it has been appeared thus:

'AXED

MADIKERE ; Who will guard the guardians? This question is on the lips of the tree lovers of this green belt area where 10 acres of thick forest at Kumber in Somwarpet taluk, is facing extinction.

The forest department which has the responsibility of protecting the forest, has taken an usual step to clear the reserve forest which is right at the entrance of the residence of the Forest Minister, Mr. B. A. Jivijaya, It is a case of fence eating the crops.

The beauty of the hill forest is slowly disappearing due to the indiscriminate destruction towering trees on the hill slopes of the high land.

The media representatives who visited the spot to study the extension of damage were helpless on lookers who witnessed the destruction of nature under the supervision of a forest guard, Axe had fallen on hundreds of valuable trees. They were felled by a private contractor engaged by the forest department,

The Forest Minister advises the people to grow more trees. But he has not prevented his staff from felling trees. The left hand negates what the right hand does :"ಎಂದು

ಹೀಗೆ ನಾವು ಯಾವ ರೀತಿಯಲ್ಲಿ ಕರ್ನಾಟಕ ರಾಜ್ಯದ ಸಂಪತ್ತನ್ನು ಬೆಳೆಸಿಕೊಂಡು ಹೋಗುತ್ತಿದ್ದೇವೆಂದು ಗೊತ್ತಾಗುತ್ತದೆ. ಮಾನ್ಯ ಅಧ್ಯಕ್ಷರೇ ಕೊಡಗಿನಲ್ಲಿ ೪ ಲಕ್ಷ ೬೦ ಸಾವಿರ ಜನಸಂಖ್ಯೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ೩ ಲಕ್ಷ ಜನ ಬಡವರಿದ್ದಾರೆ. ಇದರಲ್ಲಿ ಸುಮಾರು ೧೨ ಸಾವಿರ ಜನರಿಗೆ ಮಾತ್ರ ಗ್ರೀನ್ ಕಾರ್ಡ್ ದೊರೆತಿದೆ. ಇದರಲ್ಲಿ ೨-೩ ಎಕರೆ ತೋಟಗಳನ್ನು ಇಟ್ಟುಕೊಂಡಿರುವವರಿಗೂ

ಮತ್ತು ೫-೧೦ ಸಾವಿರ ರೂಪಾಯಿಗಳ ಆದಾಯವಿರುವವರಿಗೂ ಈ ಗ್ರೀನ್ ಕಾರ್ಡ್ ಕೊಟ್ಟಿದ್ದಾರೆ. ಈ ವಿಷಯದಲ್ಲಿ ಅಲ್ಲಿನ ಜನ ಚಳುವಳಿ ಸಹ ಮಾಡಿದ್ದಾರೆ.

೨-೩೦ ಪಿ. ಎಂ.

ಇವತ್ತು ಜನ ಎರಡು ರೂಪಾಯಿನ ಅಕ್ಕಿಯನ್ನು ಕೊಂಡುಕೊಳ್ಳುತ್ತಿಲ್ಲ. ಕೊಡಗಿನಲ್ಲಿ ತಹಸೀಲ್ದಾರ್‌ರವರು ಈ ಮಾತನ್ನು ಹೇಳುತ್ತಿದ್ದಾರೆ, ಕೊಡಗಿನ ಗೋಡೌನ್‌ನಲ್ಲಿ ಅಕ್ಕಿ ಬಿದ್ದಿದೆ, ಯಾರು ತೆಗೆದುಕೊಳ್ಳುತ್ತಿಲ್ಲ, ಕೊಡಗಿನ ಗೋಡಾನ್‌ನಲ್ಲಿ ಸರಕಾರ ಉಚಿತವಾಗಿ ಹಂಚತಕ್ಕ ಬಟ್ಟೆಗಳು ಅಂದರೆ ಸೀರೆ ಪಂಚೆ ಬಿದ್ದಿದೆ, ಯಾರೂ ತೆಗೆದುಕೊಳ್ಳುತ್ತಿಲ್ಲ ಎಂದು ತಹಸೀಲ್ದಾರ್‌ರವರು. ಫುಡ್ ಅಸಿಸ್ಟೆಂಟ್‌ರವರು ಹೇಳುತ್ತಿದ್ದಾರೆ. ಇದನ್ನು ನೋಡಿದಾಗ ಸರಕಾರದವರು ಯಾರಿಗೆ ಬೇಕು ಅವರಿಗೆ ಮಾತ್ರ ಗ್ರೀನ್ ಕಾರ್ಡನ್ನು ಕೊಟ್ಟುಕೊಂಡಿದ್ದಾರೆ ಎಂದು ಅರ್ಥವಾಗುತ್ತದೆ, ಇದರಲ್ಲಿ ಪಾಲಿಟಿಕ್ಸ್ ಸಮೇತ ಮಾಡಿರುತ್ತಾರೆ. ಸರಕಾರ ಎಷ್ಟರಮಟ್ಟಿಗೆ ಪಾರ್ಶಿಯಲ್ ಆಗಿ, ಎಷ್ಟರಮಟ್ಟಿಗೆ ಇಂಪಾರ್ಶಿಯಲ್ ಆಗಿ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಬೇಕಾಗುತ್ತದೆ. ಸುಮಾರು ಒಂದು ತಿಂಗಳ ಹಿಂದೆ ಚೀಫ್ ಎಂಜಿನಿಯರ್‌ರವರಿಂದ ಒಂದು ಆದೇಶ ಬಂತು. ಹತ್ತು ಅಡಿಷನಲ್ ಬಾವಿಗಳನ್ನು ಒಂದೊಂದು ತಾಲ್ಲೂಕಿಗೆ ಕೊಡುತ್ತೇವೆ, ಒಂದೊಂದು ಡಿಸ್ಟ್ರಿಕ್ಟ್‌ಕಿಲ್ಲಿ ಯಾವ ಯಾವ ಹಳ್ಳಿಗೆ ಬೇಕೂ ಲೆಕ್ಕಕೊಡಿ ಎಂದು ಹೇಳಿದರು. ನಾವು ಕೊಟ್ಟೆವು ನಾನು ಬಾವಿಗಳ ಬಗ್ಗೆ ಹೇಳುತ್ತಿದ್ದೇನೆ. ಇದರಲ್ಲಿ ನಮ್ಮ ರಾಜ್ಯ ಅರಣ್ಯ ಸಚಿವರಾದ ಹಾಗೂ ಕೊಡಗಿನ ಕೇರ್ ಟೇಕಿಂಗ್ ಮಿನಿಸ್ಟರ್‌ರವರಾದ ಶ್ರೀ ಜೀವಿಜಯರವರು ಬಹಳಷ್ಟು ಇನ್‌ಫ್ಲೂಯೆನ್ಸ್ ಮಾಡಿ ೧೫ ಬಾವಿಗಳನ್ನು ಸೋಮವಾರಪೇಟೆ ತಾಲ್ಲೂಕಿನಲ್ಲಿ ಮಾಡಿಸಿದ್ದಾರೆ. ಸರಕಾರ ಮಾಡತಕ್ಕ ಅನ್ಯಾಯವನ್ನು ನಾನು ಹೇಳುತ್ತೇನೆ. ಹದಿನೈದು ಬಾವಿಗಳನ್ನು ಸೋಮವಾರಪೇಟೆ ತಾಲ್ಲೂಕಿಗೆ ಮಾಡಿಸಿಕೊಂಡಿದ್ದಾರೆ. ಮಡಿಕೇರಿ ತಾಲ್ಲೂಕಿನಲ್ಲಿ ಕಾಂಗ್ರೆಸ್ ಎಂ.ಎಲ್.ಎ. ಇದ್ದಾರೆ ಎಂದು ಮಾಡಿರತಕ್ಕ ಕಿತಾಪತಿ ಇದು ಎಂದು ನಾನು ಹೇಳಬೇಕಾಗುತ್ತದೆ. I am sorry. there should be a limit for influence. for every thing there should be a limit.

ಶ್ರೀ ಜಿ. ನಾರಾಯಣಕುಮಾರ್.- ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದಾರೆ. ಅವರಿಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ಹೇಳಿ.

ಶ್ರೀ ಡಿ. ಎ. ಚಿನ್ನಪ್ಪ.— ನಾನು ಸಭಾಧ್ಯಕ್ಷರನ್ನುದ್ದೇಶಿಸಿ ಮಾತನಾಡುತ್ತಿದ್ದೇನೆ. ನೀವು ಸುಮ್ಮನೆ ಇರಿ. ಏನಾದರೂ ಹೇಳುತ್ತಿದ್ದರೆ ಮಧ್ಯ ಮಾತನಾಡಬೇಡಿ.

ಶ್ರೀ ಕೆ ಹೆಚ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ನಾರಾಯಣಕುಮಾರ್‌ರವರು ಹಗಲೆಲ್ಲಾ ಎದ್ದು ಈ ರೀತಿ ಮಾಡಿದರೆ, ನಾವೆಲ್ಲಾ ಇಂಗ್ಲಿಷಲ್ಲೇ ಮಾತನಾಡಬೇಕಾಗುತ್ತದೆ. ಕನ್ನಡ ಏನು ಒಬ್ಬರ ಮಾನಾಪಲಿಯೇ. ಇವರೊಬ್ಬರೇ ಶಿಖಾಮಣಿಯೋ?

ಶ್ರೀ ಜಿ. ನಾರಾಯಣಕುಮಾರ್.—ನೀವೆಲ್ಲಾ ಕನ್ನಡಕ್ಕೆ ವಿರುದ್ಧವಾದರೆ ನನಗೇನಿಲ್ಲ, ದೇಶದ ಜನ ಕೇಳುತ್ತಾರೆ.

ಶ್ರೀ ಕೆ. ಹೆಚ್. ಪಾಟೀಲ್.— ನಿಮ್ಮಂಥವರಿಂದಲೇ ದೇಶ ಹೀಗೆ ಆಗಿರುವುದು.

ಶ್ರೀ ಜಿ. ನಾರಾಯಣಕುಮಾರ್.— ಇಲ್ಲ ನಿಮ್ಮಿಂದಲೇ...

ಶ್ರೀ ಕೆ.ಹೆಚ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಯಾವ ಭಾಷೆಯಲ್ಲಿ ಮಾತನಾಡಬೇಕು. ಆ ಭಾಷೆಯಲ್ಲಿ ಮಾತನಾಡುವುದಕ್ಕೆ ಸ್ವತಂತ್ರ ಇರುವಾಗ ಏತಕ್ಕೆ ಮಾತನಾಡಬಾರದು. ತಾವು ರಕ್ಷಣೆ ಕೊಡಬೇಕು. ಯಾರಾದರೂ ಮಧ್ಯೆ ಎದ್ದು ಮಾತನಾಡಿದರೆ ತಾವು ಕುಳಿತುಕೊಳ್ಳಿ ಎನ್ನುತ್ತೀರಿ. ಆದರೆ ನಾರಾಯಣಕುಮಾರ್‌ರವರು ಈ ರೀತಿ ಆಗಾಗ್ಗೆ ಮಧ್ಯೆ ಎದ್ದು ಕನ್ನಡದಲ್ಲಿ ಮಾತನಾಡಿ ಎಂದು ಬರುತ್ತಾರೆ.

ಅಧ್ಯಕ್ಷರು.- ನಾರಾಯಣಕುಮಾರ್‌ರವರೇ, ದಯವಿಟ್ಟು ಕುಳಿತುಕೊಳ್ಳಿ ಆ ಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಡಿ.ಎ ಚನ್ನಪ್ಪ.— ಅಧ್ಯಕ್ಷರೇ, ನಾವು ಏನಾದರೂ ಹೇಳಬೇಕೆಂದಿದ್ದರೆ ಇವರು ಮಧ್ಯೆ ಎದ್ದು ಮರೆಸಿಬಿಡುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಅವರ ಕನ್ನಡದ ಪ್ರೇಮವನ್ನು ಒಪ್ಪುತ್ತೇನೆ, ಕೆಲವು ಸಂದರ್ಭದಲ್ಲಿ ಅದನ್ನು ಪ್ರಸ್ತಾಪ ಮಾಡುವುದರಲ್ಲಿ ಔಚಿತ್ಯ ಇದೆ ಕನ್ನಡ ಬೇಕೆಂದು ಯಾರು ಪ್ರಸ್ತಾಪ ಮಾಡಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಒಂದು ರೀತಿಯ ಕಿರುಕುಳದ ಸ್ವರೂಪಕ್ಕೆ ಅದು ಹೋಗಬಾರದು. ಇದರಿಂದ ಅವರ ಗಾಂಭೀರ್ಯಕ್ಕೆ ಧಕ್ಕೆಯಾಗುತ್ತದೆ, ಸಭೆಯ ಗಾಂಭೀರ್ಯಕ್ಕೂ ಧಕ್ಕೆಯಾಗುತ್ತದೆ. ಇದನ್ನು ನಾವು ಎಲ್ಲಾ ಸಂದರ್ಭದಲ್ಲೂ ಲಘುವಾಗಿ ತೆಗೆದುಕೊಳ್ಳತಕ್ಕ ಸ್ಥಿತಿ ಇರುವುದಿಲ್ಲ, ನಾನು ಬಹಳ ವಿನಯಪೂರ್ವಕವಾಗಿ ಹೇಳುತ್ತೇನೆ, ನನಗೂ ಸಾಕಷ್ಟು ಕನ್ನಡದ ಅಭಿಮಾನ ಇದೆ. ನಾನು ತಮ್ಮ ಮೂಲಕ ನಾರಾಯಣಕುಮಾರ್ ಅವರನ್ನು ಕೇಳಿಕೊಳ್ಳುತ್ತೇನೆ, ಕನ್ನಡದ ಹೆಸರು ಕಿರುಕುಳಕ್ಕೆ ಪರ್ಯಾಯವಾಗುವಂತೆ ಮಾಡಿದರೆ ಕನ್ನಡವನ್ನು ರಕ್ಷಣೆ ಮಾಡಿದಂತೆ ಆಗುವುದಿಲ್ಲ.

ಅಧ್ಯಕ್ಷರು.— ನಾರಾಯಣಕುಮಾರ್‌ರವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಡಿ. ಎ. ಚನ್ನಪ್ಪ.— ಕೊಡಗಿನ ಇನ್‌ಚಾರ್ಜ್ ಮಿನಿಸ್ಟರ್ ಏನಿದ್ದಾರೆ, ಅವರನ್ನು ಬದಲಾಯಿಸಿ ಬೇರೆ ಮಂತ್ರಿಯವರನ್ನು ಕೊಡಗು ಜಿಲ್ಲೆಗೆ ಇನ್‌ಚಾರ್ಜ್ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಇದರಿಂದ ಹೆಚ್ಚು ಅನ್ಯಾಯ ನಡೆಯುತ್ತದೆ. ಕಾಂಗ್ರೆಸ್ ಪಕ್ಷ ಆದರೇನು, ಜನತಾ ಪಕ್ಷ ಆದರೇನು, ಎಲ್ಲರೂ ಸಹ ನಮ್ಮವರೇ ಎಲ್ಲಾ ಜನರೂ ನಮ್ಮವರೇ, ತನ್ನ ಊರಿಗೆ ಒಳ್ಳೆಯದು ಮಾಡಬೇಕು ಇನ್ನೊಬ್ಬರ ಊರನ್ನು ಹಾಳು ಮಾಡಬೇಕೆಂಬ ಭಾವನೆ ಯನ್ನು ಇಟ್ಟುಕೊಂಡರೆ ಅನ್ಯಾಯ ಆಗುತ್ತದೆ ಅವರಿಗೆ ದೇವರು ಒಳ್ಳೆಯದು ಮಾಡುವುದಿಲ್ಲ

ಇನ್ನು ಕೊಡಗಿನಲ್ಲಿ ಸಣ್ಣ ಸಣ್ಣ ತೋಡುಬಾವಿಗಳು ಇವೆ. ಆದರೆ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಮಾಡಿರತಕ್ಕ ಕೆಲಸ ಬರೀ ಎರಡು ಕಡೆ ಮಾತ್ರ ಚನ್ನಂಗಿ ಎಂಬುದು ಸುಮಾರು ಎರಡು ಎರಡೂವರೆ ಸಾವಿರ ಪರಿಶಿಷ್ಟ ಜಾತಿಯವರು ಇರತಕ್ಕ ಜಾಗ, ಎರಡು ವರ್ಷದ ಹಿಂದೆ ಅಲ್ಲಿ ಒಂದು ಬಾವಿಯನ್ನು ತೆಗೆದಿದ್ದರು, ಎರಡು ವರ್ಷದ ಹಿಂದೆ ಅಲ್ಲಿ ಸುಮಾರು ೬೦-೭೦ ಎಕರೆ ಭೂಮಿ ನೀರಾವರಿ ಆಗುತ್ತಿತ್ತು. ಆ ಬಾವಿಗೆ ಎಲೆಕ್ಟ್ರಿಸಿಟಿ ಕನೆಕ್ಷನ್ ಕೊಡುವುದಕ್ಕೆ ಎರಡು ವರ್ಷವಾದರೂ ಆಗಲಿಲ್ಲ. ಮಿನಿಸ್ಟರ್‌ಗೆ ಹೇಳಿದರೂ ಆಗಲಿಲ್ಲ. ನಮ್ಮಲ್ಲಿ ಯಾವ ಕೆಲಸ ಆಗಬೇಕು ಅದನ್ನು ಮಾಡುತ್ತಿಲ್ಲ.

ಇನ್ನು ವಯಸ್ಕರ ಶಿಕ್ಷಣಕ್ಕೆ ಅಡಲ್ಟ್ ಎಜುಕೇಷನ್ ಕೌನ್ಸಿಲ್ ಎಂದು ಒಂದು ಸಂಸ್ಥೆ ಇದೆ. ಇದು ೧೯೪೮ನೇ ಇಸವಿಯಿಂದ ಕರ್ನಾಟಕದಲ್ಲಿ ಬಹಳಷ್ಟು ಕೆಲಸ ಮಾಡಿಕೊಂಡು ಬಂದಿದೆ. ವಯಸ್ಕರ ಶಿಕ್ಷಣ ಸಮಿತಿಗೆ ಒಬ್ಬ ಅಧ್ಯಕ್ಷರೂ ಇಲ್ಲ. ಸದಸ್ಯರುಗಳು ಇಲ್ಲ. ಅದಕ್ಕೆ ಡಿವಿಜನಲ್ ಕಮಿಷನರ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿರುತ್ತೀರಿ. ಇವತ್ತು ಅದು ಸಂಪೂರ್ಣವಾಗಿ ನಾಶವಾಗಿ ಹೋಗತಕ್ಕಂಥ ವ್ಯವಸ್ಥೆಗೆ ಬಂದು ತಲುಪಿದೆ. ಇದರಲ್ಲಿ ಆಗ ಇಷ್ಟೆಲ್ಲಾ ಕೆಲಸವನ್ನು ಮಾಡಿದಂಥ ಜನ ಇವತ್ತು ಬಹಳ ವ್ಯಥೆ ಪಡುತ್ತಿದ್ದಾರೆ. ಇದಕ್ಕೆ ಒಂದು ಹೈಲೆವೆಲ್ ಕಮಿಟಿ ಮಾಡಿ, ಇದನ್ನು ವೈಂಡ್‌ಅಪ್ ಮಾಡಿ, ಅಡಲ್ಟ್ ಎಜುಕೇಷನ್ ಡೈರೆಕ್ಟೊರೇಟ್‌ನಲ್ಲಿ ಮರ್ಜ್ ಮಾಡತಕ್ಕ ಒಂದು ಕಾರ್ಯಕ್ರಮ ಸರಕಾರ ಹಾಕಿದೆ. ಇದು ತಪ್ಪು. ಬಹಳಷ್ಟು ದಿನಗಳಿಂದ ಬೆಳೆದುಕೊಂಡು ಬಂದ ಸಂಸ್ಥೆಯು ಉಳಿಸಿಕೊಳ್ಳಬೇಕು. ಇದಕ್ಕೆ ನಾನೂ ಅಧ್ಯಕ್ಷನಾಗಿದ್ದೆ, ಕೆಲವು ಮಿನಿಸ್ಟರ್‌ಗಳೂ ಅಧ್ಯಕ್ಷರಾಗಿದ್ದರು. ಎಂದು ಕಾಣುತ್ತದೆ. ಇವತ್ತು ಅದನ್ನು ನಾಶ ಮಾಡತಕ್ಕ ವ್ಯವಸ್ಥೆ ಮಾಡುತ್ತಿದ್ದಾರೆ. ಇದನ್ನು ಮಾಡಕೂಡದು ಎಂದು ನಿಮ್ಮ ಮೂಲಕ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನೂ ಹೆಚ್ಚು ಮಾತನಾಡುವುದು ಇದೆ, ಆದರೆ ತಾವು ಬೆಲ್ ಹೊಡೆಯುತ್ತಿರುವುದರಿಂದ ತಮ್ಮ ಬೆಲ್‌ಗೂ ಸಮೇತ ಮರ್ಯಾದೆಕೊಟ್ಟು ಇಷ್ಟು ಸಮಯ ಮಾತನಾಡುವುದಕ್ಕೆ ತಾವು ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ, ಸದಾಕಾಲ ತಮಗೆ ಧನ್ಯನಾಗಿದ್ದೇನೆ.

ಶ್ರೀ ಜಿ. ನಾರಾಯಣಕುಮಾರ್ (ಬಿನ್ನಿಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೆ, ನನಗೆ ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆಯನ್ನು ಸಲ್ಲಿಸುವಂತಹ ಹೊನ್ನ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ, ನಿಜವಾಗಿಯೂ

ನಮ್ಮ ಜನತಾ ಸರಕಾರ ಕೆಲವು ಕಾರ್ಯಭಾರಗಳನ್ನು ಆಡಳಿತ ವ್ಯವಸ್ಥೆಯನ್ನು ನುಡಿದಂತೆ ನಡೆ, ನಡೆಯಂತೆ ನುಡಿ ಎಂಬ ಕನ್ನಡ ನಾಡ್ನುಡಿಯಂತೆ ನಡೆದುಕೊಂಡು ಬಂದಿದೆ ಎಂಬ ಮಾತನ್ನು ಬಹಳ ಸ್ಪಷ್ಟವಾಗಿ ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ವಿರೋಧ ಪಕ್ಷದ ಹಳೆಯ ನಾಯಕರು ಹಾಗೂ ನನ್ನ ಮಿತ್ರರು ಜನತಾ ಸರಕಾರದ ಬಗ್ಗೆ ಹಲವಾರು ರೀತಿಯಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅದರಲ್ಲಿ ಕೆಲವು ಸಮಯೋಚಿತವಾಗಿದೆ. ಎಲ್ಲವನ್ನೂ ತಳ್ಳಿ ಹಾಕುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಆದರೂ ಸಹ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿರತಕ್ಕಂಥ ನಮ್ಮ ಘನ ಸರಕಾರ ಮಾಡಿರತಕ್ಕಂಥ ಕಾರ್ಯಕ್ರಮಗಳು ನಿಜವಾಗಿಯೂ ಕೂಡಾ ಚೆನ್ನಾಗಿ ಇವೆ. ಚೆನ್ನಾಗಿ ಇರತಕ್ಕಂಥ ಕೆಲಸಗಳನ್ನು ನಮ್ಮ ಸರಕಾರ ಮಾಡಿದೆ, ಇವತ್ತು ಭಾರತ ದೇಶದಲ್ಲಿ, ನಮ್ಮ ಕರ್ನಾಟಕ ರಾಜ್ಯದಲ್ಲಿ ಕೇವಲ ಶೇಕಡಾ ೪೦ ಭಾಗ ಮಾತ್ರ ವಿದ್ಯಾವಂತರಾಗಿದ್ದಾರೆ. ನಾವು ಇವತ್ತು ಅನಕ್ಷರಸ್ಥರಾಗಿರುವುದರಿಂದ ಹಲವಾರು ರೀತಿಯ ಹಿಂಸೆಗೆ ಒಳಗಾಗುವಂತೆ ಆಗಿದೆ ಎಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ವಿದ್ಯಾಭ್ಯಾಸ ಕಾರ್ಯಕ್ರಮಕ್ಕೆ ನಮ್ಮ ವಿದ್ಯಾ ಇಲಾಖೆ ಹೆಚ್ಚು ಗಮನ ಕೊಡುತ್ತಿದೆ. ಶಿಕ್ಷಣ ಸಚಿವರಾದ ಮಾನ್ಯ ರಘುಪತಿಯವರು ಮತ್ತು ಮಾನ್ಯ ಗೋವಿಂದೇಗೌಡರು, ಕೆಲವು ಸಾಧನೆಗಳಿಗೆ ಕೈಹಾಕಿ ಶಾಶ್ವತವಾದಂಥ ಕೆಲವು ಕೆಲಸಗಳನ್ನು ಮಾಡಿರುತ್ತಾರೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಇವತ್ತು ನಮ್ಮ ದೇಶದಲ್ಲಿ ಅನಕ್ಷರತೆ ಹೆಚ್ಚಿರುವುದರಿಂದ, ಜನತೆ ಮೋಸದ ಜಾಲಕ್ಕೆ ತುತ್ತಾಗುತ್ತಿದ್ದಾರೆ. ಆದ್ದರಿಂದ ಜನತಾ ಸರ್ಕಾರ ಅನಕ್ಷರಸ್ಥರ ಸಂಖ್ಯೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಲಕ್ಷಾಂತರ ಮಕ್ಕಳಿಗೆ ಉಚಿತವಾಗಿ ಪುಸ್ತಕ ಹಂಚತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ವಿರೋಧ ಪಕ್ಷದವರು, ಮುಂದೆ ಬರಗಾಲಕ್ಕೆ ಈ ಹಣವನ್ನು ಉಪಯೋಗಿಸಬಹುದಿತ್ತು ಅನಾವಶ್ಯಕವಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಎಂದು ಹೇಳಿದರಲ್ಲದೆ, ಕೆಲವು ಪದಗಳನ್ನೂ ಪ್ರಯೋಗ ಮಾಡಿದರು. ಅದಕ್ಕೆ ನಾನಾದರೂ ಹೇಳುತ್ತೇನೆ. ಮೊದಲು ನಾವು ಉಳಿಯಬೇಕು. ಬರಗಾಲ ಈಗ ಹೊಸದಾಗಿ ಬಂದುದಲ್ಲ. ಈ ಸಾರಿ ಬರಗಾಲ ತೀವ್ರತರವಾಗಿದೆ. ಈಗ್ಗೆ ನಾಲ್ಕು ವರ್ಷಗಳಿಂದಲೂ ಬರಗಾಲ ಇದೆ. ಆದ್ದರಿಂದ ದಿನನಿತ್ಯದ ಕೆಲಸಕಾರ್ಯಗಳನ್ನು ಮತ್ತು ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನೂ ಯಾವುದೇ ಕಾರಣದಿಂದ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು ಈ ರಾಜ್ಯದಲ್ಲಿ ಅನೇಕ ಬಡ ಕುಟುಂಬಗಳು ಅನಕ್ಷರಸ್ಥರಾಗಲು ಕಾರಣಗಳು ಇವೆ. ಧರ್ಮ, ಗೌರವ ಎನ್ನುವ ಪ್ರಸಂಗಗಳಿಗೆ ನಮ್ಮ ನಾಡಿನ ಜನ ಕಟ್ಟುಬೀಳುತ್ತಾರೆ. ಬಹಳ ಜನಕ್ಕೆ ಮೈತುಂಬ ಬಟ್ಟೆ, ಓದುವುದಕ್ಕೆ ಪುಸ್ತಕ, ಬರೆಯುವುದಕ್ಕೆ ಕಪ್ಪುಹಲಗೆ ಇಲ್ಲದೇ ಶಾಲೆಗಳಿಗೆ ಹೋಗುತ್ತಾರೆ. ಮಧ್ಯಮ ವರ್ಗದವರು, ಮೇಲ್ಮಟ್ಟದ ಜನಗಳು ತಮ್ಮ ಮಕ್ಕಳಿಗೆ ಒಳ್ಳೆಯ ಉಡುಪುಗಳನ್ನು ಹಾಕಿ, ಪುಸ್ತಕಗಳನ್ನು ಕೊಟ್ಟು, ಕಪ್ಪುಹಲಗೆಯನ್ನು ಕೊಟ್ಟು ಶಾಲೆಗಳಿಗೆ ಕಳುಹಿಸುತ್ತಿರುವುದನ್ನು, ನೋಡಿ ಬಡತನದ ಬೇಗೆಯಲ್ಲಿ ಸಿಕ್ಕಿರತಕ್ಕಂಥ ಮಕ್ಕಳ ತಂದೆತಾಯಿಗಳು ಮನಸ್ಸಿನಲ್ಲಿ ನೊಂದು, ಕಡೆಗೆ ಶಾಲೆಯನ್ನೇ ಬಿಡಿಸುತ್ತಾರೆ. ಇದು ನನ್ನ ಅನುಭವದಿಂದ ಹೇಳಿರತಕ್ಕ ಮಾತು. ನಾನು ಒಬ್ಬ ಹಳ್ಳಿಯ ರೈತನ ಮಗನಾದುದರಿಂದ ಈ ಅನುಭವವನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇವತ್ತು ಲಕ್ಷಾಂತರ ಬಡ ಮಕ್ಕಳಿಗೆ. ಉಚಿತ ಪಠ್ಯಪುಸ್ತಕ, ಸಮವಸ್ತ್ರಗಳನ್ನು ನೀಡತಕ್ಕ ಕಾರ್ಯಕ್ರಮ ಮತ್ತು ಪರಿಶಿಷ್ಟ ವರ್ಗದವರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಹಮ್ಮಿಕೊಂಡಿರತಕ್ಕ ಸರ್ಕಾರ ಜನತಾ ಸರ್ಕಾರ, ವ್ಯವಸ್ಥಿತವಾಗಿ ಮೂಲಭೂತ ಸಮಸ್ಯೆಗಳನ್ನು ನೀಗತಕ್ಕ ಕಾರ್ಯಕ್ರಮಗಳನ್ನು ಆಚರಣೆಗೆ ತಂದರೆ ರಾಜ್ಯದ ನಾಲ್ಕು ಕೋಟಿ ಜನತೆ ಮೆಚ್ಚುತ್ತಾರೆ. ಯಾವುದೇ ಕಾರ್ಯಕ್ರಮ ಹಾಕಿಕೊಂಡು ಮಾಡಿದರೂ ಟೀಕೆಗಳು ಇದ್ದೇ ಇರುತ್ತವೆ. ಒಳ್ಳೆಯದು ಮಾಡಿದರೂ ಟೀಕೆ ಇರುತ್ತವೆ. ಕೆಟ್ಟದ್ದು ಮಾಡಿದರೂ ಟೀಕೆ ಬರುತ್ತವೆ. ಇವತ್ತು ವಿದ್ಯಾ ಇಲಾಖೆಯಲ್ಲಿ ಮಹತ್ತರವಾದ ಸಾಧನೆ ಆಗಿದೆ ಎಂದು ಹೇಳುತ್ತೇನೆ ಇವತ್ತು ೫–೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರಬಹುದು. ಇವತ್ತು ಜನತೆಯಿಂದ ಬರತಕ್ಕ ತೆರಿಗೆ ಹಣ, ಇನ್ನು ಮುಂತಾದ ಹಣವನ್ನು, ಗ್ರಾಮಾಂತರ ಮಟ್ಟಕ್ಕೆ ಮುಟ್ಟಿಸುವ ವ್ಯವಸ್ಥೆ ಮಾಡಬೇಕೆಂದು ಜನತಾ ಸರ್ಕಾರ ಮಾಡಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅನಂತರ ಹಳ್ಳಿಗಳಲ್ಲಿ ಕೊಟ್ಟಿರತಕ್ಕ ಹಸಿರು ಕಾರ್ಡ್‌ಗಳ ಬಗ್ಗೆ ಕೆಲವರು ಪ್ರಸ್ತಾಪ ಮಾಡಿದರು. ಗ್ರಾಮಾಂತರ ಪ್ರದೇಶದಲ್ಲಿ ಜನತಾ ಪಕ್ಷದವರಿಗೇ ಕೊಟ್ಟಿದ್ದಾರೆ ಎನ್ನತಕ್ಕಂಥ ಅಪವಾದ ಹೇಳಿದರು. ಇದನ್ನು ನಾನು ಒಪ್ಪುವುದಿಲ್ಲ. ಎಲ್ಲಾ ಕಡೆಗೂ ಸರಿಸಮಾನವಾಗಿ ಈ ಹಸಿರು ಕಾರ್ಡುಗಳನ್ನು ಕೊಟ್ಟಿದ್ದಾರೆ. ಏಕೆಂದರೆ ನಾಳೆ ದಿವಸ ಈ ವಿಚಾರದಲ್ಲಿ ಗಲಾಟೆಯಾಗುತ್ತದೆ ಎಂಬ ದೃಷ್ಟಿಯಿಂದ ಆ ರೀತಿ

ಮಾಡಿಲ್ಲ. ರಾಜ್ಯದ ೪ ಕೋಟಿ ಜನತೆಯು ಸರ್ವತೋಮುಖ ಅಭಿಮಾನದಿಂದ ಮತಗಳನ್ನು ಗಳಿಸಿ, ಮಾನ್ಯ ರಾಮಕೃಷ್ಣ ಹೆಗಡೆಯವರು ನಿರ್ವಂಚನೆಯಿಂದ ತಮ್ಮ ಕಾರ್ಯಭಾರವನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಆ ಪಕ್ಷ, ಈ ಪಕ್ಷ ಎಂಬ ಭೇದ ಭಾವ ಇಲ್ಲದೆ ಈ ತಹಲ್‌ವರೆಗೂ ಮಾಡಿಕೊಂಡು ಬಂದಿದ್ದಾರೆ ಇನ್ನು ಮುಂದೆಯೂ ಮಾಡಿಕೊಂಡು ಬರುತ್ತಾರೆ. ಇವತ್ತು ಶಿಕ್ಷಣ ಇಲಾಖೆ ಪಠ್ಯ ಪುಸ್ತಕಗಳನ್ನು ಹಂಚಿದೆ, ಸಮವಸ್ತ್ರಗಳನ್ನು ಹಂಚಿದೆ. ಯಾವ ಸರ್ಕಾರಿ ಶಾಲೆಯಲ್ಲಾಗಲೀ ಅಥವಾ ಖಾಸಗಿ ಶಾಲೆಯಲ್ಲಾಗಲೀ. ಈ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳನ್ನು ಹಂಚುವಾಗ, ಆ ಪಕ್ಷದ ಮಕ್ಕಳಿಗೆ, ಈ ಪಕ್ಷದ ಮಕ್ಕಳಿಗೆ ಎನ್ನತಕ್ಕಂಥ ವ್ಯತ್ಯಾಸವನ್ನು ತೋರಿದ್ದರೆ ನಾನು ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡುವುದಕ್ಕೂ ಸಿದ್ಧ. ಆದುದರಿಂದ ಇವತ್ತು ಶಿಕ್ಷಣ ಇಲಾಖೆ ಮಹತ್ತರವಾದ ಕಾರ್ಯವನ್ನು ಮಾಡಿದೆ

ಇನ್ನು ರಸ್ತೆ ಸಾರಿಗೆ ಬೆಲೆ ಏರಿಕೆಯ ಬಗ್ಗೆ ಚರ್ಚೆ ಮಾಡಿದ್ದಾರೆ. ಇವತ್ತು ಬೆಲೆ ಏರಿಸಿರಬಹುದು ಕೇಂದ್ರ ಸರ್ಕಾರದವರು ಪೆಟ್ರೋಲ್ ಬೆಲೆಯನ್ನೂ ಏರಿಸಿದ್ದಾರೆ. ಮುಂದೆ ಬರತಕ್ಕ ಭವಿಷ್ಯವನ್ನು ನೋಡಿಕೊಂಡು ತೀರ್ಮಾನ ತೆಗೆದುಕೊಂಡಿದ್ದಾರೆ. ಇವತ್ತು ವ್ಯವಸ್ಥಿತವಾಗಿ ವಾಹನಗಳು ಓಡಾಡುತ್ತಿವೆ, ವೇಳೆ, ವೇಳೆಗೆ ಓಡಾಡುತ್ತಿವೆ. ಶಿಸ್ತಿನಿಂದ ಕೆಲಸಕಾರ್ಯಗಳು ನಡೆಯುತ್ತಿವೆ. ನಾನು ಹಿಂದೆ ಬೆಂಗಳೂರು ಸಾರಿಗೆ ವಾಹನಗಳನ್ನು ನೋಡಿದ್ದೇನೆ. ಬೆಂಗಳೂರು ನಗರ ಸಭೆಯ ಸದಸ್ಯನಾಗಿದ್ದಾಗಲೂ ನೋಡಿದ್ದೇನೆ. ಎರಡು ಗಂಟೆ ನಿದ್ರೆ ಮಾಡಿ ಬಂದಾಗ ವಾಹನಗಳು ಬರುತ್ತಿದ್ದವು. ಆಗ ಇದ್ದಂಥ ಅವ್ಯವಸ್ಥೆಯನ್ನು ಕಣ್ಣಾರೆ ನೋಡಿದ್ದೇವೆ. ಇವತ್ತು ರಸ್ತೆ ಸಾರಿಗೆ ವಾಹನಗಳು, ಬೆಂಗಳೂರು ನಗರ ಸಾರಿಗೆ ವಾಹನಗಳು ಆ ರೀತಿ ಅವ್ಯವಸ್ಥೆಯಿಂದ ನಡೆಯುತ್ತಿಲ್ಲ ವ್ಯವಸ್ಥಿತವಾಗಿ ನಡೆಯುತ್ತಿವೆ. ಎಲ್ಲೋ ಕೆಲವೊಂದು ರೀತಿಯಲ್ಲಿ ವಂಚನೆ ಇರಬಹುದು. ಇವತ್ತು ಅಧಿಕಾರಿಗಳೂ ಕೂಡ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ.

ಸ್ವಾಮಿ, ಈ ಸದನದಲ್ಲಿ ನಮ್ಮ ಕನ್ನಡದ ಬಗ್ಗೆ, ಕನ್ನಡ ಆಡಳಿತದ ಬಗ್ಗೆ ಕೆಲವರು, ಕೆಲವಾರು ರೀತಿಯಲ್ಲಿ ಮಾತನಾಡಿದ್ದಾರೆ ಕನ್ನಡ ಎಂದರೆ ನಾರಾಯಣಕುಮಾರ್ ಅವರಿಗೆ ಬರುತ್ತದೆ ಎನ್ನತಕ್ಕಂಥ ರೀತಿಯಲ್ಲೂ ಮಾತನಾಡಿದ್ದಾರೆ. ಈ ಕನ್ನಡ ಎನ್ನತಕ್ಕಂಥಾದ್ದು ೧೯೪೭ರ ಹಿಂದೆ ಇಂಗ್ಲೀಷರ ಆಡಳಿತ ಹೋದಮೇಲೆ, ಮಹಾರಾಜರ ಕಾಲದಲ್ಲೂ ಕನ್ನಡ ಆಡಳಿತ ನಡೆಯುತ್ತಿತ್ತು. ಮಹಾತ್ಮಾಗಾಂಧಿಯವರು ನಮಗೆ ಸ್ವಾತಂತ್ರ್ಯ ತಂದುಕೊಟ್ಟರು. ಆಯಾ ಪ್ರಾಂತ್ಯ ಭಾಷೆ, ರಾಜ್ಯಭಾಷೆಯಾಗಿರಬೇಕು ಎಂದು ಹೇಳಿದರು. ನಾವೇನು ಈ ರಾಜ್ಯಕ್ಕೆ, ಕನ್ನಡ ಮಾಡಿ ಎಂದು ಕೇಳಲಿಲ್ಲ, ಭಾಷಾವಾರು ಪ್ರಾಂತ್ಯ ರಚನೆಯಾದ ಮೇಲೆ, ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸುತ್ತಾ ಬಂದಿದ್ದೇವೆ. ಈ ಸಂದರ್ಭದಲ್ಲಿ ನಾವು ಈ ರಾಜ್ಯದ ವಿಧಾನ ಮಂಡಲದಲ್ಲಿ ನಮ್ಮ ಶಾಸಕರನ್ನು ಕನ್ನಡ ಮಾತನಾಡಿ ಸ್ವಾಮಿ ಎಂದು ಕೈಮುಗಿಯಬೇಕು. ಕನ್ನಡ ಮಾತೆಯ ಮಕ್ಕಳಲ್ಲಿ, ಕನ್ನಡ ಜನರಲ್ಲಿ ಕನ್ನಡದ ಬಗ್ಗೆ ಒಮ್ಮತವಿಲ್ಲ ಎನ್ನತಕ್ಕಂಥ ನೋವು ನನಗೆ ಬಂದಿದೆ. ಕನ್ನಡಕ್ಕೋಸ್ಕರ ಪ್ರಾಣ ತ್ಯಾಗಕ್ಕೂ ಸಿದ್ಧ. ನಮ್ಮ ದೇಶ ಭಾಷೆಗೆ ನಾನು ಸರ್ವತ್ಯಾಗ ಮಾಡಲು ಸಿದ್ಧನಾಗಿದ್ದೇನೆ. ನಾನೇನೂ ಮಹಾ ಪದವೀಧರ ಎಂದು ಹೇಳಿಕೊಳ್ಳುವುದಿಲ್ಲ, ಹಳ್ಳಿಯಿಂದ ಬಂದು, ಹೋರಾಟದ ಕಣದಲ್ಲಿದ್ದು. ಕನ್ನಡದ ಸೇವೆಯನ್ನು ಮಾಡಬೇಕೆಂಬುದು ನನ್ನ ಗುರಿ, ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀ ಬಂಗಾರಪ್ಪನವರು ಹಲವಾರು ರೀತಿಯಲ್ಲಿ ನಿಷ್ಠೂರವಾಗಿ, ಒಬ್ಬ ರಾಷ್ಟ್ರಕವಿ, ಕುವೆಂಪು ಅವರನ್ನು ಕಡಲ ತೀರದ ಭಾರ್ಗವ ಎನಿಸಿಕೊಂಡಿರುವ ಶಿವರಾಮ ಕಾರಂತರನ್ನು ಜವಾನರ ಸರಿಸಮಾನ ಎನ್ನುವ ರೀತಿಯಲ್ಲಿ ಮಾತನಾಡಿದರು ಖಂಡಿತವಾಗಿ ವಿಶ್ವಕನ್ನಡ ಸಮ್ಮೇಳನವನ್ನು ಜನತಾ ಸರ್ಕಾರ ಪ್ರಾರಂಭ ಮಾಡಲಿಲ್ಲ. ಹಿಂದೆ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ, ೬ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿದ್ದರು. ವಿಶ್ವಕನ್ನಡ ಸಮ್ಮೇಳನ ಅವರು ಪ್ರಾರಂಭ ಮಾಡಿದ್ದೇ ವಿನಹ, ಜನತಾ ಸರ್ಕಾರ ಮಾಡಿದ್ದಲ್ಲ. ಗುಂಡೂರಾಯರಿಗೆ ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿತ್ತು. ಆದರೆ ಜನತಾ ಸರ್ಕಾರದವರು ವಿಶ್ವಕನ್ನಡ ಸಮ್ಮೇಳನವನ್ನು ಸರಳ ರೀತಿಯಲ್ಲಿ ಆಚರಿಸಿದ್ದಾರೆ ಮಾನ್ಯ ಗುಂಡೂರಾಯರ ಆಸೆ ಆಕಾಂಕ್ಷೆಗಳನ್ನು, ಘನತೆ ಗೌರವಗಳನ್ನೂ, ಜನತಾ ಪಕ್ಷದ ಸರ್ಕಾರ ಕಾಪಾಡಿದೆ ಎಂದು ಸ್ಪಷ್ಟವಾಗಿ ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಜನತಾ ಸರ್ಕಾರವು ಮೈಸೂರು ರಾಜ್ಯದಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಬಹಳ ಯಶಸ್ವಿಯಾಗಿ ನಡೆಸಿದೆ. ಇದಕ್ಕೆಲ್ಲಾ ಕಾರಣ ನಮ್ಮ ಜನತಾ ಸರ್ಕಾರ. ಸ್ವಾಮಿ, ಈ ವಿಶ್ವ ಕನ್ನಡ ಸಮ್ಮೇಳನದಲ್ಲಿ ಕೆಲವು ಉತ್ತಮವಾದಂತಹ ಪುಸ್ತಕಗಳನ್ನು ಈ ಸರ್ಕಾರವು ಹೊರತಂದಿದೆ. ಅದರಲ್ಲೂ ಮುಖ್ಯವಾದಂದು ಅವಲೋಕನ ಮತ್ತು ಇನ್ನೊಂದು ಉತ್ತಮವಾದಂದು ಚೆಲುವ ಕನ್ನಡ ನಾಡು, ಇವೆರಡು ಉತ್ತಮವಾದಂತಹ ಗ್ರಂಥಗಳು. ಈ ವಿಶ್ವ ಕನ್ನಡ ಸಮ್ಮೇಳನಕ್ಕೆ ಕಾರಣರಾದಂತಹ ಹಿಂದಿನ ಮುಖ್ಯಮಂತ್ರಿ ಶ್ರೀ ಆರ್. ಗುಂಡೂರಾವ್‌ರವರ ಆಸೆ ಆಶೋತ್ತರಗಳನ್ನು ಮತ್ತು ಅವರ ಗೌರವ ಘನತೆಗಳನ್ನು ನಮ್ಮ ಸರ್ಕಾರದವರು ಈಡೇರಿಸಿದ್ದಾರೆ; ಎನ್ನುವ ಮಾತನ್ನು ಹೇಳಲು ಇಷ್ಟಪಡುತ್ತೇನೆ. ಇದು ಒಂದು ಮಹತ್ವ ಸಾಧನೆಯೆಂದು ಹೇಳುತ್ತೇನೆ. ಇಂತಹ ಉತ್ತಮವಾದಂತಹ ಕೆಲಸವನ್ನು ಕನ್ನಡ ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ಶ್ರೀಮಾನ್ ಜೀವರಾಜ ಆಳ್ವ, ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು, ಮಂತ್ರಿಗಳು ಮತ್ತು ಇತರರು ಸೇವಕರ ರೀತಿಯಲ್ಲಿ ತಮ್ಮ ಸೇವೆಗಳನ್ನು ಈ ಒಂದು ಸಮ್ಮೇಳನಕ್ಕೆ ಸಲ್ಲಿಸಿದ್ದಾರೆ. ಶಿವರಾಮ ಕಾರಂತರು, ಕೆ. ವಿ. ಪುಟ್ಟಪ್ಪನವರು, ಇವರುಗಳು ನಮ್ಮ ರಾಷ್ಟ್ರದ ಮಹಾ ಕವಿಗಳು. ಕನ್ನಡ ಸಾಹಿತ್ಯಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ ಕರ್ನಾಟಕ ರಾಜ್ಯದಲ್ಲಿ ವಿಶ್ವ ಕನ್ನಡ ಸಮ್ಮೇಳನ ಮೇಲ್ಪಂಕ್ತಿಯಾಗಿದೆ. ಇಂತಹ ರಾಷ್ಟ್ರಕವಿ ಶಿವರಾಮ ಕಾರಂತರ ಬಗ್ಗೆ ವಿರೋಧ ಪಕ್ಷದ ನಾಯಕರಾದ ಶ್ರೀ ಬಂಗಾರಪ್ಪನವರು ಸ್ವಲ ತಿಳಿದುಕೊಳ್ಳಬೇಕು. ಪಂಪಾ, ರನ್ನ, ರಾಘವಾಂಕ, ಜನ್ನ ಮತ್ತು ಹಲವಾರು ಕವಿಗಳು ಬಂಗಾರಪ್ಪನವರಿಗೆ ಸರಿಸಮಾನರು. ರಾಷ್ಟ್ರಕವಿ ಶಿವರಾಮಕಾರಂತರು ಇವರ ಜವಾನರ ಸಮಾನವೆಂದು ಹೇಳುತ್ತಾರೆ. ಅವರೆಲ್ಲರೂ ಕನ್ನಡ ಚರಿತ್ರೆಯ ಪುಸ್ತಕಗಳನ್ನು ಬರೆದಿದ್ದಾರೆ. ಈ ಎಲ್ಲಾ ಮಹಾಕವಿಗಳು ಇವರಿಗೆ ಜವಾನರ ಸಮಾನ. ಸಮಾತಾವಾದ ಸಮಾಜವಾದ, ಇವೆಲ್ಲಾವನ್ನು ಹೇಳತಕ್ಕ ಬಂಗಾರಪ್ಪನವರು, ಈ ಒಬ್ಬ ಮಹಾಕವಿಯ ಬಗ್ಗೆ ಇಷ್ಟೊಂದು ಸಲಿಸಾಗಿ ಜವಾನನೆಂದು ಹೇಳತಕ್ಕದ್ದು ಸರಿಯಲ್ಲ. ಇಂತಹ ಮಹಾ ಕವಿಗಳ ಪಾದರಕ್ಷೆಯನ್ನು ಇಟ್ಟುಕೊಂಡು ಪೂಜೆ ಮಾಡತಕ್ಕ ಪುಣ್ಯ ಸಿಗಬೇಕೆಂದು ಬಯಸುತ್ತೇನೆ. ಕನ್ನಡ ಹಾಗೂ ಕನ್ನಡೇತರರ ಸಂಸ್ಕೃತಿಗೆ ದುಡಿದಂತಹ ಮತ್ತು ಇತಿಹಾಸವನ್ನು ನಿರ್ಮಾಣ ಮಾಡಿದಂತಹ ಕವಿಗಳಿಗೆ ಜವಾನನೆಂದು ಬಂಗಾರಪ್ಪನವರು ಹೇಳಿರುವುದರಿಂದ, ಅವರು ವಿರೋಧ ಪಕ್ಷದ ನಾಯಕರಾಗಿ ಇರುವುದಕ್ಕೆ ಗೌರವ ಇದೆಯೇ ? ನಾನಾದರೂ ಆ ರೀತಿ ಹೇಳಿದ್ದರೆ ರಾಜೀನಾಮೆಯನ್ನು ಕೊಟ್ಟು ಹೋಗುತ್ತಿದ್ದೆ. ಬಂಗಾರಪ್ಪನವರಿಗೆ ಅಧಿಕಾರದ ಆಕಾಂಕ್ಷೆಯ ಅಮಲು ಇನ್ನು ಹೋಗಿಲ್ಲ. ಈ ಒಂದು ಕನ್ನಡ ದೇಶದಲ್ಲಿ......

ಅಧ್ಯಕ್ಷರು.—ಸಾಕಷ್ಟು ಹೇಳಿದ್ದೀರಿ, ವಿಷಯಂದ ಮೇಲೆ ಮಾತನಾಡಿ.

ಶ್ರೀ ಜಿ. ನಾರಾಯಣ್ ಕುಮಾರ್.—ನಾನು ಕೂಡ ಅನಾವಶ್ಯಕವಾಗಿ ಮಾತನಾಡುವುದಿಲ್ಲ. ಇದು ಕನ್ನಡಿಗರ ಗೌರವದ ಪ್ರಶ್ನೆ. ನಾನು ಒಂದು ವಿಷಯವನ್ನು ಹೇಳಲು ಬಯಸುತ್ತೇನೆ. ೯ನೇ ತಾರೀಖಿನ ಕನ್ನಡ ವಾರಪತ್ರಿಕೆಯಲ್ಲಿ ಬಂಗಾರಪ್ಪನವರ ಸಂಪೂರ್ಣವಾದ ಆಸ್ತಿಪಾಸ್ತಿ ಬಗ್ಗೆ ಪ್ರಕಟವಾಗಿದೆ. ಇತ್ತೀಚೆಗೆ ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪು ಹೊರಬಂದಿದೆ, ತೀರ್ಪಿನಲ್ಲಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಮೇಲಾಗಲಿ ಅಥವಾ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರಾದ ಜೀವರಾಜ ಆಳ್ವರವರ ಮೇಲಾಗಲಿ ಏನಾದರೂ ತಪ್ಪು ಆಪಾದನೆ ತೀರ್ಪಿನಲ್ಲಿ ಮಾಡಿದ್ದರೆ, ರಾಜೀನಾಮೆ ಕೊಡಲು ಸಿದ್ಧವೆಂದು ಮುಖ್ಯಮಂತ್ರಿಯವರು ಹೇಳಿ ಒಪ್ಪಿಕೊಂಡಿದ್ದಾರೆ.

ಇವತ್ತು ನಾನು ಮಾಡುತ್ತಿರುವ ಆಪಾದನೆ ಏನೆಂದರೆ, ಇವತ್ತು ಬಂಗಾರಪ್ಪ ಮತ್ತು ಅವರ ಸಂಬಂಧಿಗಳ ಹೆಸರಿನಲ್ಲಿ ಆಸ್ತಿಗಳು ಎಷ್ಟು ಇದೆ ? ಹಾಗೂ ಬೇರೆ ಬೇರೆ ಕಡೆ ಎಷ್ಟೆಷ್ಟು ಬಂಡವಾಳವನ್ನು ಹೂಡಿದ್ದಾರೆ ಎನ್ನುವ ವಿಷಯವು ವಾರ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿ ಕೇವಲ ೧೩ ಎಕರೆ ೧೫ ಗುಂಟೆ ಆದಾದನಂತರ ೮ ಎಕರೆ ಒಂದು ಸಾರಿ ಕೊಂಡುಕೊಂಡಿದ್ದಾರೆ, ೧೦ ಎಕರೆ ೧೩ ಗುಂಟೆಯನ್ನು ಒಂದು ಸಾರಿ ಕೊಂಡಿದ್ದಾರೆ. ೭ ಎಕರೆ ಒಂದು ಸಾರಿ ಕೊಂಡಿದ್ದಾರೆ. ಒಟ್ಟು ೨೫ ಎಕರೆಯನ್ನು ಅವರು ತಮ್ಮ ಹೆಸರಿನಲ್ಲಿ ತೆಗೆದುಕೊಂಡಿದ್ದಾರೆ.

ಶ್ರೀ ಎಮ್. ಎಸ್. ಪಾಟೀಲ್.—ಮಾನ್ಯ ವಿರೋಧ ಪಕ್ಷದ ಬಂಗಾರಪ್ಪನವರು ಇಲ್ಲದಿರುವಾಗ ಜಿ. ನಾರಾಯಣ್‌ಕುಮಾರ್‌ರವರಿಗೆ ಇಂತಹ ಆಪಾದನೆ ಮಾಡುವುದಕ್ಕೆ ಅವಕಾಶ ಕೊಡಬಾರದು. ನಿಯಮದ ಪ್ರಕಾರ ಅದಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ನನ್ನದೊಂದು ಕ್ರಿಯಾಲೋಪವಿದೆ. ನಿಯಮಕ್ಕೆ ಅನುಸಾರವಾಗಿ ಮಾನ್ಯ ಸದಸ್ಯರಿಗೆ ಆಪಾದನೆ ಮಾಡುವ ಹಕ್ಕು ಇದೆ. ಇದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಅವರು ನಿರ್ದಿಷ್ಟವಾಗಿ ಒಬ್ಬ ಸದಸ್ಯರ ಮೇಲೆ ಆಪಾದನೆ ಮಾಡುವಾಗ ಅದಕ್ಕೆ ನೋಟೀಸ್ ಕೊಟ್ಟು ಕೇಳ ಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಏನು ಆಪಾದನೆ ಮಾಡಿದ್ದಾರೆ, ಅದನ್ನು ಅವರು ಜವಾಬ್ದಾರಿ ವಹಿಸಿಕೊಂಡು ಪ್ರೂವ್ ಮಾಡಬೇಕಾಗುತ್ತದೆ. ಇದು ಅವರ ಹೊಣೆಗಾರಿಕೆಯಾಗಿದೆ.

ಶ್ರೀ ರಾಜವರ್ಧನ್ —ಅವರು ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳಿದ್ದಾರೆ.

ಶ್ರೀ ಜಿ. ನಾರಾಯಣ್ ಕುಮಾರ್.—ಅವರ ಸಂಬಂಧಿಕರ ಹೆಸರಿನಲ್ಲಿ ೭೫ ಎಕರೆ ಜಮೀನನು ಮತ್ತು ೧೯೯ ಎಕರೆ ಜಮೀನನ್ನು ಅವರು ಖರೀದಿ ಮಾಡಿದ್ದಾರೆ. ಬಂಗಾರಪ್ಪನವರು ಇದರ ಬಗ್ಗೆ ಏನು ಹೇಳುತ್ತಾರೆ ? ಇನ್ನೊಬ್ಬರ ಮೇಲೆ ಆಪಾದನೆ ಮಾಡತಕ್ಕದ್ದು ಬಹಳ ಸುಲಭ. ಬಂಗಾರಪ್ಪ ನವರು ಹರಿಶ್ಚಂದ್ರರ ಹಾಗೆ ಮಾತನಾಡುತ್ತಾರೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಈ ಸಭೆಯಲ್ಲಿ ಇಲ್ಲ. ಇಲ್ಲಿ ಅವರ ಮೇಲೆ ಏನಾದರೂ ಮಾತನಾಡಬೇಕಾದರೆ ಮೊದಲು ನೋಟೀಸ್ ಕೊಟ್ಟು ರೂಲ್ಸ್ ಪ್ರಕಾರ ಮಾತನಾಡಬೇಕಾಗುತ್ತದೆ. ಅವರು ನಿಮ್ಮ ಮೇಲೆ ಮಾತನಾಡುತ್ತಾರೆ, ನೀವು ಅವರ ಮೇಲೆ ಮಾತನಾಡುತ್ತೀರಿ.

ಶ್ರೀ ಜಿ. ನಾರಾಯಣ್ ಕುಮಾರ್.—ನಾನು ಹೇಳಿದುದರ ಬಗ್ಗೆ ತನಿಖೆಯಾಗಬೇಕು. ನಾನು ಹೇಳುವುದನ್ನು ಬಂಗಾರಪ್ಪನವರು ಒಪ್ಪಿಕೊಂಡು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ನಾನು ಮಾತನಾಡುವಾಗ ಬಂಗಾರಪ್ಪನವರು ಏಕೆ ಹೊರಗಡೆ ಹೋಗಬೇಕು.

೩-೦೦ ಪಿ. ಎಂ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಜಿ ನಾರಾಯಣ ಕುಮಾರ್‌ರವರು ಹೇಳಿದಂಥ ಮಾತುಗಳೆಲ್ಲವೂ ದಾಖಲೆಯಲ್ಲಿ ಹೋಗುತ್ತವೆ, ಆದುದರಿಂದ ಆ ಮಾತುಗಳೆಲ್ಲ ಕಡತದಲ್ಲಿ ಹೋಗದೇ ಇದ್ದ ಹಾಗೆ ತಡೆಹಿಡಿಯಬೇಕು.

ಶ್ರೀ ಜಿ. ನಾರಾಯಣ ಕುಮಾರ್.—ತಾವು ಮಾಜಿ ಮಂತ್ರಿಗಳಾಗಿದ್ದವರ ತಮಗೆಲ್ಲಾ ಗೊತ್ತಿದೆ.

ಅಧ್ಯಕ್ಷರು.—ನಾರಾಯಣ ಕುಮಾರ್‌ರವರೇ ನೀವು ಬೇಗ ಮುಗಿಸುತ್ತೀರೋ ಇಲ್ಲವೋ, ನಾನು ನಿಮ್ಮನ್ನು ಕುಳಿತುಕೊಳ್ಳಿ ಎಂದು ಹೇಳಬೇಕಾಗುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ನಾನು ಬೇಗನೆ ಮುಗಿಸುತ್ತೇನೆ. ಅವರು ಹಿಂದೆ ಲೋಕೋಪಯೋಗಿ ಇಲಾಖಾ ಮಂತ್ರಿಗಳಾಗಿದ್ದರು. ಕಂದಾಯ ಇಲಾಖಾ ಮಂತ್ರಿಗಳಾಗಿದ್ದರು, ಅವರ ಬಗ್ಗೆ ನಾನು ಇದುವರೆಗೆ ಏನು ಹೇಳಿದೆನೋ ಅವೆಲ್ಲಾ ತನಿಖೆ ಮಾಡುವುದಕ್ಕೆ ಲೋಕಾಯುಕ್ತಕ್ಕೆ ಹೋಗಲಿ. ಅವರ ತನಿಖೆ ಆಗಲಿ. ಅದುವರೆಗೆ ಅವರು ರಾಜೀನಾಮೆ ಕೊಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ನೀವು ಬೇಗನೆ ಮುಗಿಸಿ ಕುಳಿತುಕೊಳ್ಳದೇ ಹೋದರೆ ನಾನು ಮುಂದಿನವರನ್ನು ಕರೆಯಬೇಕಾಗುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ಅವರ ಬಗ್ಗೆ ವಾರಪತ್ರಿಕೆಯಲ್ಲಿ ಇರುವುದನ್ನು ನಾನು ಹೇಳಿದೆ. ಹಾಗಾದರೆ ಪತ್ರಿಕೆಗಳಿಗೆ ಗೌರವ ಇಲ್ಲವೇ ? ಅವರು ದುರುದ್ದೇಶದಿಂದ ಹೇಳಿದ್ದಾರೆಯೇ ? ಈ ಪುಸ್ತಕದಲ್ಲಿ ಏನು ಬರೆದಿದೆ ಅದನ್ನು ಹೇಳಿದ್ದೇನೆ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ವಿಚಾರ ಗೌರ್ನರ್ ಅಡ್ರೆಸ್‌ನಲ್ಲಿದೆಯೇ ?

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಅವರು ಕಂದಾಯ ಸಚಿವರಾಗಿದ್ದಾಗ, ಲೋಕೋಪಯೋಗಿ ಸಚಿವರಾಗಿದ್ದಾಗ ಬೇಕಾದಷ್ಟು ಅನ್ಯಾಯಗಳನ್ನು ಮಾಡಿದ್ದಾರೆ, ಮಾಡಬಾರದೇ ಇದ್ದುದನ್ನು ಮಾಡಿದ್ದಾರೆ,......

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ, ನೀವು ಹಾಗೆಯೇ ಎದ್ದು ನಿಂತುಕೊಂಡು ಮಾತನಾಡುವುದಾದರೆ ಅವೆಲ್ಲಾ ರೆಕಾರ್ಡ್‌ಗೆ ಹೋಗುವುದಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ನಿಮ್ಮ ಗಾಡಿ ಹೋಗುತ್ತಾ ಹೋಗುತ್ತಾ ಹಳಿ ತಪ್ಪಿ ಹೋಗುತ್ತದೆ. ನೀವು ಬಹಳ ಟೈಂ ತೆಗೆದುಕೊಂಡಿದ್ದೀರಿ. ಈಗ ನಾನು ಮುಂದಿನವರನ್ನು ಕರೆಯಬೇಕಾಗುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೆ, ನನಗೆ ಇನ್ನು 2 ನಿಮಿಷ ಟೈಂ ಕೊಡಿ ಸಾಕು.

ಶ್ರೀ ಎಂ. ಎಲ್. ಉಸ್ತಾದ್.—ತಾವು ಸ್ವಲ್ಪ ವಿಧಾನಸಭೆಯ ನಿಯಮದ ಪುಸ್ತಕವನ್ನು ಓದಿಕೊಂಡು ಬನ್ನಿ.

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೇ, ನಾನು ಒಂದು ಮಾತನ್ನು ಹೇಳಿ ಪೂರೈಸಿ ಬಿಡುತ್ತೇನೆ.

ಅಧ್ಯಕ್ಷರು.—ಬೇಗನೆ ಮುಗಿಸಿ.

ಶ್ರೀ ಜಿ. ನಾರಾಯಣ ಕುಮಾರ್.—ಸನ್ಮಾನ್ಯ ಬಂಗಾರಪ್ಪನವರು......

ಶ್ರೀ ಎಂ. ಎಲ್. ಉಸ್ತಾದ್.—ಅಧ್ಯಕ್ಷರೇ, ಗೌರ್ನರ್ ಅಡ್ರೆಸ್‌ನಲ್ಲಿ ಬಂಗಾರಪ್ಪ ಅಂತ ಇದೆಯೇ? ತಾವು ಅವರಿಗೆ ಬುದ್ಧಿ ಹೇಳಿ.

ಅಧ್ಯಕ್ಷರು.—ನೀವು ಹೀಗೆ ಮಾತನಾಡುತ್ತಾ ಹೋದರೆ ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು......

ಅಧ್ಯಕ್ಷರು.—ಅವರು ಈ ಸಭೆಯಲ್ಲಿ ಈಗ ಇಲ್ಲವಲ್ಲಾ ಪುನಃ ಹೇಳಿದ್ದನ್ನೇ ಹೇಳುತ್ತಿದ್ದೀರಿ. ನೀವು ಮುಕ್ತಾಯ ಮಾಡದೇ ಹೋದರೆ ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ನಾನು ಬೇಗನೆ ಮುಕ್ತಾಯ ಮಾಡುತ್ತೇನೆ, ಅವಕಾಶ ಕೊಡಿ.

ಶ್ರೀ ಎಂ. ಎಲ್. ಉಸ್ತಾದ್.—ಅವರು ಈ ಸಭೆಯಲ್ಲಿ ಈಗ ಇಲ್ಲ. ಅವರ ಹೆಸರನ್ನು ತೆಗೆದುಕೊಳ್ಳಬೇಡಿ ಎಂದು ಈಗಾಗಲೇ ಹೇಳಿದ್ದೇನೆ. ಹಾಗೆ ಮತ್ತೆ ಮತ್ತೆ ಹೇಳುವುದಾದರೆ ಆ ವಿಷಯವನ್ನು ಸೀರಿಯಸ್ ಆಗಿ ತಗೆದುಕೊಳ್ಳಬೇಕಾಗುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ನನಗೆ ಒಂದು ನಿಮಿಷ ಅವಕಾಶ ಕೊಡಿ. ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ಕ್ರಿಯಾ ಲೋಪವನ್ನು ಎತ್ತುತ್ತೇನೆ. ಏನೆಂದರೆ ಗೌರ್ನಮೆಂಟ್ ಚೀಫ್ ವಿಪ್ ಅವರ ಜಾಗದಲ್ಲಿ ಕೂತುಕೊಳ್ಳಬೇಕು. ಮೊದಲನೇದು ಮಾನ್ಯ ಅಧ್ಯಕ್ಷರಿಗೆ ಸಹಕಾರ ಕೊಡತಕ್ಕಂಥಾದ್ದು ಎರಡೂ ಭಾಗದ ವಿಪ್ ಇರುವವರ ಆದ್ಯ ಕರ್ತವ್ಯ. ಇಲ್ಲದೇ ಹೋದರೆ ಏನು ಬೇಕಾದರೂ ನಡೆಯಬಹುದು. ಯಾರು ಬೇಕಾದರೂ, ಏನು ಬೇಕಾದರೂ ಹೇಳಬಹುದು. ನಿಮಗೂ ಮೀರಿದಾಗ ತಮ್ಮ ಅಧಿಕಾರವನ್ನು ಚಲಾವಣೆ ಮಾಡಬಹುದು. ಮಾನ್ಯ ಅಧ್ಯಕ್ಷರು ವಿಹಪ್ ಮೂಲಕ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆಯೇ ಅನ್ನುವುದನ್ನು ನೋಡಬೇಕಾಗುತ್ತದೆ.

ಅಧ್ಯಕ್ಷರು.—ತಾವು ಬೇಗನೆ ಮುಕ್ತಾಯ ಮಾಡಬೇಕು.

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೇ, ಬೇಕಾದ ಜನರಿಗೆ ಗಂಟೆಗಟ್ಟಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ಇನ್ನೊಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ ? ಶ್ರೀ ಕೆ ಹೆಚ್. ಶ್ರೀನಿವಾಸ್ ಅವರು ಇದುವರೆಗೆ ಮಾತನಾಡದೇ ಹೋಗಿದ್ದರೆ ನಾನು ಇಷ್ಟು ಹೊತ್ತಿಗೆ ಮುಗಿಸಿಬಿಡುತ್ತಿದ್ದೆ.

ಅಧ್ಯಕ್ಷರು :—ಬೇಗನೆ ಮುಕ್ತಾಯ ಮಾಡಿ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೇ, ಸಮತಾವಾದವನ್ನು ಹಾಗೂ ಸಮಾಜವಾದಿ ಸಮಾಜವನ್ನು ಎತ್ತಿ ಹಿಡಿಯುತ್ತೇವೆಂದು ಹೇಳತಕ್ಕಂಥಾ ಶ್ರೀ ಬಂಗಾರಪ್ಪನವರು ಇತ್ತೀಚೆಗೆ ಲಕ್ಷಾಂತರ ರೂಪಾಯಿಗಳನ್ನು ಮಾಡಿದ್ದಾರೆ......

(ಗೊಂದಲ)

ಅಧ್ಯಕ್ಷರು :—ಈಗ ನಿಮಗೆ ಸಾಕಷ್ಟು ಸಮಯ ಕೊಟ್ಟಿದ್ದಾಗಿದೆ. ನಾನೇ ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ, ದಯವಿಟ್ಟು ಕೂತುಕೊಳ್ಳಿ.

ಶ್ರೀ ಜಿ. ನಾರಾಯಣ ಕುಮಾರ್.—ನಾನು ಮೊದಲು ಯಾವ್ಯಾವ ವಿಷಯಗಳನ್ನು ಹೇಳಿದ್ದೇನೋ ಅದರ ಬಗ್ಗೆ ಗಮನಹರಿಸಬೇಕು ಎಂತ ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನಾನು ಸಾಷ್ಟಾಂಗ ನಮಸ್ಕಾರಗಳನ್ನು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಜಿ. ಮಾದೇಗೌಡ (ಕಿರುಗಾವಲು).—ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಹಾಗೂ ಮಾಜಿ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ವಿಶ್ವಕನ್ನಡ ಸಮ್ಮೇಳನದಲ್ಲಿ ಹೇಳಿರತಕ್ಕಂಥಾ ಮಾತಿನ ಆಧಾರದ ಮೇಲೆ ಈಗ ನಮ್ಮ ಮುಂದೆ ಇರತಕ್ಕಂಥಾ ರಾಜ್ಯಪಾಲರ ಭಾಷಣ ಏನು ಇದೆ, ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾತನಾಡಿದಂಥಾ ಭಾಷಣ ಏನು ಇದೆ ಅದರ ಮೇಲೆ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ನಿಂತಿದ್ದೇನೆ.

ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಈ ರಾಜ್ಯದ ಮುಖ್ಯಮಂತ್ರಿಗಳು ವಿಶ್ವಕನ್ನಡ ಸಮ್ಮೇಳನದಲ್ಲಿ ಈ ರೀತಿ ಹೇಳಿದ್ದಾರೆ ಏನೆಂದರೆ ನನಗೆ ಪುನರ್ಜನ್ಮ ಬೇಡ, ಅಕಸ್ಮಾತ್ ಆಗುವುದಾದರೆ ಒಂದು ಸಲವಲ್ಲ, ಸಾವಿರ ಸಲವಾದರೂ ಕರ್ನಾಟಕದಲ್ಲಿಯೇ ಹುಟ್ಟಬೇಕು ಅನಿಸುತ್ತದೆ ಎಂದು. ಕರ್ನಾಟಕದ ನೆಲ, ಜಲ ಮತ್ತು ಜನರ ಹಿರಿಮೆಯನ್ನು ಸ್ಮರಿಸಿದ ಮುಖ್ಯಮಂತ್ರಿ ಹೆಗಡೆಯವರು ಬಯಕೆಯನ್ನು ವ್ಯಕ್ತಪಡಿಸಿದರು, ಈ ಬಯಕೆಯು ಕನ್ನಡನಾಡಿನಲ್ಲಿಯೇ ಹುಟ್ಟಬೇಕೆಂಬ ಅನ್ನುವ ಮಾತು ವಿಶ್ವಕನ್ನಡ ಸಮ್ಮೇಳನದಲ್ಲಿ ಸಾರಿದಂಥಾ ಒಂದು ಮಾತು. ಮುಂದುವರೆದು ಹೇಳುವುದಾದರೆ ಹಾಗೆಯೇ ಮಾಜಿ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರು ವಿಶ್ವಕನ್ನಡ ಸಮ್ಮೇಳನದಲ್ಲಿ ಏನು ಹೇಳಿದ್ದಾರೆ ಆ ಮಾತನ್ನೂ ಸಹ ತಮ್ಮ ಗಮನಕ್ಕೆ ತರುತ್ತೇನೆ. ಅವರು ಈ ರೀತಿ ಹೇಳಿದ್ದಾರೆ. ಏನೆಂದರೆ ಭಾರತದ ಸಾರ್ವಜನಿಕ ಆಡಳಿತ ನೋಡಿದರೆ ಹಿಂದಿನ ಮಹಾರಾಜರುಗಳ ಆಡಳಿತವೇ ಚೆನ್ನಾಗಿತ್ತು, ಎಂದು ಭಾಸವಾಗುತ್ತೆ ಎಂದು ಹೇಳಿದ್ದಾರೆ. ಒಬ್ಬ ಮುಖ್ಯಮಂತ್ರಿ ಕನ್ನಡ ನಾಡಿನ ಹಿಂದಿನ ಹಿರಿಮೆಯನ್ನು ಈ ರೀತಿ ಹೊಗಳಿದ್ದಾರೆ. ಕನ್ನಡ ನಾಡು ಬಹಳ ಚೆಲುವ ಕನ್ನಡ ನಾಡು, ಸಂಪದ್ಭರಿತ ನಾಡು ಹಾಲಿನ ಹೊಳೆ ಹರಿಯುವಂಥ ನಾಡಾಗಿದೆ ಅನ್ನುವ ಕೀರ್ತಿ ಬಂದಿದೆ. ನಮ್ಮ ಜನರ ಸಂಸ್ಕೃತಿಯೂ ಕೂಡ ಬಹಳ ಚೆನ್ನಾಗಿದೆ ಬಹುಶಃ ವಿಜಯನಗರ ಸಾಮ್ರಾಜ್ಯದ ಒಂದು ಸಂಪದ್ಭರಿತವಾದ ದೇಶದ ಹಿರಿಮೆಯನ್ನು ನೆನಪಿಗೆ ತಂದುಕೊಟ್ಟಿದೆ. ಈ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈವೊತ್ತು ಈ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರ ಮತ್ತು ಮಂತ್ರಿಮಂಡಲದಲ್ಲಿರತಕ್ಕಂಥ ಸದಸ್ಯರ ಪ್ರಶ್ನೆ ಅಲ್ಲ ಇದು. ಈವೊತ್ತು ನಮ್ಮ ನಾಡು ಏನು ಇದೆ ಹಳ್ಳಿಗಳಿಂದ ಬಂದಿರತಕ್ಕಂಥಾ ಜನರು ಏನು ಇದ್ದಾರೆ, ಹಳ್ಳಿಯಲ್ಲಿ ಜನರು ಏನು ಇದ್ದಾರೆ ಆ ಹಳ್ಳಿಯ ಸಂಸ್ಕೃತಿ ಇಡೀ ದೇಶದಲ್ಲಿಯೇ. ಮೊದಲಿನಿಂದಲೂ ಹಾಗೆಯೇ ಉಳಿದಿದೆ. ನಮ್ಮ ದೇಶದಲ್ಲಿ ಇರತಕ್ಕಂಥಾ ಬಡತನ ನಿವಾರಣೆ ಆಗದ ಹೊರತು ನಮ್ಮ ದೇಶದ ಜನಗಳಿಗೆ ಅವಶ್ಯಕವಾದಂಥಾ ಕೆಲಸಗಳನ್ನು ಪೂರೈಸಿಕೊಡದೇ ಹೋದರೆ ಸಂಪದ್ಭರಿತ ದೇಶವಾಗುವುದಿಲ್ಲ. ಇವರ ಬಗ್ಗೆ ನಮ್ಮ ಸರ್ಕಾರ ಏನು ಪ್ರಯತ್ನ ಮಾಡಿದೆ ಎನ್ನತಕ್ಕಂಥಾದ್ದು ಮುಖ್ಯ. ನೀವು ಇದನ್ನು ವಿಮರ್ಶೆ ಮಾಡಲಿಕ್ಕೆ ಪ್ರಯತ್ನಪಟ್ಟಿದ್ದೀರಾ ? ಈವೊತ್ತು ನಮ್ಮ ದೇಶಕ್ಕೆ ಯಾವುದ ಅಗತ್ಯ ಇದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಕಳೆದ ೨೫ ವರ್ಷದಿಂದಲೂ

ಕೂಡ ಈ ಸದನದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಏನೇನು ಚರ್ಚೆಯಾಗುತ್ತಿತ್ತು ಅನ್ನುವುದನ್ನು ನೋಡಿದ್ದೇನೆ.

(MR. DEPUTY SPEAKER in the Chair.)

ಮಾನ್ಯ ರಾಜ್ಯಪಾಲರು ಬಹುಮುಖ್ಯವಾಗಿ ಪ್ರಸ್ತಾಪ ಮಾಡುತ್ತಾ ಇರತಕ್ಕಂಥಾದ್ದು ಏನೆಂದರೆ, ಆಯಾ ಸರ್ಕಾರಗಳು, ಆಯಾ ವರ್ಷಗಳಲ್ಲಿ ಏನು ಸಾಧನೆ ಮಾಡಿವೆ ಮತ್ತು ಮುಂದೆ ಈ ದೇಶದ ಪ್ರಗತಿಯನ್ನು ಸಾಧಿಸಬೇಕಾದರೆ, ದೇಶವನ್ನು ಭದ್ರವಾಗಿ ಕಟ್ಟಬೇಕಾದರೆ ಅವರ ಯೋಜನೆಗಳು, ಜನಸಾಮಾನ್ಯರ ಸ್ಥಿತಿಗತಿಗಳು ಉತ್ತಮವಾಗುವುದಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನತಕ್ಕಂಥ ಒಂದು ತತ್ವವನ್ನು ರಾಜ್ಯಪಾಲರ ಭಾಷಣದಲ್ಲಿ ನಾವು ಪ್ರತಿಸಾರಿಯೂ ಕೇಳುತ್ತಿದ್ದೇವೆ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ೧೩ ಪುಟಗಳ ಪೈಕಿ ಸುಮಾರು ೭ ಪುಟಗಳು ಬರಗಾಲಕ್ಕೆ ಮೀಸಲಾಗಿದೆ. ಇನ್ನು ೬ ಪುಟಗಳಲ್ಲಿ ಏನು ಹೇಳಿದ್ದಾರೆಂದರೆ, ಸರ್ಕಾರದ ಸಾಧನೆಗಳು, ಬಡಜನರಿಗೆ ಬಟ್ಟೆಗಳನ್ನು ಹಸಿರು ಚೀಟಿಗಳನ್ನು ಹಂಚಿದ್ದಾರೆ. ದೋತಿ, ಸೀರೆಗಳನ್ನು ಕೊಟ್ಟಿದ್ದಾರೆ ಮತ್ತು ಮಕ್ಕಳಿಗೆ ಪುಸ್ತಕಗಳನ್ನು ಮತ್ತು ಸಮವಸ್ತ್ರಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆ ಕಡೆ ಇರತಕ್ಕ ಆಡಳಿತ ಪಕ್ಷದವರು ಒಂದು ವಿಧದಲ್ಲಿ ನಾವು ಮಾಡಿರತಕ್ಕಂಥಾದ್ದೆಲ್ಲಾ ಒಳ್ಳೆಯದಿದೆ, ಇದು ದೇಶದ ಅಭ್ಯುದಯವನ್ನು, ಭದ್ರವಾದಂಥ ಬುನಾದಿಯನ್ನು ಹಾಕುವುದಕ್ಕೆ ಸಮತಾವಾದವನ್ನು ಸ್ಥಾಪನೆ ಮಾಡುವುದಕ್ಕೆ ಒಂದು ತಳಹದಿ ಎಂದು ಹೇಳಿದ್ದಾರೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಶತಮಾನಗಳ ಕಾಲದ ಅಂದರೆ ತ್ರೇತಾಯುಗದ-ದ್ವಾಪರ ಯುಗದ ಮಹಾಪುರುಷರ, ಅವತಾರ ಪುರುಷರ ರಾಮ-ಕೃಷ್ಣರ ಹೆಸರನ್ನು ಇಟ್ಟುಕೊಂಡಿರತಕ್ಕವರು ಈ ದೇಶದಲ್ಲಿ ಬಡತನವನ್ನು ಹೋಗಲಾಡಿಸುವುದಕ್ಕೆ, ಈ ದೇಶಕ್ಕೆ ಸುಖೀರಾಜ್ಯವನ್ನು ಕೊಡುವುದಕ್ಕೆ ಹಾಕಿರತಕ್ಕ ಕಾರ್ಯಕ್ರಮಗಳು ಸೀರೆ, ರವಿಕೆ ಹಂಚತಕ್ಕಂಥ ಕಾರ್ಯಕ್ರಮಗಳು ಎಂದು ಮಾನ್ಯ ನಾರಾಯಣಕುಮಾರ್‌ರವರು ಮತ್ತು ಇತರ ಆಡಳಿತ ಪಕ್ಷದವರು ಹೇಳಿದರು. ನಮ್ಮ ಪಕ್ಷದವರೂ ಇದನ್ನು ಸ್ವಾಗತಮಾಡಿ ಈ ಕಾರ್ಯಕ್ರಮಗಳು ಏನಿವೆ ಇವು ಈ ದೇಶದ ಬಡತನವನ್ನು ಹೋಗಲಾಡಿಸುವುದಕ್ಕೆ ಒಂದು ದಾರಿ, ಇದು ಬಡವರಿಗೆ ಅಂಗಿ ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲದೇ ಇರತಕ್ಕವರಿಗೆ ಪುಸ್ತಕ ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಇರತಕ್ಕವರಿಗೆ ನೆರವಾಗಿದೆ ಎಂದು ಹೇಳಬಹುದು. ಆದರೆ ಕೆಲವು ಲೋಪದೋಷಗಳಿವೆ ಎಂದು ಹೇಳಿದರು. ಆದರೆ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ಈ ಯೋಜನೆಗಳಿಂದ ನಾವು ಈ ದೇಶದ ಜನಗಳನ್ನು ಸೋಂಬೇರಿಗಳನ್ನಾಗಿ ಮಾಡತಕ್ಕಂಥಾದ್ದು ಈ ದೇಶದ ಜನಗಳನ್ನು ಭಿಕ್ಷುಕರನ್ನಾಗಿ ಮಾಡತಕ್ಕಂಥಾದ್ದು ಈ ದೇಶದ ಜನಗಳನ್ನು ನಿರುದ್ಯೋಗಿಗಳನ್ನಾಗಿ ಮಾಡತಕ್ಕಂಥಾ ಯೋಜನೆಗಳಾಗಿವೆ ಎಂದು ನಾನು ಸ್ಪಷ್ಟವಾಗಿ ಈ ಸಾರಿ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ಜಪಾನ್ ಮತ್ತು ಜರ್ಮನಿ ದೇಶಗಳನ್ನು ತೆಗೆದುಕೊಳ್ಳೋಣ. ಎರಡನೇ ಮಹಾಯುದ್ಧದಲ್ಲಿ ಧ್ವಂಸವಾದಂಥ ನಿರ್ನಾಮವಾದಂಥ ದೇಶಗಳು ಇವು ಎಂದು ತಮಗೆಲ್ಲರಿಗೂ ಗೊತ್ತಿದೆ. ಜರ್ಮನಿ, ಜಪಾನ್ ದೇಶಗಳು ಇವತ್ತು ಇಡೀ ಪ್ರಪಂಚದಲ್ಲೇ ಐಶ್ವರ್ಯ ದೇಶಗಳು ಎನ್ನುವುದನ್ನು ನಾವು ಕೇಳುತ್ತಾ ಇದ್ದೇವೆ. ನಾನಂತೂ ಹೋಗಿ ನೋಡಿಲ್ಲ, ಹೋಗಿ ನೋಡಿಕೊಂಡು ಬಂದವರು ಹೇಳುತ್ತಾರೆ ಶ್ರೀಮಂತ ರಾಷ್ಟ್ರಗಳ ಪೈಪೋಟಿಗೆ ನಿಂತಿರತಕ್ಕ ರಾಷ್ಟ್ರಗಳಿವು. ಎರಡನೇ ಮಹಾಯುದ್ಧ ೧೯೪೫ಕ್ಕೆ ಅಂತ್ಯವಾಯಿತು. ೧೯೪೭ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂತು. ಕೇವಲ ೩-೪ ವರ್ಷಗಳ ವ್ಯತ್ಯಾಸದಲ್ಲಿ ಜಪಾನ್ ಮತ್ತು ಜರ್ಮನಿ ದೇಶಗಳು ಏತಕ್ಕೆ ಅಷ್ಟು ಶ್ರೀಮಂತ ರಾಷ್ಟ್ರಗಳಾಗಿವೆ, ಇವತ್ತು ನಮ್ಮ ದೇಶ ಏಕೆ ಹಿಂದಕ್ಕೆ ಹೋಗಿದೆ ಎಂದರೆ ಇಂತಹ ಸೀರೆ, ರವಿಕೆ ಕೊಡುವಂಥ ಯೋಜನೆಗಳಿಂದ ನಾವು ಈ ದೇಶವನ್ನು ಎಷ್ಟು ಪ್ರಗತಿ ಮಾರ್ಗಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿತ್ತೋ ಅಷ್ಟು ಮೇಲಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗಲಿಲ್ಲ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರ ಕೇವಲ ೩ ವರ್ಷಗಳಿಂದ ಬಂದಿರತಕ್ಕಂಥಾದ್ದು, ಇದು ಕಾರಣ ಎಂಬ ಮಾತನ್ನು ಹೇಳುತ್ತಾ ಇಲ್ಲ. ನಮಗೆ ಸ್ವಾತಂತ್ರ್ಯ ಬಂದಲಾಗಾಯ್ತು ಯೋಜನೆಗಳನ್ನು ಹಾಕಿಕೊಳ್ಳುತ್ತಾ ಇದ್ದೇವೆ. ಈ ಯೋಜನೆಗಳೆಲ್ಲವೂ ಓಟನ್ನು ಗಳಿಸತಕ್ಕ ಯೋಜನೆಗಳಾಗಿವೆ. ನಿಜ ಇವು ಜನಗಳ ಕಷ್ಟವನ್ನು ಬಗೆಹರಿಸುವುದಕ್ಕೆ ದೇಶವನ್ನು ಕಟ್ಟತಕ್ಕಂಥಾದ್ದಕ್ಕೆ, ಗಾಂಧೀಜಿಯವರು ಹೇಳಿದಹಾಗೆ ಸುಖೀರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ಮಾಡತಕ್ಕ ಯೋಜನೆಗಳಲ್ಲ ಎನ್ನತಕ್ಕಂಥ ಮಾತನ್ನ ಇಲ್ಲಿ ಸ್ಪಷ್ಟವಾಗಿ ಹೇಳು

ವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಅದರಲ್ಲೂ ಕರ್ನಾಟಕ ರಾಜ್ಯದಲ್ಲಿ ಈ ದೇಶವನ್ನು ಸಮೃದ್ಧಿಯಾದ ದೇಶವನ್ನಾಗಿ ಮಾಡುವುದಕ್ಕೆ ಅನೇಕ ಅವಕಾಶಗಳಿವೆ. ಇವತ್ತಿನದಿವಸ ನಮಗೆ ಸಾಕಾದಷ್ಟು ಸವಲತ್ತು ಇದೆ. ಖನಿಜ ಸಂಪತ್ತು ಇದೆ, ಜಲ ಸಂಪತ್ತು ಇದೆ, ವಿದ್ಯುತ್ ಸಂಪಾದನೆ ಮಾಡತಕ್ಕ ಸಂಪತ್ತು ಇದೆ ಇವೆಲ್ಲಕ್ಕಿಂತ ಮೇಲಾಗಿ ಜನ ಸಂಪತ್ತು ಇದೆ, ಜಲ ಸಂಪತ್ತಿದೆ. ಇವತ್ತು ಹಳ್ಳಿಗಳನ್ನು ನೋಡಿದಿರೋ ಇಲ್ಲವೋ ಗೊತ್ತಿಲ್ಲ. ಇವತ್ತಿನ ದಿವಸ ಹಳ್ಳಿಗಳ ಸ್ಥಿತಿ ಏನಾಗಿದೆ ಯೆಂದರೆ ಜನಗಳ ಕೈಯಲ್ಲಿ ಕೆಲಸ ಇಲ್ಲ, ತಿನ್ನುವುದಕ್ಕೆ ಅನ್ನ ಇಲ್ಲ. ಕುಡಿಯುವುದಕ್ಕೆ ನೀರಿಲ್ಲ, ಇವತ್ತು ಎಲ್ಲೆಲ್ಲೂ ಹೆಂಡದ, ಸಾರಾಯಿ ಅಂಗಡಿಗಳಿವೆ. ಆ ಜನಗಳ ಬೆಳಗಿನ ಊಟ ಅಂದರೆ ಸಾರಾಯಿ. ಇವತ್ತು ಹಳ್ಳಿಗಳಲ್ಲಿ ಎಲ್ಲೆಲ್ಲೂ ಕೂಡ ಜೂಜುಕಟ್ಟೆಗಳಿವೆ. ಇದನ್ನು ಯಾರು ಕಲ್ಪಿಸಿಕೊಟ್ಟವರು. ಶ್ರೀಮಾನ್ ಜತ್ತಿಯವರ ಕಾಲದಲ್ಲಿ ಪಾನನಿರೋಧವನ್ನು ಜಾರಿಗೆ ತಂದರು. ಈ ದೇಶದಲ್ಲಿ ಇವತ್ತು ಜನತಾಪಕ್ಷದವರು ಆಡಳಿತವನ್ನು ನಡೆಸುತ್ತಿದ್ದಾರೆ, ಜನ ಓಟ್ ಕೊಟ್ಟರು ಬಂದರು. ಏತಕೋಸ್ಕರ ಕೊಟ್ಟರು ಅಂದರೆ ಇವರು ಮಹಾತ್ಮಾಗಾಂಧೀಜಿಯವರ ಹೆಸರನ್ನು ಹೇಳಿದರು, ಗ್ರಾಮರಾಜ್ಯವನ್ನು ಸ್ಥಾಪನೆ ಮಾಡುತ್ತೇವೆ ಎಂದು ಗಾಂಧೀಜಿಯವರ ಹೆಸರನ್ನು ಹೇಳಿಕೊಂಡು, ಅವರ ಫೋಟೋ ಇಟ್ಟು ಕೊಂಡು ಊರೂರು ತಿರುಗಿದರು. ಕಾಂಗ್ರೆಸ್‌ನವರು ಗಾಂಧೀಜಿಯವರನ್ನು ಮರೆತರು. ಆದರೆ ಜನತಾ ಪಕ್ಷದವರು ಗಾಂಧೀಜಿಯವರ ಫೋಟೋ ಹೊತ್ತುಕೊಂಡು ಗಾಂಧೀರಾಜ್ಯವನ್ನು ಸ್ಥಾಪನೆ ಮಾಡುತ್ತೇವೆ, ಸ್ವರಾಜ್ಯವನ್ನು ಸ್ಥಾಪನೆ ಮಾಡುತ್ತೇವೆ, ರಾಮರಾಜ್ಯವನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೋದರು. ಇವರಿಗೆ ರಾಮರಾಜ್ಯದ ಕಲ್ಪನೆ ಇದೆಯೋ ಎಂದು ಕೇಳುತ್ತೇನೆ. ಗಾಂಧೀಜಿಯವರು ಏನು ಹೇಳಿದರು ಅಂದರೆ, ಅಸ್ಪೃಶ್ಯರು ಇರಕೂಡದು, ಜಾತಿ ಪದ್ಧತಿ ಇರಕೂಡದು, ಗ್ರಾಮ ಕೈಗಾರಿಕೆ ಆಗಬೇಕು, ನಿರುದ್ಯೋಗ ನಿವಾರಣೆ ಆಗಬೇಕು, ಎಲ್ಲರೂ ಕೂಡ ವಿದ್ಯಾವಂತರಾಗಬೇಕು. ಪ್ರತಿ ಗ್ರಾಮದಲ್ಲೂ ಗ್ರಾಮ ಕೈಗಾರಿಗಳ ಸ್ಥಾಪನೆಯಾಗಬೇಕು ಎನ್ನತಕ್ಕಂಥ ಅನೇಕ ಕಾರ್ಯಕ್ರಮಗಳನ್ನು ಅವರು ಬಾಯಲ್ಲಿ ಹೇಳಲಿಲ್ಲ, ಸ್ವತಃ ಮಾಡಿದರು. ಹರಿಜನರ ಕೇರಿಗೆ ಹೋಗಿ ಮಲಗಿದರು, ಕಸಗುಡಿಸಿದರು, ರಾಟೆ ತೆಗೆದು ಕೊಂಡು ನೂಲನ್ನು ನೇಯ್ದರು. ಹಿಂದೂ–ಮುಸಲ್ಮಾನರಿಗೆ ಘರ್ಷಣೆ ನಡೆದಾಗ ಮಧ್ಯದಲ್ಲಿ ಸಾಮರಸ್ಯ ವನ್ನು ಕಲ್ಪನೆ ಮಾಡಿದರು, ಇವತ್ತು ನಾವು ಮುಖಂಡರಾದವರು ಯಾವುದೇ ಪಕ್ಷದವರಾಗಲಿ, ನಾವು ಮಾಡತಕ್ಕಂಥಾದ್ದು ಏನು. ಇವತ್ತು ಎಲ್ಲೆಲ್ಲೂ ಕೂಡ ಜಾತಿ ವಾದ ಇದೆ. ಯಾವ ಪಕ್ಷದವರೇ ಆಗಲಿ ಚುನಾವಣೆಗೆ ಟಿಕೆಟ್ ಕೇಳಿದರೆ ಜಾತಿ ವಾದ ಬರುತ್ತದೆ, ಮಂತ್ರಿಮಂಡಲ ರಚನೆ ಮಾಡಬೇಕಾದರೆ ಜಾತಿ ವಾದ ಬರುತ್ತದೆ, ಲಿಂಗಾಯಿತರಿಗೆ ಎಷ್ಟು ಕೊಡಬೇಕು. ಒಕ್ಕಲಿಗರಿಗೆ ಎಷ್ಟು ಕೊಡಬೇಕು ಎಂದು ಬರುತ್ತದೆ. ಪ್ರೈಮರಿ ಸ್ಕೂಲ್‌ನಲ್ಲಿ ಸೀಟ್ ಕೊಡಬೇಕಾದರೆ ಅಲ್ಲಿಂದ ಹಿಡಿದು ಚುನಾವಣೆ ತನಕ ಜಾತಿವಾದ ಇದೆ. ಹರಿಜನರಿಗೆ ಇಷ್ಟು ಪರ್ಸೆಂಟ್, ಒಕ್ಕಲಿಗರಿಗೆ ಇಷ್ಟು ಪರ್ಸೆಂಟ್, ಬ್ರಾಹ್ಮಣರಿಗೆ ಇಷ್ಟು ಪರ್ಸೆಂಟ್ ಎಂದು ಇದೆ. ಇವತ್ತಿನದಿವಸ ಯಾವುದೇ ರಂಗದಲ್ಲಿ ನಾವು ಕೇಳುತ್ತಾ ಇರತಕ್ಕಂಥಾದ್ದು, ಪೇಪರಿನಲ್ಲಿ ನೋಡುತ್ತಾ ಇರತಕ್ಕಂಥಾದ್ದು ಏನೆಂದರೆ, ಒಕ್ಕಲಿಗರಿಗೆ ಹೊಡೆದಾಟ, ಹರಿಜನರಿಗೆ ಹೊಡೆದಾಟ, ಅವರನ್ನು ಇವರು ಹೊತ್ತುಕೊಂಡು ಹೋದರು ಎಂದು. ಇವತ್ತು ಪ್ರತಿ ದಿವಸ ಕೇಳಿತಕ್ಕಂಥಾದ್ದು ಜಾತ್ಯಾತೀತ ಸಮಾಜ. ನಾನು ಒಂದು ಪ್ರಶ್ನೆ ಕೇಳು ತ್ತೇನೆ. ರಾಷ್ಟ್ರಾಧ್ಯಕ್ಷರಿಂದ ಹಿಡಿದು ನಮ್ಮ ಊರಿನಲ್ಲಿರುವ ಹರಿಜನರವರೆಗೆ ಈ ದೇಶದಲ್ಲಿ ಯಾರಾದರೂ ಒಬ್ಬರು ನಾನು ಕ್ಷೇಮವಾಗಿದ್ದೇನೆ, ನನಗೆ ರಕ್ಷಣೆಯಿದೆ, ನನ್ನ ಮಾನಕ್ಕೆ, ಪ್ರಾಣಕ್ಕೆ ರಕ್ಷಣೆಯಿದೆ ಅನ್ನತಕ್ಕಂಥಾದ್ದನ್ನು ಮುಂದೆ ಬಂದು ಹೇಳಲಿ. ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನೀವು ನಮ್ಮ ದೇಶದ ಮಟ್ಟಿಗೆ ಮಾತ್ರ ಮಾತನಾಡುತ್ತಿದ್ದಿರೋ, ಅಥವಾ ಕರ್ನಾಟಕ ರಾಜ್ಯದ ಮಟ್ಟಿಗೆ ಮಾತ್ರ ಮಾತನಾಡುತ್ತಿದ್ದೀರೋ ?

ಶ್ರೀ ಜಿ. ಮಾದೇಗೌಡ.—ನಾನು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿರುವಂತೆ ಮಾತ ನಾಡುತ್ತಿಲ್ಲ. ನಮ್ಮ ದೇಶದಲ್ಲಿರತಕ್ಕಂತಹ ವ್ಯವಸ್ಥೆಯನ್ನು ಹೇಳುತ್ತಿದ್ದೇನೆ. ನಿಮ್ಮನ್ನೂ, ನಮ್ಮನ್ನೂ ಸೇರಿಸಿಕೊಂಡು ಹೇಳುತ್ತೇನೆ. ನೀವು ಮಾಡಿದ್ದೇ ಸರಿಯೆಂದು ಇದ್ದೀರಿ, ಅದಕ್ಕೆ ಕಾಲ ಬರಬೇಕು. ತಾವು ಮಾಡಿದ್ದು ತಪ್ಪೆಂದು ಅರಿವಾಗಬೇಕಾದರೆ ಒಂದು ಕಾಲ ಮಿತಿ ಇದೆ, ಆ ಕಾಲ ಮಿತಿ ಬಂದಾಗ ಯಾರ್ಯಾರು ಏನೇನು ತಪ್ಪು ಮಾಡಿದ್ದಾರೆ ಅನ್ನತಕ್ಕಂಥಾ ಅರಿವಾಗುತ್ತದೆ. ನಮ್ಮ ದೇಶ ಪುನರ್ ನಿರ್ಮಾಣವಾಗಬೇಕು. ಮತ್ತು ದೇಶವನ್ನು ಹಿಂದಕ್ಕೆ ತೆಗೆದುಕೊಂಡು ಹೋಗಬೇಕು

ಅನ್ನುತಕ್ಕಂಥಾ ಮನಸ್ಸು ಇದೆಯೋ ಇಲ್ಲವೋ ನಾವು ಜನಗಳ ಮೆಚ್ಚಿಗೆಗೆ ಪಾತ್ರರಾಗುವುದಕ್ಕೋಸ್ಕರ ಅನೇಕ ಪೊಳ್ಳು ಘೋಷಣೆಗಳನ್ನು ಹೇಳಿ ಹೇಳಿ ಜನಗಳನ್ನು ಮರುಳು ಮಾಡಿ ಚುನಾವಣೆಯಲ್ಲಿ ಗೆದ್ದು ರಾಜ್ಯಭಾರ ಮಾಡತಕ್ಕಂಥಾದ್ದು ಅವ್ಯಾಹತವಾಗಿ ನಡೆದು ಕೊಂಡು ಬರುತ್ತಿದೆ. ಈ ದೇಶವನ್ನು ಸುಂದರನಾಡನ್ನಾಗಿ ಮಾಡಬೇಕು. ವಿಜಯ ನಗರದ ಕಾಲದಲ್ಲಿ ನಮ್ಮ ಕನ್ನಡ ನಾಡು ಚೆಲುವ ಕನ್ನಡ ನಾಡಾಗಿದ್ದು ಬೀದಿಯಲ್ಲಿ ಚಿನ್ನದ ರಾಶಿಯನ್ನು ಮಾರುತ್ತಿದ್ದರು. ಒಂದು ಕಾಗೆ, ನಾಯಿಯಾದರೂ ಹೊಟ್ಟೆಗೆ ಅನ್ನವಿಲ್ಲವೆಂದು ಇದ್ದಿದ್ದಿಲ್ಲ. ಈಗ ಅಂತಹ ನಾಡನ್ನು ಕಟ್ಟುವುದಕ್ಕೆ ಸಾಧ್ಯವಿದೆ. ನಮ್ಮಲ್ಲಿ ಅಪಾರವಾದಂತಹ ಜಲ ಸಂಪತ್ತು ಇದೆ. ಆ ಜಲಸಂಪತ್ತನ್ನು ನಾವು ಎಷ್ಟರಮಟ್ಟಿಗೆ ಉಪಯೋಗಿಸಿ ಕೊಂಡಿದ್ದೇವೆ ? ಕೃಷ್ಣಾ ನದಿಯ ನೀರನ್ನು ಇದುವರೆಗೂ ನಾವು ಸಂಪೂರ್ಣವಾಗಿ ಬಳಸಿಕೊಳ್ಳುವುದಕ್ಕೆ ಆಗಿಲ್ಲ. ವಿಶ್ವ ಬ್ಯಾಂಕ್‌ನವರು ನೆರವನ್ನು ಕೊಡುತ್ತೇವೆಂದು ಮುಂದೆ ಬಂದರೂ ಅದನ್ನು ತೆಗೆದು ಕೊಂಡು ಕೃಷ್ಣಾ ನದಿಯ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದಕ್ಕಾಗಿಲ್ಲ. ಈಗಾಗಲೇ ಆಂಧ್ರದವರು ತೆಲುಗು ಗಂಗಾ ಯೋಜನೆಯ ನೆಪದಲ್ಲಿ ಕೃಷ್ಣಾ ನದಿಯ ಹೆಚ್ಚುವರಿ ನೀರನ್ನು ಕಬಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಕಾವೇರಿ, ಹೇಮಾವತಿ, ಹಾರಂಗಿ ನದಿಗಳಿಗೆ ಅಣೆಕಟ್ಟನ್ನು ಕಟ್ಟಿಸಿ ಕೋಟ್ಯಾಂತರ ರೂಪಾಯಿ ವ್ಯಯ ಮಾಡಿದ್ದರೂ ಕೂಡ ಬರಗಾಲ ಇರತಕ್ಕಂತಹ ಪ್ರದೇಶದಲ್ಲಿ ಅನ್ನವಿಲ್ಲದೇ ಇರತಕ್ಕಂತಹ ಜನಗಳಿಗೆ ನೀರು ಕೊಡಬೇಕು ನೀರು ಕೊಡುವುದಕ್ಕೆ ನಿಮ್ಮಲ್ಲಿ ಶಕ್ತಿಯಿಲ್ಲ. ಇದು ನಾಚಿಕೆಗೇಡಿನ ಮತ್ತು ಉದ್ಧಟತನವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನು ಕೈಗಾರಿಕೆಗಳ ವಿಷಯದಲ್ಲಿ ಹೇಳಬೇಕೆಂದರೆ, ಜನತಾ ಪಕ್ಷದವರು ಪ್ರಣಾಳಿಕೆಯಲ್ಲಿ ಹೇಳಿಕೊಂಡಿದ್ದಾರೆ, ಒಂದು ತಿಂಗಳಿಗೆ ಒಂದು ಸಾವಿರ ಗುಡಿ ಕೈಗಾರಿಕೆಗಳನ್ನು ಮಾಡುತ್ತೇವೆಂದು. ಒಂದು ಸಾವಿರ ಅಲ್ಲ ಒಂದು ತಿಂಗಳಿಗೆ 10 ಕೈಗಾರಿಕೆ ಮಾಡಿರುವುದರ ಪಟ್ಟಿ ಕೊಡಿ. ಇಂತಹ ಕೈಗಾರಿಕೆಗಳನ್ನು ಮಾಡಿದ್ದೇವೆಂದು. ಜನಗಳಿಗೆ ಪೊಳ್ಳು ಭರವಸೆಗಳನ್ನು ಕೊಟ್ಟುಕೊಂಡು ಹೋಗತಕ್ಕಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ. ನಮ್ಮ ದೇಶದಲ್ಲಿ ವಿದ್ಯುತ್ ಕೊರತೆಯಿದ್ದು ಇದರಿಂದಾಗಿ ಅನೇಕ ಕೈಗಾರಿಕೆಗಳಿಗೆ ತೊಂದರೆಯಾಗಿದೆ. ವಿದ್ಯುತ್ ರಾಜ್ಯ ಕತ್ತಲೆಯ ರಾಜ್ಯವಾಗಿದೆ. ಅನೇಕ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ 2000ದ ವರ್ಷಕ್ಕೆ ಜಲ ಮತ್ತು ವಿದ್ಯುತ್ ಕೊರತೆಯನ್ನು ಈ ದೇಶದಲ್ಲಿ ಎದುರಿಸಬೇಕಾಗುತ್ತದೆಂದು ಎಚ್ಚರಿಕೆಯ ಮಾತನ್ನು ಕೂಡ ಅವರು ಹೇಳಿದ್ದಾರೆ. ನಾನು ಮೊದಲೇ ಹೇಳಿದ ಹಾಗೇ, ಪಾನ ನಿರೋಧ ಅನ್ನತಕ್ಕಂಥಾದ್ದನ್ನು ಜತ್ತಿಯವರ ಕಾಲದಲ್ಲಿ ಜಾರಿಗೆ ತಂದರು. ಅಮೇಲೆ ಜತ್ತಿಯವರ ಆಡಳಿತ ಹೋಗಿ ನಿಜಲಿಂಗಪ್ಪನವರು ಬಂದ ಮೇಲೆ ಪುನಃ ಕುಡಿಯುವುದನ್ನು ಜಾರಿಯಲ್ಲಿ ತಂದರು ಈ ಸಂದರ್ಭದಲ್ಲಿ ನಾವು ಶ್ರೀಮತಿ ಯಶೋದರಮ್ಮ ದಾಸಪ್ಪನವರನ್ನು ಸ್ಮರಣೆ ಮಾಡಿಕೊಳ್ಳಬೇಕಾಗುತ್ತದೆ. ಅವರು ಪಾನನಿರೋಧದಿಂದ ನಮ್ಮ ಜನಗಳ ಜೀವನ ಬಗಡಾಗುತ್ತದೆ, ಕುಡುಕರ ರಾಜ್ಯವಾಗುತ್ತದೆ, ನಮ್ಮ ದೇಶ ಕುಡಿಯುವುದಕ್ಕೆ ಶಕ್ತಿಯಿಲ್ಲದೇ ಇರತಕ್ಕಂತಹ ದೇಶ. ಆ ಕಡೆ ಸರ್ಕಾರದವರು ಕೂಲಿ ಕೊಡತಕ್ಕಂಥಾದ್ದನ್ನು ಈ ಕಡೆ ಕುಡಿಯತಕ್ಕಂಥಾದ್ದರಿಂದ ನಮ್ಮ ಸರ್ಕಾರ ಕೂಡ ಉತ್ತಮವಾಗುವುದಿಲ್ಲ ಮತ್ತು ಅವರ ಸ್ಥಿತಿ ಕೂಡ ಉತ್ತಮವಾಗುವುದಿಲ್ಲ ಇದು ತಪ್ಪು ಅನ್ನತಕ್ಕಂಥಾದ್ದನ್ನು ತೋರಿಸಿಕೊಟ್ಟು ಆ ನೀತಿ ಮೇಲೆ ರಾಜೀನಾಮೆ ಕೊಟ್ಟರು. ನಿನ್ನೆ, ಮೊನ್ನೆಯಿಂದ ನಾವು ಏನು ಬಾಟ್ಲಿಂಗ್ ವ್ಯವಹಾರವನ್ನು ಪ್ರಸ್ತಾಪ ಮಾಡಿದೆವು ಶ್ರೀ ರಾಮಕೃಷ್ಣ ಹೆಗಡೆಯವರ ಹೆಸರು ರಾಜ್ಯಮಟ್ಟದಲ್ಲಿ ಮಾತ್ರ ಇಲ್ಲ, ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆಸಿ ಕೊಂಡಿದ್ದಾರೆ. ಹೈಕೋರ್ಟ್ ತೀರ್ಪು ಬಂತು ಆ ತಕ್ಷಣ ಅವರು ಅಧಿಕಾರವನ್ನು ಬಿಟ್ಟು ಹೊರಟು ಹೋಗುತ್ತಾರೆಂದು ನಾನು ಅಂದುಕೊಂಡಿದ್ದೆ. ಅವತ್ತು ಅವರು ದೆಹಲಿಯಲ್ಲಿದ್ದರು. ಮಂತ್ರಿಮಂಡಲ ರಾಜೀನಾಮೆ ಕೊಟ್ಟು, ಸಿಂಧ್ಯರವರನ್ನು ಮುಖ್ಯ ಮಂತ್ರಿಯನ್ನಾಗಿ ಮಾಡೇ ಬಿಟ್ಟಿರುತ್ತಾರೆಂದು ನಾನು ತಿಳಿದು ಕೊಂಡಿದ್ದೆ. ಇವತ್ತು ಇಲ್ಲಿ ಏನು ಹೇಳಿದ್ದಾರೆ ರಾಮರಾಜ್ಯವನ್ನು ಸ್ಥಾಪನೆ ಮಾಡುತ್ತೇವೆ, ಅಧಿಕಾರದ ವಿಕೇಂದ್ರೀಕರಣ ಮಾಡುತ್ತೇವೆ ಎಂದು ಅದನ್ನು ಮಾಡಿಲ್ಲ, ಲಾಟರಿ ಎಂದು ಮಾಡಿದ್ದೀರಿ, ಜೂಜು ಕೋರತನವನ್ನು ತಂದಿದ್ದೀರಿ, ಸಾರಾಯಿ ಬಾಟ್ಲಿಂಗ್ ಗುತ್ತಿಗೆ ಕೊಡತಕ್ಕಂಥದ್ದನ್ನು ಜಾರಿಗೆ ತಂದಿದ್ದೀರಿ. ಇವೆಲ್ಲಾ ಹೆಗಡೆಯವರ ಕೀರ್ತಿ. ಈ ದೇಶದಲ್ಲಿ ಆಡಳಿತವನ್ನು ನಡೆಸಿಕೊಂಡು ಬಂದು ಅದಕ್ಕೆ ಅನೇಕ ಕೇಡನ್ನು ಉಂಟು ಮಾಡತಕ್ಕಂಥಾ ಕೀರ್ತಿಯೆಲ್ಲಾ ಹೆಗ್ಗಡೆಗೆ ಸಲ್ಲತಕ್ಕಂಥಾದ್ದು. ಪ್ರಜಾ ಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕಂತಹವರು. ಅವರ ಹೆಸರಿನಲ್ಲಿ ಕಳಂಕ ಬರಬಾರದೆಂದು ನಂಬಿಕೆಯಿದ್ದಂತಹವರು. ನನಗೆ ಹೆಗಡೆಯವರ ಮೇಲೆ ಆಕ್ರೋಶವಿಲ್ಲ ನಾವೆಲ್ಲಾ ಸ್ನೇಹಿತರು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಒಂದು ರೀತಿ ವಿಷಾದ ಯುಗದಲ್ಲಿದ್ದಾರೆ

ಶ್ರೀ ಜಿ. ಮಾದೇಗೌಡ.—ದೇವೇಗೌಡರು ಚೆನ್ನಾಗಿದ್ದಾರೆಯೋ ಹೆಗ್ಗಡೆಯವರು ಚೆನ್ನಾಗಿದ್ದಾರೆಯೋ ? ಯಾವನಾದರೂ ಈ ದೇಶದಲ್ಲಿ ನೆಮ್ಮದಿಯಾಗಿದ್ದಾರೆಯೋ ? ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಇದ್ದರೂ ಅವನಿಗೂ. ಒಂದು ತರಹ ಕಿರುಕುಳ ಇರುತ್ತದೆ. ಮುಖ್ಯ ಮಂತ್ರಿಗಳಿಗೆ ಒಂದು ತರಹ ಕಿರುಕುಳ, ದೇವೇಗೌಡರಿಗೆ ಒಂದು ತರಹ ಕಿರುಕುಳ. ಏನೂ ಇಲ್ಲದೇ ಇರತಕ್ಕಂತಹವರಿಗೆ ಒಂದು ತರಹ ಕಿರುಕುಳ, ಯಾರೂ ಈ ದೇಶದಲ್ಲಿ ನೆಮ್ಮದಿಯಾಗಿಲ್ಲ.

೨-೩೦ ಪಿ. ಎಂ.

ಈ ರಾಜ್ಯದಲ್ಲಿ ಯಾರು ನೆಮ್ಮದಿಯಾಗಿದ್ದಾರೆಂದು ತಾವು ಒಬ್ಬರನ್ನು ತೋರಿಸಿ, ತಾವು ಗಾಂಧೀಜಿಯವರ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದಂಥ ಜನ, ಗಾಂಧೀಜಿಯವರು ಪಾನನಿರೋಧವನ್ನು ಜಾರಿಗೆ ತರಬೇಕು, ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕೆಂದು ಹೇಳಿದ್ದರು, ಅಧಿಕಾರ ವಿಕೇಂದ್ರೀಕರಣವಾಗಬೇಕು, ಗ್ರಾಮ ಕೈಗಾರಿಕೆಗಳು ಹೆಚ್ಚು ಹೆಚ್ಚು ಬೆಳೆಯಬೇಕು, ಪ್ರತಿಯೊಬ್ಬರೂ ಸುಖವಾಗಿರಬೇಕೆಂದು ಹೇಳಿದ್ದರು. ಅವರು ಬರೀ ಬಾಯಲ್ಲಿ ಹೇಳಿ ಹೋಗಲಿಲ್ಲ, ಹಳ್ಳಿ ಹಳ್ಳಿಗೆ ಭೇಟಿ ಕೊಟ್ಟು ಜನರನ್ನು ಖುದ್ದಾಗಿ ಕಂಡು, ಜನರ ಮಧ್ಯೆ ಬೆರೆತು ಮಾದರಿಯಾಗಿದ್ದರು. ನೀವೇನಾದರೂ ಹಳ್ಳಿಗಳಿಗೆ ಹೋಗಿದ್ದೀರಾ ? ಹಳ್ಳಿಗಳ ಕಷ್ಟ ನಿಮಗೆ ಗೊತ್ತಿದೆಯೆ ? ರಾಜ್ಯಪಾಲರ ಕೈಯಲ್ಲಿ ಈ ರೀತಿಯಾದಂಥ ಕಹಳೆ ಊದಿಸಿದ್ದೀರಿ ? ಇದರಲ್ಲಿ ನಿಮ್ಮ ನೀತಿಯಾಗಲೀ ಸಾಧನೆಯಾಗಲೀ, ಮುಂದೆ ಮಾಡಬೇಕಾದ ಕೆಲಸದ ಬಗ್ಗೆ ಏನೂ ಹೇಳಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ನನಗೆ ಪುನರ್ ಜನ್ಮ ಸಿಗುವುದಾದರೆ, ಅದು ಕರ್ನಾಟಕದಲ್ಲಿಯೇ ಸಿಗಲಿ ಎನ್ನುವ ಮಾತನ್ನು ಹೇಳಿದ್ದಾರೆ, ಅದಕ್ಕೆ ಪುಷ್ಟಿಕೊಡುವಂಥ ಯಾವ ವಿಷಯವೂ ಇದರಲ್ಲಿ ಇಲ್ಲವೆಂದೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಹಳ ಮುಖ್ಯವಾಗಿ ಒಂದು ಮಾತನ್ನು ಪ್ರಸ್ತಾಪ ಮಾಡಬೇಕಾಗಿದೆ, ಮಾನ್ಯ ಹೆಗಡೆಯವರು ಮತ್ತು ಅವರ ಮಂತ್ರಿ ಮಂಡಲದವರು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿದ್ದೇವೆ, ನಾವು ಪ್ರಜಾಪ್ರಭುತ್ವವಾದಿಗಳು, ಸಮತಾವಾದಿಗಳು, ದೇಶದಲ್ಲಿ ಬಡವರು ಬಲ್ಲಿದವರು ಎನ್ನುವ ಅಂತರ ಏನಿದೆ ಅದನ್ನು ನಿರ್ನಾಮ ಮಾಡುವುದಕ್ಕೆ ಪಣತೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಾನು ಉದಾಹರಣೆ ಸಹಿತವಾಗಿ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ಹತ್ತಿರ ಒಂದು ಪ್ರತಿ ಇದೆ ಅದನ್ನು ತಮಗೂ ಕಳುಹಿಸಿಕೊಡುತ್ತೇನೆ. ಅಧ್ಯಕ್ಷರವರಿಗೂ, ದೇವೇಗೌಡರಿಗೂ ಲಕ್ಷ್ಮೀಸಾಗರ್‌ರವರಿಗೂ ಕಳುಹಿಸಿಕೊಡುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಆ ಕಾರ್ಖಾನೆಯಲ್ಲಿ ತಮಿಳುನಾಡಿನ ಒಬ್ಬರು ಬಂಡವಾಳಷಾಹಿ ಮಹಾಲಿಂಗಂ ಎನ್ನುವಾರದ್ದು ೬೫,೦೦೦ ರೂಪಾಯಿ ಷೇರು ಇದೆ. ಸಕ್ಕರೆ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರದ್ದು ಒಂದು ಲಕ್ಷ ೭೫ ಸಾವಿರ ರೂಪಾಯಿ ಷೇರು ಇದೆ, ಇದಕ್ಕೆ ಇವರು ಪಾರ್ಟನರ್ ಆಗಿದ್ದಾರೆ. ೨೪ ಲಕ್ಷ ರೂಪಾಯಿಗಳು ಶಕ್ತಿ ಷೇರು ಇದೆ. ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಗೆ ಸೇರಿದ ವಿಷಯ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಇದ್ದಾಗಲೇ ಸಮಸ್ಯೆ ಬಗೆಹರಿಸಬಹುದಿತ್ತು.

ಶ್ರೀ ಜಿ. ಮಾದೇಗೌಡ.—ಈಗ ನಿಮಗೂ ಸಮಸ್ಯೆ ಏನೂ ಇಲ್ಲ. ೭೫ ಲಕ್ಷ ರೂಪಾಯಿಗಳು ಮಂಡ್ಯ ರೈತರ ಷೇರು ಇದೆ, ಸೆಂಟ್ರಲ್ ಗೌರ್ನಮೆಂಟ್ ಫೈನಾನ್ಸ್ ಇನ್‌ಸ್ಟಿಟ್ಯೂಟ್‌ಗಳಿಂದ ೪೭ ಲಕ್ಷ ರೂಪಾಯಿಗಳು ಷೇರು ಇದೆ, ಸ್ಟೇಟ್ ಗೌರ್ನಮೆಂಟ್ ಫೈನಾನ್ಸ್ ಇನ್‌ಸ್ಟಿಟ್ಯೂಷನ್‌ಗಳಿಂದ ೧.೮ ಲಕ್ಷ ರೂಪಾಯಿ ಷೇರು ಇದೆ. ಈ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇವೆ ಕೈಗಾರಿಕಾ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಇವತ್ತು ೬೫ ಸಾವಿರ ರೂಪಾಯಿ ಷೇರು ಇರತಕ್ಕ ಒಬ್ಬ ಬಂಡವಾಳ ಷಾಹಿ ತಮಿಳುನಾಡಿನಿಂದ ಬಂದಂಥ ವ್ಯಕ್ತಿ ರಾಜ್ಯಭಾರ ಮಾಡಬೇಕೆ ? ಆಡಳಿತ ನಡೆಸಬೇಕೆ ? ಚಾಮುಂಡೇಶ್ವರಿ ಸಕ್ಕರೆ ಕಂಪನಿಯಲ್ಲಿ ಸುಮಾರು ೬೭ ಲಕ್ಷ ರೂಪಾಯಿ ಷೇರು ಇರತಕ್ಕ ರೈತರು ಆಡಳಿತ ನಡೆಸಬೇಕೆ ? ಅಥವಾ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಷೇರು ಇರತಕ್ಕವರು ಆಡಳಿತ ನಡೆಸಬೇಕೆ ? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಇವತ್ತು ೬೫ ಸಾವಿರ ರೂಪಾಯಿ ಷೇರು ಇರತಕ್ಕ ಬಂಡವಾಳ ಷಾಹಿಯೊಬ್ಬರು ದರ್ಬಾರು ಮಾಡುತ್ತಿದ್ದಾರೆ. ಒಬ್ಬೊಬ್ಬರಿಗೆ ಒಂದು ರೀತಿಯಲ್ಲಿ ಹಣ ಕೊಡುತ್ತಿದ್ದಾರೆ ಇಂಡಿಯಾದಲ್ಲಿಯೇ ಅಲ್ಲ ಇಡೀ ಪ್ರಪಂಚದಲ್ಲಿಯೇ

ಸಕ್ಕರೆ ಮಾರಾಟ ಮಾಡುವುದನ್ನು ಎಲ್ಲಾದರೂ ಕೇಳಿದ್ದೀರಾ ? ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿ ೧೫ ವರ್ಷಗಳಾಗಿದೆ, ಇವತ್ತಿಗೂ ಕೂಡ ಟೆಂಡರ್ ಕರೆದಿಲ್ಲ, ೫೦೦ ರೂಪಾಯಿಗಳಿಗೆ ಮಾರಾಟ ಮಾಡಿದರೆ ೪೦೦ ರೂಪಾಯಿ ಎಂದು ಬರೆದುಕೊಳ್ಳುತ್ತಾರೆ. ಲಕ್ಷಾಂತರ ರೂಪಾಯಿ ಯಂತ್ರಗಳನ್ನು ಕೊಂಡುಕೊಂಡಿದ್ದಾರೆ, ಅದಕ್ಕೆ ಟೆಂಡರ್ ಕರೆದಿಲ್ಲ. ಇಡೀ ಆಡಳಿತ ಮಂಡಲಿಯಲ್ಲಿ ತಮಿಳುನಾಡಿನವರೇ ಇದ್ದಾರೆ. ಬೋರ್ಡಿನಲ್ಲಿ ಫೈನಾನ್ಸ್ ಇನ್‌ಸ್ಟಿಟ್ಯೂಷನ್‌ನಿಂದ ಬಂದಂಥ ಅಧಿಕಾರಿಗಳ ಮಾತನ್ನು ಕೇಳುತ್ತಿಲ್ಲ, ಅವರನ್ನು ಕೊಂಡುಕೊಂಡಿದ್ದಾರೆ. ಕಾಳಮುದ್ದನ ದೊಡ್ಡಿಯಲ್ಲಿರತಕ್ಕ ಎಲ್ಲಾ ಪ್ರಜಾ ಪ್ರತಿನಿಧಿಗಳನ್ನು ನಮ್ಮೆಲ್ಲರನ್ನೂ ಕೊಂಡುಕೊಂಡಿದ್ದಾರೆ. ಸ್ವಾಮಿ, ನನಗೆ ಅನುಭವವಾಗಿದೆ, ಹೆಣ್ಣು, ಹೆಂಡ, ಹಣ ಈ ಮೂರು ಅಧಿಕಾರಕ್ಕೆ ಬರಬೇಕಾದರೆ ಬಳಸಿಕೊಳ್ಳುತ್ತಾರೆಂದು ಚರಿತ್ರೆಯಲ್ಲಿ ಕೇಳಿದ್ದೆ, ಇವತ್ತಿನ ದಿವಸ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ವ್ಯವಹಾರವನ್ನು ನೋಡಿದ ಮೇಲೆ ಇದೆಲ್ಲವೂ ಸತ್ಯ ಎನ್ನುವಂಥ ತೀರ್ಮಾನಕ್ಕೆ ಬಂದಿದ್ದೇನೆ, ಪ್ರಜಾಪ್ರಭುತ್ವದಲ್ಲಿಯೂ ಇದು ನಡೆಯುತ್ತಿದೆ ಎನ್ನುವುದನ್ನು ನೋಡಿದ್ದೇನೆ. ಇದು ಪ್ರಜಾಸತ್ತಾತ್ಮಕವಾದಂಥ ಸಂಸ್ಥೆ.

ಶ್ರೀ ಆರ್. ಎಲ್. ಜಾಲಪ್ಪ.—ಇದು ಕಂಪನಿ.

ಶ್ರೀ ಜಿ. ಮಾದೇಗೌಡ.—ಸ್ವಾಮಿ, ತಾವು ಬೈಲಾ ತರಿಸಿಕೊಡಿ. ಪ್ರತಿವರ್ಷ ಸರ್ವಸದಸ್ಯರ ಸಭೆ ನಡೆಯುತ್ತಿದೆ. ಮೂರನೇ ಒಂದು ಭಾಗದಷ್ಟು ಡೈರೆಕ್ಟರುಗಳು ನಿವೃತ್ತಿ ಹೊಂದುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಕಂಪನಿ ಲಾ ಪ್ರಕಾರ ಮಾಡುತ್ತಿದ್ದಾರೆ.

ಶ್ರೀ ಜಿ. ಮಾದೇಗೌಡ.—ರಾಜ್ಯ ಸರ್ಕಾರದವರ ಷೇರು ಇದೆ, ಕೇಂದ್ರ ಸರ್ಕಾರದ ಷೇರು ಇದೆ. ರೈತರ ಷೇರು ಇದೆ, ಇಷ್ಟೆಲ್ಲಾ ಇದ್ದು ೭೫,೦೦೦ ಷೇರು ಇರತಕ್ಕ ಒಬ್ಬ ವ್ಯಕ್ತಿ ಮನಸ್ವೇಚ್ಛೆ ಆಡಳಿತ ನಡೆಸುವುದಕ್ಕೆ ಅವಕಾಶ ಕೊಟ್ಟಿರುವುದು ಸರಿಯೆ ? ಸರ್ಕಾರ ಆತನಿಗೆ ಏತಕ್ಕೆ ಸಪೋರ್ಟ್ ಮಾಡಬೇಕು. ಸರ್ಕಾರದ ಓಟುಗಳು, ಹಣಕಾಸಿನ ಸಂಸ್ಥೆಯವರ ಓಟುಗಳು ಎಲ್ಲವನ್ನೂ ಪೂಲ್ ಮಾಡಿಕೊಂಡು ಇಟ್ಟುಕೊಂಡಿದ್ದಾರೆ.

ಉಪಾಧ್ಯಕ್ಷರು.— ಮಾನ್ಯ ಸದಸ್ಯರಾದ ಮಾದೇಗೌಡರೆ, ತಾವು ಐದು ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಜಿ. ಮಾದೇಗೌಡ.— ಆಯಿತು ಮುಗಿಸುತ್ತೇನೆ. ನಾನು ಕಳೆದ ಸಾರಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಕೈಗಾರಿಕಾ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ ಕೈಗಾರಿಕಾ ಮಂತ್ರಿಗಳು ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಕೈಗಾರಿಕಾ ಮಂತ್ರಿಗಳು 'ಕೇಂದ್ರಸರ್ಕಾರದ ನೀತಿ ಮತ್ತು ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಕೆ. ಎಂ ದೊಡ್ಡಿಯ ಸಕ್ಕರೆ ಕಾರ್ಖಾನೆಯ ವಿಷಯದಲ್ಲಿ ಮಾರ್ಪಾಡನ್ನು ಸೂಕ್ತ ರೀತಿಯಲ್ಲಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು' ಎಂದು ಬರೆದಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಮೆಜಾರಿಟಿ ಜನ ಇದ್ದಾರೆ ಅವರಿಗೆ ನೇರವಾಗಿ ಆಡಳಿತ ಹೋಗುತ್ತದೆ. ಇವತ್ತು ಇಲ್ಲಿ ಮಾನ್ಯ ಹೆಗಡೆಯವರಿಗೆ ಬಹುಮತವಿರುವುದರಿಂದ ಅವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರನ್ನು ಈ ಸ್ಥಾನವನ್ನು ಬಿಡಿ ಅಂದರೆ ಆಗುತ್ತದೆಯೆ ? ನಾನು ಜನಗಳನ್ನು ಕರೆದುಕೊಂಡು ಬರುತ್ತೇನೆ, ಹಾಗಾದರೆ ನಾನು ಇಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶ ಕೊಡುತ್ತೀರಾ ? ಅದು ಆಗುವುದಿಲ್ಲ. These are all democratic Institutions. ಈ ವರ್ಷ ಜನರಲ್‌ಬಾಡಿ ಮೀಟಿಂಗ್ ಆಗಿ ಆಮೇಲೆ ಎಲೆಕ್ಷನ್ ಆಗುತ್ತದೆ. ಪ್ರಜಾಪ್ರಭುತ್ವದ ಪದ್ಧತಿ ಪ್ರಕಾರ ಚುನಾವಣೆಯಲ್ಲಿ ಯಾರು ಜಾಸ್ತಿ ಓಟು ತೆಗೆದುಕೊಳ್ಳುತ್ತಾರೆ ಅವರು ಚುನಾವಣೆಯಲ್ಲಿ ಗೆಲ್ಲುತ್ತಾರೆ, ಬೋರ್ಡ್‌ನಲ್ಲಿ ಯಾರದು ಮೆಜಾರಿಟಿ ಇರುತ್ತದೆ ಅವರು ಛೇರ್ಮನ್ ಆಗುತ್ತಾರೆ. ಆಮೇಲೆ ಅವರು ಆಡಳಿತ ನಡೆಸುತ್ತಾರೆ. ನಾನು ಈ ಬಗ್ಗೆ ಹಿಂದೆ ಪ್ರಸ್ತಾಪ ಮಾಡಿದಾಗ ಮಾನ್ಯ ಜೆ. ಎಚ್. ಪಟೇಲ್‌ರವರು ಉತ್ತರ ಹೇಳಿದ್ದಾರೆ. ರೈತರ ಪ್ರತಿನಿಧಿಗಳು ಕಾರ್ಖಾನೆಯ ಆಡಳಿತಕ್ಕೆ ಹೋದಾಗ, ಸರ್ಕಾರದ ಡೈರೆಕ್ಟರುಗಳು ಒಳ್ಳೆಯ ರೀತಿ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ನಾನು ಆ ತತ್ವವನ್ನು ಒಪ್ಪಿಕೊಳ್ಳುತ್ತೇನೆ. ಯಾರು ಮೆಜಾರಿಟಿ ಇರುತ್ತಾರೆ ಅವರು ಡೈರೆಕ್ಟರು ಆಗಬೇಕೆನ್ನುವ ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಹೇಗೆ ಮಾಡಬೇಕು ? ಯಾವಾಗ ಮಾಡಬೇಕು ?

ಎನ್ನತಕ್ಕದ್ದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಹಾಗಾದರೆ ಯಾರುಮಾಡಬೇಕು? ಯಾವಾಗಮಾಡಬೇಕು? ಅದಕ್ಕೆ ನಾನು ಹೇಳುತ್ತೇನೆ. ಅದರಲ್ಲಿ ರೈತರ ಷೇರು ಇದೆ ಕೇಂದ್ರಸರ್ಕಾರದ ಷೇರು ಇದೆ. ಜನರಲ್ ಬಾಡಿ ಮೀಟಿಂಗ್ ಆದಮೇಲೆ ಬೋರ್ಡ್‌ನಲ್ಲಿ ಮೆಜಾರಿಟಿಯಾರಿಗೆ ಇರುತ್ತದೆ ಅವರಿಗೆ ಅಧಿಕಾರ ಕೊಡಿ. ನೀವು ಆ ರೀತಿ ಮಾಡದಿದ್ದರೆ ಅವರೆಲ್ಲ ಬಿಟ್ಟು ಹೋಗುತ್ತಾರೆ. ಮಹಾಲಿಂಗಂ ಏನುಮಾಡುತ್ತಾನೆ ಅಂದರೆ ನಿಮ್ಮ ಹತ್ತಿರಕ್ಕೆ ಮದ್ರಾಸ್‌ನಿಂದ ಪ್ರೆಸಿಡೆಂಟ್ ಕರೆದುಕೊಂಡು ಬರುತ್ತಾನೆ. ನಿಮ್ಮ ಹತ್ತಿರ ಬಂದು ಏನು ಹೇಳುತ್ತಾನೆಂದರೆ ನಾನು ಜನತಾಪಾರ್ಟಿ ನನಗೆ ಸಹಾಯ ಮಾಡಿಯೆಂದು ಹೇಳುತ್ತಾನೆ. ನಿಮಗೆ ನಾನಾ ತರಹ ಸಹಾಯ ಮಾಡುತ್ತಾನೆ ನಾನು ಕಣ್ಣಾರೆ ನೋಡಿದ್ದೇನೆ. ಇಲ್ಲಿ ಜನತಾ ಪಾರ್ಟಿಯೆಂದು ಹೇಳುತ್ತಾನೆ. ಕೇಂದ್ರದಲ್ಲಿ ಮೂಪನಾರ್ ಮತ್ತು ವೆಂಕಟರಾಮ್ ಅವರ ಹತ್ತಿರ ಹೋಗಿ ನಾನು ಕಾಂಗ್ರೆಸ್ ಎಂದು ಹೇಳುತ್ತಾನೆ.

ಶ್ರೀ ಎಚ್. ಡಿ. ದೇವೇಗೌಡ.— ನಾನು ಅದನ್ನೇ ಹೇಳಿದ್ದು, ಹಳೆಯ ಆದೇಶದ ಪ್ರಕಾರ ನಾವು ನಡೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಜಿ. ಮಾದೇಗೌಡ.— ಅದಕ್ಕಾಗಿಯೇ ನಾನು ಹೇಳುವುದು, ಈ ಗೊಂದಲದಲ್ಲಿ ಕೊನೆಗೆ ಬಲಿಪಶು ಆಗತಕ್ಕವರು ಅಲ್ಲಿಯ ಜನರು. ಕೇಂದ್ರಸರ್ಕಾರ ಮತ್ತು ನಿಮ್ಮ ಸರ್ಕಾರದ ತೀರ್ಮಾನಗಳಿಂದ ಬಲಿಪಶು ಆಗತಕ್ಕ ನಿಮ್ಮ ಶೋಷಣೆಗೆ ಒಳಗಾಗತಕ್ಕ ರೈತರನ್ನು ಯಾವಾಗ ಶೋಷಣೆಯಿಂದ ವಿಮುಕ್ತರನ್ನಾಗಿ ಮಾಡುತ್ತೀರಿ ? ನೀವು ಕಾನೂನಿಗೆ ವಿರುದ್ಧವಾಗಿ ಹೋಗುತ್ತಿದ್ದೀರಿ. ಅಧಿಕಾರ ದುರುಪಯೋಗ ಮಾಡುತ್ತಿದ್ದೀರಿ ಎಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು ನನಗೆ ಯಾರ ದಾಕ್ಷಿಣ್ಯವೂ ಬೇಕಾಗಿಲ್ಲ. ನೀವು ಕಾನೂನಿಗೆ ಬದ್ಧವಾಗಿ ಹೋಗಬೇಕು. ಪ್ರಜಾಪ್ರಭುತ್ವದ ತತ್ವಕ್ಕನುಗುಣವಾಗಿ ಹೋಗಬೇಕು. ಶಾಸನಸಭೆಯಲ್ಲಿ ಏನು ಹೇಳಿದ್ದೀರಿ ಅದರಂತೆ ನೀವು ಹೋಗಬೇಕು. ಆ ರೀತಿ ನೀವು ನಡೆಯದಿದ್ದರೆ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಂಡ್ಯ ಜಿಲ್ಲೆಯಲ್ಲಿ ಇಂತಹ ಅನ್ಯಾಯಗಳು ಆದಾಗ ಯಾವತ್ತೂ ಬಾಯಿಮುಚ್ಚಿಕೊಂಡು ಮಂಡ್ಯದ ಜನತೆ ಕುಳಿತಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಮಿರ್ಜಾ ಸಾಹೇಬರು ವಾಟರ್‌ರೇಟನ್ನು ಜಾಸ್ತಿ ಮಾಡಿದಾಗ ಅವರನ್ನು ಮುತ್ತಿಗೆ ಹಾಕಿ ವಾಟರ್ ರೇಟನ್ನು ಕಡಿಮೆ ಮಾಡಿಸಲಿಕ್ಕೆ ಚಳುವಳಿ ಮಾಡಿದಂತಹ ಜನ ಇವರು. ವರುಣಾ ನಾಲೆಯನ್ನು ಮಾಡುವಾಗ ನಮಗೆ ಅನ್ಯಾಯವಾಗಬಾರದೆಂದು ನ್ಯಾಯವನ್ನು ಸಂಪಾದನೆ ಮಾಡಿದಂತಹ ಜನ ಇವರು. ಇವತ್ತು ನೀವು ಅವರಿಗೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ ಸರಿ ಮಾಡದಿದ್ದರೆ ಮಂಡ್ಯ ಜಿಲ್ಲೆಯಲ್ಲಿ ಯಾವ ಮಂತ್ರಿಯೂ ಬಾವುಟ ಹಾಕಿಕೊಂಡು ಕಾರಿನಲ್ಲಿ ಓಡಾಡುವುದಕ್ಕೆ ಬಿಡುವುದಿಲ್ಲ, ಚಳುವಳಿ ಮಾಡುತ್ತೇವೆ ಎನ್ನುವ ಎಚ್ಚರಿಕೆಯ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಹೇಡಿಗಳಲ್ಲ, ನಮಗೆ ಯಾರ ದಾಕ್ಷಿಣ್ಯವೂ ಬೇಕಾಗಿಲ್ಲ. ನಾವು ನಿಮ್ಮ ಹತ್ತಿರ ಭಿಕ್ಷೆ ಕೇಳುವುದಿಲ್ಲ. ಪ್ರಜಾಪ್ರಭುತ್ವವನ್ನು ಹೇಳತಕ್ಕ ಜನ ಪ್ರಜಾ ಪ್ರಭುತ್ವ ತತ್ವಕ್ಕನುಗುಣವಾಗಿ ನಡೆದುಕೊಳ್ಳಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ತಾವು ಯಾವುದೇ ದಾಕ್ಷಿಣ್ಯಕ್ಕಾಗಲಿ ಒಳಗಾಗಬೇಡಿ. ನಾನು ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನಾನು ಕೆಲವು ಸಂದರ್ಭಗಳಲ್ಲಿ ಸಹಾಯ ಮಾಡಿದ್ದೇನೆ. ನಮ್ಮ ಜಾತಿಯವನು ಎಂದು ಸಹಾಯ ಮಾಡಿದ್ದೇನೆ. ನಮ್ಮ ಪಕ್ಷದವನು ಎಂದು ಸಹಾಯ ಮಾಡುತ್ತೇವೆ. ನಮ್ಮ ನೆಂಟರಿದ್ದರೆ ಅವರಿಗೂ ಸಹಾಯ ಮಾಡುತ್ತೇವೆ. ನಾನು ಕೇಳುತ್ತಿದ್ದೇನೆ ನೀವು ಏತಕ್ಕೋಸ್ಕರ ಸಹಾಯ ಮಾಡುತ್ತಿದ್ದೀರಿ ? ಅವನು ನಿಮಗೆ ಏನು ಕೊಟ್ಟಿದ್ದಾನೆ ? ಮಹಾಲಿಂಗಂ ಎಂಬುವನು ನಿಮ್ಮ ಜಾತಿಯವನಾ ? ನೀವು ಹಣ ತೆಗೆದುಕೊಂಡು ಆ ರೀತಿ ಮಾಡುತ್ತಿದ್ದೀರಾ ಎಂದು ಕೇಳಬೇಕಾಗಿದೆ. ಇದಾವುದಕ್ಕೂ ಅವಕಾಶ ಕೊಡದೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸ್ಥೆ ನಡೆಯಬೇಕು. ಪ್ರಜಾಪ್ರಭುತ್ವ ಮೌಲ್ಯ, ಮೌಲ್ಯಾಧಾರಿತ ರಾಜಕೀಯ ಮಾಡುತ್ತೇವೆಂದು ನೀವೇ ಹೇಳುತ್ತೀರಿ, ನಿಮ್ಮ ಮಾತಿಗೆ ಮನ್ನಣೆ ಕೊಟ್ಟು ಅದರಂತೆ ಏತಕ್ಕೆ ನಡೆದುಕೊಳ್ಳಬಾರದು. ನೀವು ನಿಮ್ಮ ಮಾತಿಗೆ ಮನ್ನಣೆ ಕೊಡುವುದಾದರೆ ಮುಂದಿನ ಮಾರ್ಚಿಯಲ್ಲಿ ಜನರಲ್ ಬಾಡಿ ಆಗುತ್ತದೆ ನೀವು ಜನರ ಜೊತೆಯಲ್ಲಿರಬೇಕು ಎನ್ನುವ ಆಶ್ವಾಸನೆಯನ್ನು ನಾನು ನಿರೀಕ್ಷಣೆ ಮಾಡುತ್ತೇನೆ. ಕೇಂದ್ರಸರ್ಕಾರ ಏನು ಮಾಡುತ್ತಿದೆ ಅದನ್ನು ನಾನು ಕೇಳುವುದಕ್ಕೆ ತಯಾರಾಗಿಲ್ಲ. ನಾನು ಕಾಗದ ಬರೆದಿದ್ದೇನೆ, ಭೇಟಿ ಮಾಡಿದ್ದೇನೆ. ನಾನು ವಿಧಾನಸಭೆಯಲ್ಲಿ ಹೇಳುವ ರೀತಿಯಲ್ಲಿ

ಅಲ್ಲಿ ಹೋಗಿ ಮಾತನಾಡಲಿಕ್ಕೆ ಆಗುವುದಿಲ್ಲ. ನಾನು ಈ ಸದನದ ಮೂಲಕವೇ ಹೇಳುತ್ತಿದ್ದೇನೆ. ಇದು ರೈತರ ಪ್ರಶ್ನೆ, ರೈತರಿಗೆ ಧಕ್ಕೆಯಾದರೆ ನಾನು ಪಕ್ಷ ನೋಡುವುದಿಲ್ಲ. ಪಕ್ಷಕ್ಕೆ ವಿರುದ್ಧವಾಗಿ ಕೆಲಸ ಮಾಡುವುದಕ್ಕೆ ತಯಾರಾಗಿದ್ದೇನೆ ಎನ್ನುವ ಎಚ್ಚರಿಕೆಯನ್ನು ಕೇಂದ್ರ ಸರ್ಕಾರಕ್ಕೆ ಕೊಡುತ್ತಿದ್ದೇನೆ. ಬಂಡವಾಳಶಾಹಿಗಳಿಗೆ ಮಾರುವುದು ಬೇಡ. ನಿಮಗೂ ಎಚ್ಚರಿಕೆ ಕೊಡುತ್ತಿದ್ದೇನೆ. ಇದು ರೈತರ ಸಮಸ್ಯೆ ಇದನ್ನು ಅರ್ಥಮಾಡಿಕೊಂಡು ಬಗೆಹರಿಸಬೇಕು. ನಾಳೆ ನೀವು ಮಂಡ್ಯ ಜಿಲ್ಲೆಯಲ್ಲಿ ಬಾವುಟ ಹಾರಿಸಿಕೊಂಡು ಓಡಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಚಳವಳಿಯನ್ನು ಮಾಡುವುದಕ್ಕೆ ಅವಕಾಶ ಕೊಡಬೇಡಿ. ನಮಗೆ ಚಳವಳಿಮಾಡಿ ಅಭ್ಯಾಸವಿದೆ ಎಂದು ಹೇಳಿ ತಮಗೆ ವೇದಿಸಿ ನನ್ನ ಮಾತುಗಳನ್ನು ಮುಗಿಸುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ. —ಅವರು ಏನು ಹೇಳಿದ್ದಾರೆಂದರೆ ಸರ್ಕಾರದ ಅಭಿಪ್ರಾಯ ಭೇದವೆಂದು ಭಾವಿಸಿ ರೈತರ ಪರವಾಗಿ ತಾಲ್ಲೂಕಿನ ಪರವಾಗಿ ವಿಶ್ಲೇಷಣೆ ಮಾಡಿದರು. ವಿವರಣೆಯನ್ನು ಕೊಡುತ್ತಾ ಜಾತಿಯ ಬಗ್ಗೆ ಕೂಡ ಹೇಳಿದರು. ಮಹಾಲಿಂಗಂ ಅವರಿಗೆ ತಿರುಗಿ ಬಿದ್ದಿರುವವನು ಒಕ್ಕಲಿಗ ಜಾತಿಯವನು. ಅವರೆಲ್ಲಾ ಒಂದೇ ಕಡೆ ಇದ್ದರು, ಮಹಾಲಿಂಗಂ ಅವರಿಗೆ ತಿರುಗಿ ಬಿದ್ದಿರುವವ ಚಂದಪ್ಪ ಎಂಬುವನು ನಿಮ್ಮ ಸ್ನೇಹಿತರು, ಈಗ ನಿಮ್ಮನ್ನು ಬಿಟ್ಟಿರಬಹುದು ಬೇರೆ ಅಪಾರ್ಥದಿಂದ ನಾನು ಹೇಳುವುದಿಲ್ಲ. ಈಗ ಅವರೇ ತಿರುಗಿ ಬಿದ್ದಿದ್ದಾರೆ. ದೊಡ್ಡ ರಾಜಕೀಯವೇ ಇದೆ. ನಿಮಗೆ ನಾನು ಸಪ್ಪೋರ್ಟ್ ಮಾಡುತ್ತಿದ್ದೇನೆ, ಇದರಲ್ಲಿ ಪಕ್ಷ ಉಳಿದಿಲ್ಲ. ಚಂದಪ್ಪ ನನಗೆ ನೆಂಟ ಅಲ್ಲ, ನಮ್ಮ ಜಾತಿಯವನು. ಅವನ ಪರವಾಗಿ ಕೆಲಸ ಮಾಡುವುದಕ್ಕೆ ನಾವು ಸಿದ್ಧರಿಲ್ಲ. ಮದ್ದೂರಿನಲ್ಲಿ ಉಪ ಚುನಾವಣೆಯಾಯಿತು. ಆಗ ನಾವು ಹಣ ತೆಗೆದುಕೊಂಡಿಲ್ಲ. ಆಗ ನಾನು ಪಕ್ಷದ ಅಧ್ಯಕ್ಷನಾಗಿದ್ದೆ, ಹಣ ತೆಗೆದುಕೊಳ್ಳುವುದಿಲ್ಲವೆಂದು ನಾನು ನೇರವಾಗಿ ಹೇಳಿದ್ದೇನೆ. ನಾನು ಯಾವ ದಾಕ್ಷಿಣ್ಯಕ್ಕೂ ಒಳಗಾಗಿಲ್ಲ. ಮಾನ್ಯ ಮಾದೇಗೌಡರು ಹೇಳಿದಹಾಗೆ ನಮ್ಮ ಕಡೆ ಬಂದಾಗ ನಮ್ಮ ಪಕ್ಷ ಎಂದು ಹೇಳುತ್ತಾರೆ, ಅಲ್ಲಿ ಹೋದರೆ ಕಾಂಗ್ರೆಸ್ ಎಂದು ಹೇಳುತ್ತಾರೆ. ಅವರಿಗೆ ರಾಜಕೀಯ ಪ್ರಭಾವ ಇದೆ. ಅಲ್ಲಿ ಒಂದು ತರಹ ಇರುತ್ತಾರೆ, ಇಲ್ಲಿ ಒಂದು ತರಹ ಇರುತ್ತಾರೆ ಅದನ್ನು ಒಪ್ಪಿಕೊಳ್ಳಬಹುದು. ಆದರೆ ಇಷ್ಟು ಹೇಳುತ್ತೇನೆ. ರೈತರಿಗೆ ಅಪಾಯವಾಗದ ರೀತಿಯಲ್ಲಿ ನಿರ್ಣಯವನ್ನು ಸರ್ಕಾರ ಕೈಗೊಳ್ಳಬೇಕು. ಮಾನ್ಯ ಕೈಗಾರಿಕಾ ಸಚಿವರು ಅದರ ಬಗ್ಗೆ ನಾಳೆ ಉತ್ತರ ಕೊಡುತ್ತಾರೆ.

ನಿಯಮ 334ರ ಮೇರೆಗೆ

ಭದ್ರಾ ಜಲಾಶಯದಿಂದ ಅಚ್ಚುಕಟ್ಟುದಾರರಿಗೆ ನೀರನ್ನೊದಗಿಸುವುದು.

ಶ್ರೀ ಕೆ. ಎಚ್. ಶ್ರೀನಿವಾಸ್. —ನಿಯಮ ೩೩೪ರ ಕೆಳಗೆ ಒಂದು ವಿಷಯವನ್ನು ನಾನು ಪ್ರಸ್ತಾಪ ಬೆಳಿಗ್ಗೆ ಮಾಡಬೇಕಾಗಿತ್ತು. ಅದನ್ನು ಈಗ ತಮ್ಮ ಅನುಮತಿಯನ್ನು ಪಡೆದು ಪ್ರಸ್ತಾಪ ಮಾಡುತ್ತಿದ್ದೇನೆ. ಭದ್ರಾ ಯೋಜನೆಯ ಅಚ್ಚುಕಟ್ಟಿನಿಂದ ಈ ಬಾರಿ ಬೇಸಿಗೆ ಬೆಳೆಗೆ ನೀರನ್ನು ಒದಗಿಸುವ ವಿಚಾರದಲ್ಲಿ ರೈತರ ಹಾಗೂ ಕಾಡಾ ಅಧ್ಯಕ್ಷರು ಅಧಿಕಾರಿಗಳ ಮಧ್ಯೆ ವಿವಾದ ಉಂಟಾಗಿದ್ದು. ರೈತರು ಲಕ್ಕವಳ್ಳಿಗೆ ಜಾತಾ ಹೋಗಿ ಪ್ರತಿಭಟನೆ ನಡೆಸಿದ ವಿಚಾರದಲ್ಲಿ ಹಿಂದೆ ನೀರಾವರಿ ಸಚಿವರ ಗಮನ ಸೆಳೆದಾಗ ಅವರು ಭದ್ರಾ ಸಲಹಾ ಸಮಿತಿಯ ಸಭೆಯನ್ನು ಬೆಂಗಳೂರಿನಲ್ಲಿ ತಮ್ಮ ಸಮ್ಮುಖದಲ್ಲೇ ತುರ್ತಾಗಿ ಕರೆಯುವುದಾಗಿ ಭರವಸೆ ನೀಡಿದ್ದು, ಸದರಿ ಸಭೆಯನ್ನು ದಿನಾಂಕ ೪–೨–೧೯೮೦ರಂದು ಸಂಜೆ ಕರೆದು ಸುಮಾರು ೪ ತಾಸುಗಳ ಕಾಲ ಸುದೀರ್ಘವಾಗಿ ಸಂಬಂಧಿಸಿದ ಎಲ್ಲರ ಅಭಿಪ್ರಾಯಗಳನ್ನು ಕೇಳಿ ಚರ್ಚಿಸಿರುವುದಕ್ಕಾಗಿ ಅವರಿಗೆ ಕೃತಜ್ಞನಾಗಿದ್ದೇನೆ. ನಿನ್ನೆ ದಿನದ ಸಭೆಯಲ್ಲಿ ಚರ್ಚೆಯ ನಂತರ ಒಂದು ಹೇಳಿಕೆಯ ಮೂಲಕ ಮಾನ್ಯ ನೀರಾವರಿ ಸಚಿವರೇ ಅಂತಿಮ ತೀರ್ಮಾನವನ್ನು ಪ್ರಕಟಿಸಬೇಕೆಂದು. ಹಾಗೂ ಬೇರೆ ಯಾರೂ ಈ ಬಗ್ಗೆ ಹೇಳಿಕೆ ನೀಡಿಗೊಂದಲಕ್ಕೆ ಅವಕಾಶ ಮಾಡಬಾರದೆಂದೂ, ಸರ್ವಸಮ್ಮತದಿಂದ ಒಪ್ಪಿಗೆಯಾಗಿರುತ್ತದೆ. ವಿಚಾರವು ತುರ್ತು ಸ್ವರೂಪದ್ದಾಗಿದ್ದು, ಬೇಸಿಗೆ ಬೆಳೆಗೆ ನೀರನ್ನು ಯಾವ ಕ್ರಮದಲ್ಲಿ ಬಿಡುಗಡೆ ಮಾಡಲಾಗುವುದೆಂಬುದು ರೈತರ ಅಳಿವು ಉಳಿವಿನ ಪ್ರಶ್ನೆಯಾಗಿರುವುದರಿಂದ ಮಾನ್ಯ ನೀರಾವರಿ ಸಚಿವರು ತಮ್ಮ ನಿರ್ಧಾರವನ್ನು ತಕ್ಷಣ ಪ್ರಕಟಿಸಬೇಕೆಂದು ಒತ್ತಾಯಿಸುತ್ತೇನೆ.